ಸೂ. 206 — 7. ಅಲ್ ಅಅ್‌ರಾಫ್ — ರು. 24

آياتها ٢٠٦ — سُورَةُ الْأَعْرَافِ مَكِّيَّةٌ — رُكُوعَاتُهَا ٢٤

(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ ○

1. ಅಲಿಫ್ ಲಾಮ್ಮೀಮ್ ಸ್ವಾದ್.

الٓمّٓصٓ ①

2. ಇದು ನಿಮ್ಮ ಮೇಲೆ ಅವತೀರ್ಣಗೊಳಿಸಲ್ಪಟ್ಟಿರುವ ಗ್ರಂಥ. ಆದುದರಿಂದ ಓ ಮುಹಮ್ಮದ್‌ರೇ, ಇದರಿಂದ ನಿಮ್ಮ ಹೃದಯದಲ್ಲಿ ಅಳುಕುಂಟಾಗದಿರಲಿ.[1] ಇದನ್ನು ಅವತೀರ್ಣಗೊಳಿಸುವ ಉದ್ದೇಶವು ನೀವು ಇದರ ಮೂಲಕ (ನಿಷೇಧಿಗಳಿಗೆ) ಎಚ್ಚರಿಕೆ ನೀಡಬೇಕು ಮತ್ತು ವಿಶ್ವಾಸಿಗಳಿಗೆ ಉಪದೇಶ ನೀಡಬೇಕು ಎಂಬುದಾಗಿರುತ್ತದೆ.

كِتٰبٌ اُنْزِلَ اِلَيْكَ فَلَا يَكُنْ فِيْ صَدْرِكَ حَرَجٌ مِّنْهُ لِتُنْذِرَ بِهٖ وَذِكْرٰى لِلْمُؤْمِنِيْنَ ②

3. ಹೇ ಜನರೇ, ನಿಮ್ಮ ಪ್ರಭುವಿನ ಕಡೆಯಿಂದ ಅವತೀರ್ಣಗೊಳಿಸಲ್ಪಟ್ಟಿರುವುದನ್ನೆಲ್ಲ ಅನುಸರಿಸಿರಿ ಮತ್ತು ನಿಮ್ಮ ಪಾಲಕ ಪ್ರಭುವನ್ನು ಬಿಟ್ಟು ಇತರ ಸಂರಕ್ಷಕರನ್ನು ಅನುಸರಿಸ ಬೇಡಿರಿ. ಆದರೆ ನೀವು ಉಪದೇಶವನ್ನು ಅಲ್ಪವೇ ಸ್ವೀಕರಿಸುತ್ತೀರಿ.

اِتَّبِعُوْا مَاۤ اُنْزِلَ اِلَيْكُمْ مِّنْ رَّبِّكُمْ وَلَا تَتَّبِعُوْا مِنْ دُوْنِهٖۤ اَوْلِيَاۤءَ ؕ قَلِيْلًا مَّا تَذَكَّرُوْنَ ③

4. ಎಷ್ಟೋ ನಾಡುಗಳನ್ನು ನಾವು ನೆಲಸಮ ಮಾಡಿ ಬಿಟ್ಟೆವು. ಅವುಗಳ ಮೇಲೆ ನಮ್ಮ ಯಾತನೆಯು ಹಠಾತ್ತನೆ ರಾತ್ರೆಯ ವೇಳೆ ಅಥವಾ ಅವರು ಹಾಡುಹಗಲಲ್ಲೇ ವಿಶ್ರಾಂತಿ ಪಡೆಯುತ್ತಿದ್ದಾಗ ಎರಗಿತು.

وَكَمْ مِّنْ قَرْيَةٍ اَهْلَكْنٰهَا فَجَآءَهَا بَاْسُنَا بَيَاتًا اَوْ هُمْ قَآئِلُوْنَ ④

5. ನಮ್ಮ ಯಾತನೆ ಅವರ ಮೇಲೆ ಎರಗಿದಾಗ ಅವರ ಬಾಯಲ್ಲಿ "ನಿಜವಾಗಿಯೂ ನಾವು ಅಕ್ರಮಿಗಳಾಗಿದ್ದೆವು" ಎಂದಲ್ಲದೆ ಇನ್ನಾವ ಸ್ವರವೂ ಇರಲಿಲ್ಲ.

فَمَا كَانَ دَعْوٰىهُمْ اِذْ جَآءَهُمْ بَاْسُنَاۤ اِلَّاۤ اَنْ قَالُوْۤا اِنَّا كُنَّا ظٰلِمِيْنَ ⑤

1. ಅರ್ಥಾತ್- ಯಾವುದೇ ಸಂಕೋಚ ಅಥವಾ ಭಯವಿಲ್ಲದೆ ನೀವು ಇದನ್ನು ಜನರಿಗೆ ತಲಪಿಸಿರಿ. ವಿರೋಧಿಗಳು ಅದನ್ನು ಯಾವ ರೀತಿ ಸ್ವೀಕರಿಸುತ್ತಾರೆ ಎಂಬುದನ್ನು ನೀವು ಗಣನೆಗೆ ತೆಗೆದುಕೊಳ್ಳದಿರಿ.

6. ಆದ್ದರಿಂದ ನಾವು ಯಾರ ಕಡೆಗೆ ಸಂದೇಶವಾಹಕರನ್ನು ಕಳುಹಿಸಿದ್ದೆವೋ ಅವರನ್ನೆಲ್ಲಾ ವಿಚಾರಣೆ ನಡೆಸಿಯೇ ತೀರುವೆವು ಮತ್ತು (ಸಂದೇಶವಾಹಕರು ದೌತ್ಯದ ಕರ್ತವ್ಯವನ್ನು ಎಷ್ಟರ ಮಟ್ಟಿಗೆ ನೆರವೇರಿಸಿದ್ದರು ಮತ್ತು ಅವರಿಗೆ ಏನು ಪ್ರತಿಕ್ರಿಯೆ ದೊರಕಿತೆಂದು) ಸಂದೇಶವಾಹಕರೊಡನೆಯೂ ನಾವು ಪ್ರಶ್ನಿಸುವೆವು.

فَلَنَسْـَٔلَنَّ الَّذِيْنَ اُرْسِلَ اِلَيْهِمْ وَ
لَنَسْـَٔلَنَّ الْمُرْسَلِيْنَ ﴿٦﴾

7. ಆಗ ನಾವು ಸ್ವತಃ ಸಂಪೂರ್ಣ ಜ್ಞಾನದೊಂದಿಗೆ ಸಕಲ ಘಟನೆಗಳನ್ನು ಅವರ ಮುಂದಿಟ್ಟು ಬಿಡುವೆವು. ನಾವೆಂದೂ ಮಾಯವಾಗಿರಲಿಲ್ಲವಷ್ಟೆ.

فَلَنَقُصَّنَّ عَلَيْهِمْ بِعِلْمٍ وَّمَا كُنَّا غَآئِبِيْنَ ﴿٧﴾

8. ತೂಕವು ಅಂದು ಸಾಕ್ಷಾತ್ ಸತ್ಯವಾಗಿರುವುದು.[2] ಯಾರ ತೂಗು ತಟ್ಟೆಯು ಭಾರವಾಗಿರುವುದೋ ಅವರೇ ಸಾರ್ಥಕ್ಯ ಹೊಂದುವವರಾಗುವರು.

وَالْوَزْنُ يَوْمَئِذِ ِالْحَقُّ ۚ فَمَنْ ثَقُلَتْ
مَوَازِيْنُهٗ فَاُولٰٓئِكَ هُمُ الْمُفْلِحُوْنَ ﴿٨﴾

9. ಮತ್ತು ಯಾರ ತೂಗು ತಟ್ಟೆಯು ಹಗುರವಾಗಿರುವುದೋ ಅವರೇ ಸ್ವಯಂ ತಮ್ಮನ್ನು ನಷ್ಟಕ್ಕೊಳಪಡಿಸಿಕೊಂಡವರಾಗುವರು. ಏಕೆಂದರೆ ಅವರು ನಮ್ಮ ನಿದರ್ಶನಗಳ ಬಗ್ಗೆ ಅಕ್ರಮ ನೀತಿಯನ್ನನುಸರಿಸುತ್ತಿದ್ದರು.

وَمَنْ خَفَّتْ مَوَازِيْنُهٗ فَاُولٰٓئِكَ الَّذِيْنَ
خَسِرُوْٓا اَنْفُسَهُمْ بِمَا كَانُوْا بِاٰيٰتِنَا يَظْلِمُوْنَ ﴿٩﴾

10. ನಾವು ನಿಮ್ಮನ್ನು ಜಗತ್ತಿನಲ್ಲಿ ಸಾಮರ್ಥ್ಯ ಕೊಟ್ಟು ನೆಲೆಗೊಳಿಸಿದೆವು ಮತ್ತು ಇಲ್ಲಿ ನಿಮಗೆ ಜೀವನ ಸಾಧನಗಳನ್ನು ಒದಗಿಸಿದೆವು. ಆದರೆ ನೀವು ಅತ್ಯಲ್ಪವೇ ಕೃತಜ್ಞರಾಗಿರುತ್ತೀರಿ.

وَلَقَدْ مَكَّنّٰكُمْ فِى الْاَرْضِ وَجَعَلْنَا لَكُمْ
فِيْهَا مَعَايِشَ ۗ قَلِيْلًا مَّا تَشْكُرُوْنَ ﴿١٠﴾

11. ನಾವು ನಿಮ್ಮ ಸೃಷ್ಟಿಯನ್ನು ಆರಂಭಿಸಿದೆವು. ಅನಂತರ ನಾವು ನಿಮಗೆ ರೂಪ ಕೊಟ್ಟೆವು. ತರುವಾಯ "ಆದಮನ ಮುಂದೆ 'ಸಾಷ್ಟಾಂಗವೆರಗಿರಿ' ಎಂದು ದೇವಚರರೊಡನೆ ಹೇಳಿದೆವು." ಈ ಅಪ್ಪಣೆಯಂತೆ ಎಲ್ಲರೂ ಸಾಷ್ಟಾಂಗ ಮಾಡಿದರು. ಆದರೆ ಇಬ್‌ಲೀಸನು 'ಸಾಷ್ಟಾಂಗ' ಮಾಡುವವರೊಂದಿಗೆ ಸೇರಲಿಲ್ಲ.[3]

وَلَقَدْ خَلَقْنٰكُمْ ثُمَّ صَوَّرْنٰكُمْ ثُمَّ قُلْنَا
لِلْمَلٰٓئِكَةِ اسْجُدُوْا لِاٰدَمَ ۖ فَسَجَدُوْٓا اِلَّآ
اِبْلِيْسَ ۗ لَمْ يَكُنْ مِّنَ السّٰجِدِيْنَ ﴿١١﴾

2. ಅರ್ಥಾತ್- ಅಲ್ಲಾಹನ ನ್ಯಾಯದ ತಕ್ಕಡಿಯಲ್ಲಿ ಆ ದಿನ ಸತ್ಯವಲ್ಲದೆ ಬೇರಾವುದಕ್ಕೂ ತೂಕವಿರಲಾರದು. ತೂಕವಿಲ್ಲದ ಯಾವುದೂ ಅಂದು ಸತ್ಯವೆನಿಸಲಾರದು. ಯಾರ ಬಳಿ ಎಷ್ಟು ಸತ್ಯಾಂಶವಿರುವುದೋ ಅಷ್ಟೇ ಅದು ತೂಗುವುದು. ತೂಕದ ಆಧಾರದಲ್ಲೇ ಆ ದಿನ ಎಲ್ಲಾ ತೀರ್ಮಾನಗಳು ನಡೆಯುವುದು. ಬೇರಾವುದನ್ನೂ ಆ ದಿನ ಕಿಂಚಿತ್ತೂ ಪರಿಗಣಿಸಲಾಗದು.

3. ಇಬ್‌ಲೀಸ್ ದೇವಚರರಲ್ಲಾಗಿದ್ದ ಎಂದು ಇದರ ಅರ್ಥವಲ್ಲ. ಭೂಮಿಯ ವ್ಯವಸ್ಥೆಯನ್ನು ನೋಡಿಕೊಳ್ಳುವ ದೇವಚರರೊಂದಿಗೆ ಆದಮರಿಗೆ ಸಾಷ್ಟಾಂಗವೆರಗಲು ಆದೇಶಿಸುವುದೆಂದರೆ ನಿಜವಾಗಿ ಆ ದೇವಚರರ ಅಧೀನದಲ್ಲಿರುವ ಸೃಷ್ಟಿಗಳೆಲ್ಲರೂ ಆದಮರಿಗೆ ಅಧೀನವಾಗಿರಬೇಕು ಎಂದಾಗಿತ್ತು. ಈ ಸೃಷ್ಟಿಗಳ ಪೈಕಿ ಇಬ್‌ಲೀಸ್ ಮಾತ್ರ ಮುಂದೆ ಬಂದು ತಾನು ಆದಮನ ಮುಂದೆ ಸಾಷ್ಟಾಂಗವೆರಗುವುದಿಲ್ಲವೆಂದು ಪ್ರಕಟಿಸಿದನು.

12. "ನಾನು ನಿನಗೆ ಅಪ್ಪಣೆ ಕೊಟ್ಟಿದ್ದಾಗ, 'ಸಾಷ್ಟಾಂಗ' ಮಾಡುವುದರಿಂದ ನಿನ್ನನ್ನು ತಡೆದ ವಿಷಯ ಯಾವುದು?" ಎಂದು (ಅಲ್ಲಾಹ್) ಕೇಳಿದಾಗ, "ನಾನು ಅವನಿಗಿಂತ ಶ್ರೇಷ್ಠನಾಗಿರುತ್ತೇನೆ. ನೀನು ನನ್ನನ್ನು ಅಗ್ನಿಯಿಂದ ಮತ್ತು ಅವನನ್ನು ಮಣ್ಣಿನಿಂದ ಸೃಷ್ಟಿಸಿರುತ್ತಿ" ಎಂದು(ಇಬ್‌ಲೀಸ್) ಹೇಳಿದನು.

قَالَ مَا مَنَعَكَ أَلَّا تَسْجُدَ إِذْ أَمَرْتُكَ ۖ
قَالَ أَنَا خَيْرٌ مِّنْهُ خَلَقْتَنِي مِن نَّارٍ
وَخَلَقْتَهُ مِن طِينٍ ﴿١٢﴾

13. ಆಗ ಅಲ್ಲಾಹನು, "ನೀನು ಇಲ್ಲಿಂದ ಕೆಳಗೆ ಇಳಿ. ಇಲ್ಲಿ ಶ್ರೇಷ್ಠತೆಯ ಅಹಂಕಾರ ತೋರಿಸುವ ಹಕ್ಕು ನಿನಗಿಲ್ಲ. ತೊಲಗು- ವಾಸ್ತವದಲ್ಲಿ ನೀನು ಸ್ವಯಂ ತನ್ನ ಅಪಮಾನವನ್ನು ಬಯಸುವವರಲ್ಲಾಗಿರುವೆ"[4] ಎಂದನು.

قَالَ فَاهْبِطْ مِنْهَا فَمَا يَكُونُ لَكَ أَن
تَتَكَبَّرَ فِيهَا فَاخْرُجْ إِنَّكَ مِنَ الصَّاغِرِينَ ﴿١٣﴾

14. ಆಗ ಅವನು, "ಇವರೆಲ್ಲರೂ ಇನ್ನೊಮ್ಮೆ ಎಬ್ಬಿಸಲ್ಪಡುವ ದಿವಸದ ತನಕ ನನಗೆ ಅವಧಿ ಕೊಡು" ಎಂದನು.

قَالَ أَنظِرْنِي إِلَىٰ يَوْمِ يُبْعَثُونَ ﴿١٤﴾

15. ಅಲ್ಲಾಹನು, "ನಿನಗೆ ಅವಧಿ ಕೊಡಲಾಯಿತು" ಎಂದನು.

قَالَ إِنَّكَ مِنَ الْمُنظَرِينَ ﴿١٥﴾

16. ಆಗ ಅವನು, "ಹಾಗಾದರೆ ನೀನು ನನ್ನನ್ನು ಪಥಭ್ರಷ್ಟತೆಗೊಳಪಡಿಸಿದಂತೆಯೇ ನಾನೂ ಇನ್ನು ನಿನ್ನ ನೇರ ಮಾರ್ಗದಲ್ಲಿ ಈ ಮಾನವರನ್ನು ಹೊಂಚು ಹಾಕುತ್ತಿರುವೆನು.

قَالَ فَبِمَا أَغْوَيْتَنِي لَأَقْعُدَنَّ لَهُمْ
صِرَاطَكَ الْمُسْتَقِيمَ ﴿١٦﴾

17. ಮುಂದಿನಿಂದಲೂ ಹಿಂದಿನಿಂದಲೂ ಬಲಭಾಗದಿಂದಲೂ ಎಡಭಾಗದಿಂದಲೂ ಎಲ್ಲ ಕಡೆಗಳಿಂದಲೂ ಅವರನ್ನು ಸುತ್ತುಗಟ್ಟುವೆನು ಮತ್ತು ನೀನು ಅವರ ಪೈಕಿ ಬಹುಮಂದಿಯನ್ನು ಕೃತಜ್ಞರನ್ನಾಗಿ ಕಾಣಲಾರೆ" ಎಂದನು.

ثُمَّ لَآتِيَنَّهُم مِّن بَيْنِ أَيْدِيهِمْ وَمِنْ
خَلْفِهِمْ وَعَنْ أَيْمَانِهِمْ وَعَن شَمَائِلِهِمْ ۖ
وَلَا تَجِدُ أَكْثَرَهُمْ شَاكِرِينَ ﴿١٧﴾

18. ಅಲ್ಲಾಹನು, "ನೀನು ಇಲ್ಲಿಂದ ನಿಂದ್ಯನೂ ಬಹಿಷ್ಕೃತನೂ ಆಗಿ ತೊಲಗು. ಅವರ ಪೈಕಿ ಯಾರು ನಿನ್ನನ್ನು ಅನುಸರಿಸುತ್ತಾರೋ ಅವರಿಂದ ನಿನ್ನ ಸಹಿತ 'ನರಕ'ವನ್ನು ತುಂಬುವೆನೆಂಬುದನ್ನು ನಿಸ್ಸಂದೇಹವಾಗಿ ಅರಿತುಕೋ.

قَالَ اخْرُجْ مِنْهَا مَذْءُومًا مَّدْحُورًا ۖ
لَّمَن تَبِعَكَ مِنْهُمْ لَأَمْلَأَنَّ جَهَنَّمَ
مِنكُمْ أَجْمَعِينَ ﴿١٨﴾

19. ಮತ್ತು ಓ ಆದಮ್, ನೀನು ಮತ್ತು ನಿನ್ನ ಪತ್ನಿ- ಇಬ್ಬರೂ ಈ ಸ್ವರ್ಗದಲ್ಲಿ ವಾಸಿಸಿರಿ. ನೀವಿಲ್ಲಿ ನಿಮಗೆ ಇಷ್ಟ ಬಂದುದನ್ನು ಉಣ್ಣಿರಿ. ಆದರೆ ಈ ವೃಕ್ಷದ ಬಳಿ ಸುಳಿಯಬಾರದು. ಅನ್ಯಥಾ ಅಕ್ರಮಿಗಳ ಸಾಲಿಗೆ ಸೇರುವಿರಿ ಎಂದನು.

وَيَا آدَمُ اسْكُنْ أَنتَ وَزَوْجُكَ الْجَنَّةَ
فَكُلَا مِنْ حَيْثُ شِئْتُمَا وَلَا تَقْرَبَا هَٰذِهِ
الشَّجَرَةَ فَتَكُونَا مِنَ الظَّالِمِينَ ﴿١٩﴾

4. ಮೂಲದಲ್ಲಿ 'ಸ್ವಾಗಿರೀನ್' ಎಂಬ ಪದ ಪ್ರಯೋಗವಾಗಿದೆ. 'ಸ್ವಾಗಿರ್' ಎಂದರೆ ನಿಂದ್ಯತೆ ಮತ್ತು ನೀಚತೆಯನ್ನು ಸ್ವತಃ ಅಪ್ಪಿಕೊಳ್ಳುವುದು. ಸೃಷ್ಟಿ ಮತ್ತು ದಾಸನಾಗಿರುತ್ತಲೂ ಮೇಲರಿಮೆ ಮತ್ತು ಅಹಂಭಾವಕ್ಕೆ ಈಡಾಗುವುದೆಂದರೆ ಸ್ವತಃ ನೀಚನಾಗುವುದಾಗಿದೆ ಎಂಬುದೇ ಈ ದೇವವಾಣಿಯ ಇಂಗಿತ.

20. ಅನಂತರ, ಪರಸ್ಪರರಿಂದ ಮರೆಗೊಳಿಸಲ್ಪಟ್ಟಿದ್ದ ಅವರ ಲಜ್ಜಾಂಗಗಳು ಪರಸ್ಪರರ ಮುಂದೆ ತೆರೆಯುವಂತಾಗಲೆಂದು, ಶೈತಾನನು ಅವರನ್ನು ಪ್ರಚೋದಿಸಿದನು. ಅವನು ಅವರೊಡನೆ, "ನಿಮ್ಮ ಪ್ರಭು ನಿಮ್ಮನ್ನು ಈ ವೃಕ್ಷದಿಂದ ತಡೆದಿರುವುದು ನೀವೆಲ್ಲಾದರೂ ದೇವಚರರಾಗಿ ಬಿಡಬಾರದು ಅಥವಾ ನಿಮಗೆ ಶಾಶ್ವತ ಜೀವನವೊದಗಿ ಬಿಡಬಾರದು ಎಂಬ ಕಾರಣದಿಂದ ಮಾತ್ರ" ಎಂದನು.

فَوَسْوَسَ لَهُمَا الشَّيْطٰنُ لِيُبْدِيَ لَهُمَا مَا وٗرِيَ عَنْهُمَا مِنْ سَوْاٰتِهِمَا وَقَالَ مَا نَهٰكُمَا رَبُّكُمَا عَنْ هٰذِهِ الشَّجَرَةِ اِلَّآ اَنْ تَكُوْنَا مَلَكَيْنِ اَوْ تَكُوْنَا مِنَ الْخٰلِدِيْنَ ﴿٢٠﴾

21. ನಾನು ನಿಮ್ಮ ನೈಜ ಹಿತಚಿಂತಕನಾಗಿದ್ದೇನೆಂದು ಅವರೊಡನೆ ಆಣೆ ಹಾಕಿ ಹೇಳಿದನು.

وَقَاسَمَهُمَآ اِنِّيْ لَكُمَا لَمِنَ النّٰصِحِيْنَ ﴿٢١﴾

22. ಹೀಗೆ ಅವನು ಅವರಿಬ್ಬರನ್ನೂ ಮೋಸಗೊಳಿಸಿ ಕ್ರಮೇಣ ತನ್ನ ಧಾಟಿಗೆ ತಂದನು. ಕೊನೆಗೆ ಅವರಿಬ್ಬರೂ ಆ ವೃಕ್ಷವನ್ನು ಸವಿದಾಗ ಅವರ ಗುಪ್ತಾಂಗಗಳು ಪರಸ್ಪರರ ಮುಂದೆ ಪ್ರತ್ಯಕ್ಷಗೊಂಡವು ಮತ್ತು ಅವರು ತಮ್ಮ ದೇಹಗಳನ್ನು ಸ್ವರ್ಗದ ಎಲೆಗಳಿಂದ ಮರೆಸ ತೊಡಗಿದರು. ಆಗ ಅವರ ಪ್ರಭು ಅವರನ್ನು ಕರೆದು, "ನಾನು ನಿಮ್ಮನ್ನು ಈ ವೃಕ್ಷದಿಂದ ತಡೆದಿರಲಿಲ್ಲವೇ? ಹಾಗೂ ಶೈತಾನನು ನಿಮ್ಮ ಪ್ರತ್ಯಕ್ಷ ಶತ್ರುವೆಂದು ನಿಮಗೆ ಹೇಳಿರಲಿಲ್ಲವೇ?" ಎಂದು ಕೇಳಿದನು.

فَدَلّٰىهُمَا بِغُرُوْرٍ ۚ فَلَمَّا ذَاقَا الشَّجَرَةَ بَدَتْ لَهُمَا سَوْاٰتُهُمَا وَطَفِقَا يَخْصِفٰنِ عَلَيْهِمَا مِنْ وَّرَقِ الْجَنَّةِ ۗ وَنَادٰىهُمَا رَبُّهُمَآ اَلَمْ اَنْهَكُمَا عَنْ تِلْكُمَا الشَّجَرَةِ وَاَقُلْ لَّكُمَآ اِنَّ الشَّيْطٰنَ لَكُمَا عَدُوٌّ مُّبِيْنٌ ﴿٢٢﴾

23. ಅವರಿಬ್ಬರೂ, "ಓ ನಮ್ಮ ಪ್ರಭೂ, ನಾವು ನಮ್ಮ ಮೇಲೆ ಅಕ್ರಮವೆಸಗಿಕೊಂಡೆವು. ಈಗ ನೀನು ನಮ್ಮನ್ನು ಕ್ಷಮಿಸದಿದ್ದರೆ ಹಾಗೂ ನಮ್ಮ ಮೇಲೆ ಕೃಪೆತೋರದಿದ್ದರೆ ನಿಶ್ಚಯವಾಗಿಯೂ ನಾವು ನಷ್ಟ ಹೊಂದುವವರಲ್ಲಾಗುವೆವು"[5] ಎಂದು ಹೇಳಿದರು.

قَالَا رَبَّنَا ظَلَمْنَآ اَنْفُسَنَا ۫ وَاِنْ لَّمْ تَغْفِرْ لَنَا وَتَرْحَمْنَا لَنَكُوْنَنَّ مِنَ الْخٰسِرِيْنَ ﴿٢٣﴾

5. ಇದರಿಂದ ನಾಚಿಕೆ ಮತ್ತು ಸಂಕೋಚದ ಭಾವನೆ ಮನುಷ್ಯನಿಗೆ ಸ್ವಾಭಾವಿಕವಾದುದು ಎಂದು ವ್ಯಕ್ತವಾಗುತ್ತದೆ. ತನ್ನ ದೇಹದ ನಿರ್ದಿಷ್ಟ ಭಾಗಗಳನ್ನು ಇತರರಿಗೆ ತೋರಿಸಲು ಮನುಷ್ಯನಿಗೆ ಆಗುವ ಸಹಜವಾದ ನಾಚಿಕೆಯೇ ಇದಕ್ಕೊಂದು ಉದಾಹರಣೆ. ಆದ್ದರಿಂದಲೇ ಪಿಶಾಚಿಯು ಮನುಷ್ಯನನ್ನು ಅವನ ಸತ್-ಪ್ರಕೃತಿಯಿಂದ ಸರಿಸಲು ಹೂಡಿದ ಮೊದಲ ಸಂಚು ಅವನ ಲಜ್ಜೆ ಮತ್ತು ಸಂಕೋಚದ ಸ್ವಭಾವದ ಮೇಲೆ ಪ್ರಹಾರ ಮಾಡುವುದಾಗಿತ್ತು. ನಗ್ನತೆಯ ಮೂಲಕ ಅಶ್ಲೀಲತೆಯ ದ್ವಾರವನ್ನು ತೆರೆಸುವುದಾಗಿತ್ತು. ಅವನನ್ನು ಲೈಂಗಿಕ ಅರಾಜಕತೆಗೆ ಗುರಿಪಡಿಸುವುದಾಗಿತ್ತು. ಹಾಗೆಯೇ ಮಾನವನಲ್ಲಿ ಉನ್ನತ ಹಂತಕ್ಕೇರುವ ಸಹಜವಾದ ದಾಹ ಇದೆಯೆಂದೂ ಇದರಿಂದ ವ್ಯಕ್ತವಾಗುತ್ತದೆ. ಆದ್ದರಿಂದಲೇ ಪಿಶಾಚಿಯು ಹಿತೈಷಿಯ ವೇಷದಲ್ಲಿ ಬಂದು ನಾನು ನಿನ್ನನ್ನು ಇನ್ನಷ್ಟು ಉನ್ನತ ಸ್ಥಾನಕ್ಕೆ ಕೊಂಡೊಯ್ಯಬಯಸುತ್ತೇನೆ ಎಂದು ಹೇಳಬೇಕಾಯಿತು. ಮನುಷ್ಯನನ್ನು ಪಿಶಾಚಿಗಿಂತ ಉನ್ನತಗೊಳಿಸುವ ಅವನ ನಿಜವಾದ ವಿಶೇಷತೆ, ತಪ್ಪು ಸಂಭವಿಸಿದಾಗ ಪಶ್ಚಾತ್ತಾಪ ಪಟ್ಟು ಅಲ್ಲಾಹನಲ್ಲಿ ಕ್ಷಮೆಯಾಚಿಸುವುದಾಗಿದೆ ಎಂದು ಇದರಿಂದ ವ್ಯಕ್ತವಾಗುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಇಬ್ಲೀಸನು ತಪ್ಪು ಸಂಭವಿಸಿದಾಗ ಅಲ್ಲಾಹನೊಂದಿಗೆ ದುರಹಂಕಾರ ಪ್ರದರ್ಶಿಸಿದನು ಮತ್ತು ಬಂಡಾಯಕ್ಕಿಳಿದನು. ಇದುವೇ ಅವನನ್ನು ನಿಂದ್ಯ ಮತ್ತು ನೀಚನಾಗಿ ಮಾಡಿತು ಎಂದೂ ಇದರಿಂದ ತಿಳಿದು ಬರುತ್ತದೆ.

24. ಆಗ ಅಲ್ಲಾಹನು, "ಇಳಿದುಬಿಡಿರಿ, ನೀವು ಪರಸ್ಪರ ಶತ್ರುಗಳಾಗಿರುತ್ತೀರಿ ಮತ್ತು ನಿಮಗಾಗಿ ಒಂದು ನಿರ್ದಿಷ್ಟ ಕಾಲಾವಧಿವರೆಗೆ ಭೂಮಿಯ ಮೇಲೆಯೇ ವಾಸಸ್ಥಾನ ಮತ್ತು ಜೀವನ ಸಾಧನಗಳಿವೆ" ಎಂದೂ-

قَالَ اهْبِطُوْا بَعْضُكُمْ لِبَعْضٍ عَدُوٌّ ۚ وَلَكُمْ
فِي الْاَرْضِ مُسْتَقَرٌّ وَّمَتَاعٌ اِلٰى حِيْنٍ ﴿٢٤﴾

25. "ಅಲ್ಲೇ ನಿಮಗೆ ಬದುಕಲಿಕ್ಕೂ ಸಾಯಲಿಕ್ಕೂ ಇದೆ ಮತ್ತು ಕೊನೆಗೆ ಅದರಿಂದಲೇ ನಿಮ್ಮನ್ನು ಎಬ್ಬಿಸಲಾಗುವುದು" ಎಂದೂ ಹೇಳಿದನು.

قَالَ فِيْهَا تَحْيَوْنَ وَفِيْهَا تَمُوْتُوْنَ
وَمِنْهَا تُخْرَجُوْنَ ﴿٢٥﴾

26. ಓ ಆದಮರ ಸಂತತಿಯೇ, ನಾವು ನಿಮ್ಮ ದೇಹದ ಲಜ್ಜಾಭಾಗಗಳನ್ನು ಮರೆಸಲಿಕ್ಕಾಗಿಯೂ ನಿಮ್ಮ ದೇಹದ ರಕ್ಷಣೆ ಹಾಗೂ ಅಲಂಕಾರದ ಸಾಧನವಾಗಿಯೂ ನಿಮ್ಮ ಮೇಲೆ ಉಡುಪನ್ನು ಇಳಿಸಿರುತ್ತೇವೆ. 'ಧರ್ಮನಿಷ್ಠೆ'ಯು (ತಕ್ವಾ) ಅತ್ಯುತ್ತಮ ಉಡುಪಾಗಿರುತ್ತದೆ. ಇದು ಅಲ್ಲಾಹನ ಕುರುಹುಗಳಲ್ಲೊಂದಾಗಿರುತ್ತದೆ. ಜನರು ಇದರಿಂದ ಪಾಠ ಪಡೆಯಲೂ ಬಹುದು.

يٰبَنِيْٓ اٰدَمَ قَدْ اَنْزَلْنَا عَلَيْكُمْ لِبَاسًا يُّوَارِيْ
سَوْاٰتِكُمْ وَرِيْشًا ۗ وَلِبَاسُ التَّقْوٰى ۙ ذٰلِكَ خَيْرٌ ۗ
ذٰلِكَ مِنْ اٰيٰتِ اللّٰهِ لَعَلَّهُمْ يَذَّكَّرُوْنَ ﴿٢٦﴾

27. ಓ ಆದಮರ ಸಂತತಿಯೇ, ಶೈತಾನನು ನಿಮ್ಮ ಮಾತಾಪಿತರನ್ನು ಸ್ವರ್ಗದಿಂದ ತೊಲಗಿಸಿದ್ದ ಹಾಗೂ ಒಬ್ಬರ ಮುಂದೆ ಇನ್ನೊಬ್ಬರ ಲಜ್ಜಾಂಗಗಳು ಗೋಚರಿಸುವಂತೆ ಅವರ ಉಡು ಪನ್ನು ಅವರ ಮೇಲಿಂದ ಕಳಚಿದ್ದ ಹಾಗೆಯೇ ನಿಮ್ಮನ್ನು 'ಪರೀಕ್ಷೆ'ಗೆ ಒಳಪಡಿಸದಿರಲಿ. ಅವನು ಮತ್ತು ಅವನ ಸಂಗಾತಿಗಳು ನೀವು ಅವರನ್ನು ನೋಡಲಾಗದ ಸ್ಥಾನದಿಂದ ನಿಮ್ಮನ್ನು ನೋಡುತ್ತಿದ್ದಾರೆ. ನಾವು ಈ ಶೈತಾನರನ್ನು ಅವಿಶ್ವಾಸಿಗಳ ಸಂರಕ್ಷಕರಾಗಿ ಮಾಡಿದ್ದೇವೆ.

يٰبَنِيْٓ اٰدَمَ لَا يَفْتِنَنَّكُمُ الشَّيْطٰنُ كَمَآ اَخْرَجَ
اَبَوَيْكُمْ مِّنَ الْجَنَّةِ يَنْزِعُ عَنْهُمَا لِبَاسَهُمَا
لِيُرِيَهُمَا سَوْاٰتِهِمَا ۗ اِنَّهٗ يَرٰىكُمْ هُوَ وَقَبِيْلُهٗ
مِنْ حَيْثُ لَا تَرَوْنَهُمْ ۗ اِنَّا جَعَلْنَا الشَّيٰطِيْنَ
اَوْلِيَآءَ لِلَّذِيْنَ لَا يُؤْمِنُوْنَ ﴿٢٧﴾

28. ಇವರು ಯಾವುದಾದರೊಂದು ಅಶ್ಲೀಲ ಕಾರ್ಯವೆಸಗಿದಾಗ, "ನಾವು ನಮ್ಮ ಪೂರ್ವಿಕರನ್ನು ಇದೇ ಪದ್ಧತಿಯಲ್ಲಿ ಕಂಡಿದ್ದೇವೆ ಮತ್ತು ಅಲ್ಲಾಹನೇ ನಮಗೆ ಹೀಗೆ ಮಾಡುವ ಅಪ್ಪಣೆ ಕೊಟ್ಟಿದ್ದಾನೆ" ಎಂದು ಹೇಳುತ್ತಾರೆ.[6] ಅಲ್ಲಾಹನು ಅಶ್ಲೀಲ ಕಾರ್ಯಗಳನ್ನು ಮಾಡಲು ಎಂದೆಂದಿಗೂ ಅಪ್ಪಣೆ ಕೊಡುವುದಿಲ್ಲವೆಂದು ಇವರೊಡನೆ ಹೇಳಿರಿ. ಅಲ್ಲಾಹನ ಹೆಸರಲ್ಲಿ, ಅವನದ್ದೆಂದು ನಿಮಗೆ ಅರಿವಿಲ್ಲದಂತಹ ಮಾತುಗಳನ್ನು ನೀವಾಡುತ್ತೀರಾ?

وَاِذَا فَعَلُوْا فَاحِشَةً قَالُوْا وَجَدْنَا عَلَيْهَآ
اٰبَآءَنَا وَاللّٰهُ اَمَرَنَا بِهَا ۗ قُلْ اِنَّ اللّٰهَ
لَا يَاْمُرُ بِالْفَحْشَآءِ ۗ اَتَقُوْلُوْنَ عَلَى اللّٰهِ مَا
لَا تَعْلَمُوْنَ ﴿٢٨﴾

6. ಇದು ಅರಬರಲ್ಲಿದ್ದ ಬೆತ್ತಲಾಗಿ ಪ್ರದಕ್ಷಿಣೆ ಮಾಡುವ ಪದ್ಧತಿಯೆಡೆಗಿರುವ ಸೂಚನೆ. ಅವರಲ್ಲಿ ಹೆಚ್ಚಿನವರು ಹಜ್ಜ್‌ನ ಸಂದರ್ಭದಲ್ಲಿ ಬೆತ್ತಲಾಗಿ ಕಅಬಾದ ಪ್ರದಕ್ಷಿಣೆ ಮಾಡುತ್ತಿದ್ದರು. ಅವರ ಪೈಕಿಯ ಮಹಿಳೆಯರು ಈ ವಿಷಯದಲ್ಲಿ ಪುರುಷರಿಗಿಂತಲೂ ಹೆಚ್ಚು ನಿರ್ಲಜ್ಜರಾಗಿದ್ದರು. ಅವರು ಇದನ್ನೊಂದು ಧಾರ್ಮಿಕ ವಿಧಿ ಮತ್ತು ಪುಣ್ಯಕಾರ್ಯವೆಂದು ಭಾವಿಸಿ ನಿರ್ವಹಿಸುತ್ತಿದ್ದರು.

29. ಓ ಪೈಗಂಬರರೇ; ಇವರೊಡನೆ ಹೇಳಿರಿ, "ನನ್ನ ಪ್ರಭು ನ್ಯಾಯಪರ ಆಜ್ಞೆಯನ್ನಿತ್ತಿದ್ದಾನೆ. ಪ್ರತಿಯೊಂದು ಉಪಾಸನೆಯಲ್ಲಿ ಗಮನವನ್ನು ಸರಿಯಾಗಿರಿಸಬೇಕೆಂದೂ ಧರ್ಮವನ್ನು ಅವನಿಗೇ ಮೀಸಲಾಗಿಟ್ಟು ಅವನನ್ನೇ ಕೂಗಿ ಕರೆಯಬೇಕೆಂದೂ ಅವನ ಆಜ್ಞೆಯಾಗಿರುತ್ತದೆ. ಅವನು ನಿಮ್ಮನ್ನು ಈಗ ಸೃಷ್ಟಿಸಿದಂತೆಯೇ ನೀವು ಪುನಃ ಸೃಷ್ಟಿಸಲ್ಪಡುವಿರಿ."

قُلْ اَمَرَ رَبِّيْ بِالْقِسْطِ ۗ وَاَقِيْمُوْا وُجُوْهَكُمْ
عِنْدَ كُلِّ مَسْجِدٍ وَّادْعُوْهُ مُخْلِصِيْنَ لَهُ الدِّيْنَ ۗ
كَمَا بَدَاَكُمْ تَعُوْدُوْنَ ﴿٢٩﴾

30. ಅವನು ಒಂದು ವಿಭಾಗಕ್ಕಂತು ನೇರ ಮಾರ್ಗವನ್ನು ತೋರಿಸಿರುತ್ತಾನೆ. ಆದರೆ ಇನ್ನೊಂದು ವಿಭಾಗದ ಮೇಲೆ ಪಥಭ್ರಷ್ಟತೆ ಅಂಟಿಕೊಂಡಿದೆ ಏಕೆಂದರೆ, ಅವರು ಅಲ್ಲಾಹನ ಬದಲಿಗೆ ಶೈತಾನರನ್ನು ತಮ್ಮ ರಕ್ಷಕರಾಗಿ ಮಾಡಿಕೊಂಡಿರುತ್ತಾರೆ ಮತ್ತು ತಾವು ನೇರ ಮಾರ್ಗದಲ್ಲಿದ್ದೇವೆಂದು ಅವರು ಭಾವಿಸಿಕೊಂಡಿದ್ದಾರೆ.

فَرِيْقًا هَدٰى وَفَرِيْقًا حَقَّ عَلَيْهِمُ الضَّلٰلَةُ ۗ
اِنَّهُمُ اتَّخَذُوا الشَّيٰطِيْنَ اَوْلِيَآءَ مِنْ دُوْنِ
اللّٰهِ وَيَحْسَبُوْنَ اَنَّهُمْ مُّهْتَدُوْنَ ﴿٣٠﴾

31. ಓ ಆದಮರ ಸಂತತಿಯವರೇ, ಉಪಾಸನೆಯ ಎಲ್ಲ ಸಂದರ್ಭಗಳಲ್ಲೂ ನಿಮ್ಮ 'ಅಲಂಕಾರ'ಗಳಿಂದ ಭೂಷಿತರಾಗಿರಿ.[7] ಉಣ್ಣಿರಿ, ಕುಡಿಯಿರಿ ಮತ್ತು ಮಿತಿ ಮೀರಬೇಡಿರಿ. ಅಲ್ಲಾಹನು ಮಿತಿ ಮೀರುವವರನ್ನು ಮೆಚ್ಚುವುದಿಲ್ಲ.

يٰبَنِيْٓ اٰدَمَ خُذُوْا زِيْنَتَكُمْ عِنْدَ كُلِّ
مَسْجِدٍ وَّكُلُوْا وَاشْرَبُوْا وَلَا تُسْرِفُوْا ۚ
اِنَّهٗ لَا يُحِبُّ الْمُسْرِفِيْنَ ﴿٣١﴾

32. ಓ ಪೈಗಂಬರರೇ, ಅವರೊಡನೆ ಕೇಳಿರಿ, - ಅಲ್ಲಾಹನು ತನ್ನ ದಾಸರಿಗಾಗಿ, ಹೊರತೆಗೆದಿರುವ ವಸ್ತ್ರ ಭೂಷಣಗಳನ್ನೂ ಶುದ್ಧ ಆಹಾರ ಸಾಮಗ್ರಿಗಳನ್ನೂ ನಿಷಿದ್ಧಗೊಳಿಸಿದವನಾರು? ಹೇಳಿರಿ: ಇವೆಲ್ಲ ವಸ್ತುಗಳೂ ಇಹಜೀವನದಲ್ಲೂ ಸತ್ಯವಿಶ್ವಾಸಿಗಳಿಗಾಗಿರುತ್ತವೆ ಮತ್ತು ಪುನರುತ್ಥಾನ ದಿನದಲ್ಲಂತು ಇವು ಕೇವಲ ಅವರಿಗಾಗಿಯೇ ಮೀಸಲಾಗಿರುವುವು. ಇದೇ ರೀತಿಯಲ್ಲಿ ನಾವು ನಮ್ಮ ಸೂಕ್ತಗಳನ್ನು ಜ್ಞಾನವುಳ್ಳವರಿಗೆ ಸುಸ್ಪಷ್ಟವಾಗಿ ವಿವರಿಸುತ್ತೇವೆ.

قُلْ مَنْ حَرَّمَ زِيْنَةَ اللّٰهِ الَّتِيْٓ اَخْرَجَ
لِعِبَادِهٖ وَالطَّيِّبٰتِ مِنَ الرِّزْقِ ۗ قُلْ هِيَ
لِلَّذِيْنَ اٰمَنُوْا فِي الْحَيٰوةِ الدُّنْيَا خَالِصَةً
يَّوْمَ الْقِيٰمَةِ ۗ كَذٰلِكَ نُفَصِّلُ الْاٰيٰتِ
لِقَوْمٍ يَّعْلَمُوْنَ ﴿٣٢﴾

33. ಓ ಪೈಗಂಬರರೇ, ಇವರೊಡನೆ, ಹೇಳಿರಿ, "ನನ್ನ ಪ್ರಭು ನಿಷಿದ್ಧಗೊಳಿಸಿದ ವಿಷಯಗಳಿವು:- ಲಜ್ಜಾಹೀನ ಕಾರ್ಯಗಳು - ಅವು ಪ್ರತ್ಯಕ್ಷವಾದವುಗಳಿರಲಿ ಅಥವಾ ರಹಸ್ಯವಾದವುಗಳಿರಲಿ- ಪಾಪ ಕಾರ್ಯಗಳು,[8] ಸತ್ಯಕ್ಕೆ ವಿರುದ್ಧವಾದ ಅತಿರೇಕ,[9] ಅಲ್ಲಾಹನು

قُلْ اِنَّمَا حَرَّمَ رَبِّيَ الْفَوَاحِشَ مَا ظَهَرَ
مِنْهَا وَمَا بَطَنَ وَالْاِثْمَ وَالْبَغْيَ بِغَيْرِ
الْحَقِّ وَاَنْ تُشْرِكُوْا بِاللّٰهِ مَا لَمْ يُنَزِّلْ

7. ಇಲ್ಲಿ ಅಲಂಕಾರವೆಂದರೆ ಪೂರ್ಣ ಉಡುಪಾಗಿದೆ. ದೇವನ ಆರಾಧನೆಗೆ ನಿಂತುಕೊಳ್ಳುವಾಗ ಸತ್ರ್ (ಮರೆಸಲೇ ಬೇಕಾದ ಲಜ್ಜಾಂಗಗಳು) ಮಾತ್ರ ಮುಚ್ಚಿಕೊಂಡರೆ ಸಾಲದು. ಸಾಧ್ಯವಿರುವಷ್ಟರ ಮಟ್ಟಿಗೆ ಪೂರ್ಣ ಉಡುಪನ್ನು ಧರಿಸುವುದೂ ಅವಶ್ಯಕ. ಅದು ಲಜ್ಜಾಂಗಗಳನ್ನೂ ಮರೆಸಬೇಕು ಅಂತೆಯೇ ಅಲಂಕಾರವೂ ಆಗಿರಬೇಕು. ಒಬ್ಬನು ಯಾವನಾದರೂ ಸನ್ಮಾನ್ಯ ವ್ಯಕ್ತಿಯನ್ನು ಭೇಟಿಯಾಗಲು ಹೋಗುವಾಗ ಉತ್ತಮ ಉಡುಪು ಧರಿಸುವಂತೆ ಆರಾಧನೆಯ ಸಂದರ್ಭದಲ್ಲೂ ಉತ್ತಮ ಉಡುಪು ಧರಿಸಬೇಕು.

8. ಮೂಲದಲ್ಲಿ 'ಇಸ್ಮ್' ಎಂಬ ಪದ ಪ್ರಯೋಗವಾಗಿದೆ. ಅದರ ಮೂಲಾರ್ಥ 'ಕುಂದು-ಕೊರತೆ' ಎಂದಾಗಿದೆ. ಅರ್ಥಾತ್ ಅಲ್ಲಾಹನ ಅನುಸರಣೆ ಮತ್ತು ಆಜ್ಞಾಪಾಲನೆಯಲ್ಲಿ ಲೋಪ ಮಾಡುವುದು.

9. ಅರ್ಥಾತ್- ತನ್ನ ಮೇರೆಯನ್ನು ಮೀರಿ ತನಗೆ ಹಕ್ಕಿಲ್ಲದಂತಹ ಸೀಮೆಯನ್ನು ಪ್ರವೇಶಿಸುವುದು.

ಯಾರ ಪರವಾಗಿ ಯಾವುದೇ ಆಧಾರ ಅವತೀರ್ಣಗೊಳಿಸಿಲ್ಲವೋ ಅಂಥವರನ್ನು ಅವನೊಂದಿಗೆ ಸಹಭಾಗಿಯಾಗಿಸುವುದು ಮತ್ತು (ವಾಸ್ತವದಲ್ಲಿ ಅಲ್ಲಾಹನೇ ಹೇಳಿರುತ್ತಾನೆಂದು) ನಿಮಗೆ ತಿಳುವಳಿಕೆ ಇಲ್ಲದಿರುವ ಮಾತನ್ನು ಅಲ್ಲಾಹನ ಹೆಸರಲ್ಲಿ ಹೇಳುವುದು.

بِهٖ سُلْطٰنًا وَّاَنْ تَقُوْلُوْا عَلَى اللّٰهِ مَا
لَا تَعْلَمُوْنَ ﴿٣٣﴾

34. ಪ್ರತಿಯೊಂದು ಜನಾಂಗಕ್ಕೆ ಒಂದು ಕಾಲಾವಧಿ ನಿಶ್ಚಿತವಿದೆ. ಅದರ ಕಾಲಾವಧಿಯು ಮುಗಿದಾಗ ಒಂದು ಕ್ಷಣ ಹಿಂದೆ ಅಥವಾ ಮುಂದೆ ಆಗುವುದಿಲ್ಲ.

وَلِكُلِّ اُمَّةٍ اَجَلٌ ۚ فَاِذَا جَآءَ اَجَلُهُمْ
لَا يَسْتَاْخِرُوْنَ سَاعَةً وَّلَا يَسْتَقْدِمُوْنَ ﴿٣٤﴾

35. ಓ ಆದಮರ ಸಂತತಿಯವರೇ, ನಮ್ಮ ವಚನಗಳನ್ನು ಹೇಳಿ ಕೊಡುತ್ತಿರುವ ಸಂದೇಶವಾಹಕರು ಸ್ವತಃ ನಿಮ್ಮ ಮಧ್ಯೆಯಿಂದಲೇ ನಿಮ್ಮ ಬಳಿಗೆ ಬಂದರೆ, ಆಜ್ಞೋಲ್ಲಂಘನೆ ಮಾಡದವನು ಹಾಗೂ ತನ್ನನ್ನು ತಾನೇ ಸಂಸ್ಕರಿಸಿಕೊಳ್ಳುವವನಿಗೆ ಯಾವುದೇ ಭಯ ಮತ್ತು ವ್ಯಥೆಯ ಸಂಭವವೇ ಇಲ್ಲವೆಂಬುದನ್ನು ಅರಿತು ಕೊಳ್ಳಿರಿ (ಎಂಬ ವಿಷಯವನ್ನು ಅಲ್ಲಾಹನು ಸೃಷ್ಟಿಯ ಆರಂಭದಲ್ಲೇ ಸ್ಪಷ್ಟವಾಗಿ ಹೇಳಿದ್ದನು.)

يٰبَنِيْٓ اٰدَمَ اِمَّا يَاْتِيَنَّكُمْ رُسُلٌ مِّنْكُمْ
يَقُصُّوْنَ عَلَيْكُمْ اٰيٰتِيْ ۙ فَمَنِ اتَّقٰى وَاَصْلَحَ
فَلَا خَوْفٌ عَلَيْهِمْ وَلَا هُمْ يَحْزَنُوْنَ ﴿٣٥﴾

36. ನಮ್ಮ ವಚನಗಳನ್ನು ಸುಳ್ಳಾಗಿಸುವವರು ಮತ್ತು ಅವುಗಳ ವಿರುದ್ಧ ಉದ್ಧಟತನ ತೋರುವವರೇ ನರಕಾಗ್ನಿಯವರಾಗಿದ್ದು ಅಲ್ಲಿ ಅವರು ಸದಾ ಕಾಲ ವಾಸಿಸುವರು.

وَالَّذِيْنَ كَذَّبُوْا بِاٰيٰتِنَا وَاسْتَكْبَرُوْا عَنْهَآ
اُولٰٓئِكَ اَصْحٰبُ النَّارِ ۚ هُمْ فِيْهَا خٰلِدُوْنَ ﴿٣٦﴾

37. ಮಿಥ್ಯಾರೋಪಗಳನ್ನು ಸೃಷ್ಟಿಸಿ ಅಲ್ಲಾಹನ ಮೇಲೆ ಹೊರಿಸುವವನಿಗಿಂತ ಅಥವಾ ಅಲ್ಲಾಹನ ಸತ್ಯವಚನಗಳನ್ನು ಸುಳ್ಳಾಗಿಸುವವನಿಗಿಂತ ದೊಡ್ಡ ಅಕ್ರಮಿ ಇನ್ನಾರು? ಇಂಥವರು ನಮ್ಮಿಂದ ಕಳುಹಿಸಲ್ಪಟ್ಟ ನಮ್ಮ ದೇವಚರರು ಅವರ ಪ್ರಾಣಹರಣ ಮಾಡಲು ತಲಪುವ ಕ್ಷಣದ ವರೆಗೂ ವಿಧಿಲಿಖಿತದಂತೆ ತಮ್ಮ ಪಾಲನ್ನು ಪಡೆಯುತ್ತಲೇ ಇರುವರು.[10] ಆಗ ದೇವಚರರು ಅವರೊಡನೆ, "ನೀವು ಅಲ್ಲಾಹನ ಬದಲಿಗೆ ಕೂಗಿ ಕರೆಯುತ್ತಿದ್ದ ನಿಮ್ಮ ಆರಾಧ್ಯರು ಈಗೆಲ್ಲಿದ್ದಾರೆ?" ಎಂದು ಕೇಳುವರು- ಅವರು, "ಅವರೆಲ್ಲರೂ ಕಾಣೆಯಾಗಿದ್ದಾರೆ" ಎನ್ನುವರು. ನಾವು ನಿಜಕ್ಕೂ ಸತ್ಯಧಿಕ್ಕಾರಿಗಳಾಗಿದ್ದೆವೆಂದು ಅವರು ತಮ್ಮ ವಿರುದ್ಧ ತಾವೇ ಸಾಕ್ಷಿ ಹೇಳುವರು.

فَمَنْ اَظْلَمُ مِمَّنِ افْتَرٰى عَلَى اللّٰهِ كَذِبًا
اَوْ كَذَّبَ بِاٰيٰتِهٖ ۭ اُولٰٓئِكَ يَنَالُهُمْ نَصِيْبُهُمْ
مِّنَ الْكِتٰبِ ۭ حَتّٰٓى اِذَا جَآءَتْهُمْ رُسُلُنَا
يَتَوَفَّوْنَهُمْ ۙ قَالُوْٓا اَيْنَ مَا كُنْتُمْ تَدْعُوْنَ
مِنْ دُوْنِ اللّٰهِ ۭ قَالُوْا ضَلُّوْا عَنَّا وَشَهِدُوْا
عَلٰٓى اَنْفُسِهِمْ اَنَّهُمْ كَانُوْا كٰفِرِيْنَ ﴿٣٧﴾

10. ಅರ್ಥಾತ್- ಅವರಿಗೆ ನಿಗದಿ ಪಡಿಸಲಾಗಿರುವಷ್ಟು ಕಾಲ ಅವರು ಲೋಕದಲ್ಲಿರುವರು ಮತ್ತು ಮೇಲ್ನೋಟಕ್ಕೆ ಒಳ್ಳೆಯ ಅಥವಾ ಕೆಟ್ಟ ಜೀವಿತವೆಂದು ತೋರುವ ತಮ್ಮ ಪಾಲಿನ ಜೀವನವನ್ನು ಅವರು ನಡೆಸುವರು.

38. ನಿಮಗಿಂತ ಮುಂಚೆ ಗತಿಸಿಹೋದ 'ಯಕ್ಷ ಮತ್ತು ಮಾನವ' ಸಮುದಾಯಗಳು ಪ್ರವೇಶಿಸಿದ್ದ ನರಕಾಗ್ನಿಯಲ್ಲೇ ನೀವೂ ಪ್ರವೇಶಿಸಿರೆಂದು ಅಲ್ಲಾಹನು ಹೇಳುವನು. ಪ್ರತಿಯೊಂದು ಸಮುದಾಯವೂ ನರಕಾಗ್ನಿಯೊಳಗೆ ಪ್ರವೇಶಿಸುವಾಗ ತನಗಿಂತ ಮುಂಚಿನ ಸಮುದಾಯವನ್ನು ಶಪಿಸುತ್ತ ಪ್ರವೇಶಿಸುವುದು. ಹೀಗೆ ಎಲ್ಲರೂ ಅಲ್ಲಿ ಒಟ್ಟು ಸೇರಿದಾಗ ಅನಂತರದ ಪ್ರತಿಯೊಂದು ಸಮುದಾಯವು ತನಗಿಂತ ಮುಂಚಿನ ಸಮುದಾಯದ ಬಗ್ಗೆ, "ಓ ನಮ್ಮ ಪ್ರಭೂ, ನಮ್ಮನ್ನು ಪಥಭ್ರಷ್ಟರಾಗಿ ಮಾಡಿದವರು ಇವರೇ ಆಗಿದ್ದರು. ಆದುದರಿಂದ ಇವರಿಗೆ ನರಕಾಗ್ನಿಯ ಇಮ್ಮಡಿ ಯಾತನೆ ನೀಡು" ಎಂದು ಹೇಳುವುದು, "ಪ್ರತಿಯೊಂದಕ್ಕೂ ಇಮ್ಮಡಿ ಯಾತನೆಯೇ ಇದೆ. ಆದರೆ ನಿಮಗೆ ತಿಳಿದಿರುವುದಿಲ್ಲ" ಎಂಬ ಉತ್ತರ ಸಿಗುವುದು.[11]

قَالَ ادْخُلُوا فِيٓ أُمَمٍ قَدْ خَلَتْ مِنْ
قَبْلِكُمْ مِّنَ الْجِنِّ وَالْإِنْسِ فِي النَّارِ ؕ كُلَّمَا
دَخَلَتْ أُمَّةٌ لَّعَنَتْ أُخْتَهَا ؕ حَتّٰٓى إِذَا ادَّارَكُوْا
فِيهَا جَمِيعًا ۙ قَالَتْ أُخْرٰىهُمْ لِأُوْلٰىهُمْ رَبَّنَا
هٰٓؤُلَآءِ أَضَلُّوْنَا فَاٰتِهِمْ عَذَابًا ضِعْفًا مِّنَ النَّارِ ؕ
قَالَ لِكُلٍّ ضِعْفٌ وَّلٰكِنْ لَّا تَعْلَمُوْنَ ﴿٣٨﴾

39. ಮೊದಲಿನ ಸಮುದಾಯವು ಅನಂತರದ ಸಮುದಾಯದೊಡನೆ, "(ನಾವು ಅಪರಾಧಿಗಳಾಗಿದ್ದರೆ) ನಿಮಗೆ ನಮ್ಮ ಮೇಲಿದ್ದ ಶ್ರೇಷ್ಠತೆಯಾದರೂ ಏನು? ಈಗ ನಿಮ್ಮ ಗಳಿಕೆಯ ಫಲವಾಗಿ ಯಾತನೆಯ ಸವಿಯನ್ನು ಅನುಭವಿಸಿರಿ" ಎನ್ನುವುದು.

وَقَالَتْ أُوْلٰىهُمْ لِأُخْرٰىهُمْ فَمَا كَانَ لَكُمْ
عَلَيْنَا مِنْ فَضْلٍ فَذُوْقُوا الْعَذَابَ بِمَا
كُنْتُمْ تَكْسِبُوْنَ ﴿٣٩﴾

40. ನಮ್ಮ ವಚನಗಳನ್ನು ಸುಳ್ಳಾಗಿಸಿದವರಿಗೆ ಮತ್ತು ಅವುಗಳ ವಿರುದ್ಧ ಉದ್ಧಟತನ ತೋರಿದವರಿಗೆ ಗಗನ ದ್ವಾರಗಳು ಎಷ್ಟು ಮಾತ್ರಕ್ಕೂ ತೆರೆಯಲ್ಪಡಲಾರವು ಎಂಬುದನ್ನು ಖಾತ್ರಿಯಾಗಿ ತಿಳಿದುಕೊಳ್ಳಿರಿ. ಅವರ ಸ್ವರ್ಗ ಪ್ರವೇಶವು ಸೂಜಿಯ ರಂಧ್ರದೊಳಗೆ ಒಂಟೆ ಪ್ರವೇಶಿಸುವಷ್ಟೇ ಅಸಂಭವ. ಅಪರಾಧಿಗಳಿಗೆ ನಮ್ಮಲ್ಲಿ ಇಂತಹ ಪ್ರತಿಫಲವೇ ಸಿಗುತ್ತದೆ.

إِنَّ الَّذِيْنَ كَذَّبُوْا بِاٰيٰتِنَا وَاسْتَكْبَرُوْا
عَنْهَا لَا تُفَتَّحُ لَهُمْ أَبْوَابُ السَّمَآءِ وَلَا
يَدْخُلُوْنَ الْجَنَّةَ حَتّٰى يَلِجَ الْجَمَلُ فِيْ
سَمِّ الْخِيَاطِ ؕ وَكَذٰلِكَ نَجْزِي الْمُجْرِمِيْنَ ﴿٤٠﴾

41. ಅವರಿಗೆ ನರಕದ್ದೇ ಹಾಸಿಗೆ ಮತ್ತು ನರಕದ್ದೇ ಹೊದಿಕೆ ಇರುವುದು. ನಾವು ಅಕ್ರಮಿಗಳಿಗೆ ಕೊಡುವ ಪ್ರತಿಫಲ ಇದುವೇ ಆಗಿರುತ್ತದೆ.

لَهُمْ مِّنْ جَهَنَّمَ مِهَادٌ وَّمِنْ فَوْقِهِمْ
غَوَاشٍ ؕ وَكَذٰلِكَ نَجْزِي الظّٰلِمِيْنَ ﴿٤١﴾

42. ಇದಕ್ಕೆ ವ್ಯತಿರಿಕ್ತವಾಗಿ ನಮ್ಮ ವಚನಗಳನ್ನು ಸ್ವೀಕರಿಸಿಕೊಂಡವರು ಮತ್ತು ಸತ್ಕರ್ಮ ಕೈಗೊಂಡವರು- ನಾವು ಪ್ರತಿಯೊಬ್ಬನನ್ನು ಅವನ ಶಕ್ತಿಗನುಸಾರ ಮಾತ್ರ ಹೊಣೆಗಾರನನ್ನಾಗಿ ಮಾಡುತ್ತೇವೆ- ಅವರು ಸ್ವರ್ಗದವರು. ಅಲ್ಲಿ ಅವರು ಸದಾಕಾಲ ವಾಸಿಸುವರು.

وَالَّذِيْنَ اٰمَنُوْا وَعَمِلُوا الصّٰلِحٰتِ لَا نُكَلِّفُ
نَفْسًا إِلَّا وُسْعَهَآ ۫ أُولٰٓئِكَ أَصْحٰبُ الْجَنَّةِ ۚ
هُمْ فِيْهَا خٰلِدُوْنَ ﴿٤٢﴾

11. ಅರ್ಥಾತ್- ಸ್ವತಃ ಪಥಭ್ರಷ್ಟತೆಯನ್ನು ನೆಚ್ಚಿಕೊಂಡಿದ್ದಕ್ಕಾಗಿ ಒಂದು ವಿಧದ ಶಿಕ್ಷೆಯಾದರೆ ಇತರರನ್ನೂ ಪಥಭ್ರಷ್ಟಗೊಳಿಸಿದ್ದಕ್ಕಾಗಿ ಮತ್ತೊಂದು ವಿಧದ ಶಿಕ್ಷೆ. ತಮ್ಮ ಅಪರಾಧಗಳಿಗಾಗಿ ಒಂದು ಶಿಕ್ಷೆಯಾದರೆ ಇತರರಿಗೆ ಅಪರಾಧ ಕೃತ್ಯಗಳ ಬಳುವಳಿಯನ್ನು ಬಿಟ್ಟು ಬಂದಿದ್ದಕ್ಕಾಗಿ ಮತ್ತೊಂದು ಶಿಕ್ಷೆ.

43. ಅವರ ಹೃದಯಗಳಲ್ಲಿ ಒಬ್ಬರ ವಿರುದ್ಧ ಇನ್ನೊಬ್ಬರಿಗಿದ್ದ ಕ್ಲೇಶಗಳನ್ನು ನಾವು ತೆಗೆದುಬಿಡುವೆವು. ಅವರ ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವುವು. ಅವರು, "ನಮಗೆ ಈ ಮಾರ್ಗವನ್ನು ತೋರಿಸಿ ಕೊಟ್ಟ ಅಲ್ಲಾಹನಿಗೇ ಸರ್ವಸ್ತುತಿಯು. ಅಲ್ಲಾಹನು ನಮಗೆ ಮಾರ್ಗ ದರ್ಶನ ನೀಡದಿರುತ್ತಿದ್ದರೆ, ನಾವು ಸ್ವಯಂ ಮಾರ್ಗದರ್ಶನ ಹೊಂದುತ್ತಿರಲಿಲ್ಲ. ನಮ್ಮ ಪ್ರಭುವಿನಿಂದ ಕಳುಹಿಸಲ್ಪಟ್ಟ ಸಂದೇಶ ವಾಹಕರು ನಿಜಕ್ಕೂ ಸತ್ಯವನ್ನೇ ಪಡಕೊಂಡು ಬಂದಿದ್ದರು" ಎಂದು ಹೇಳುವರು. ಆಗ, "ನೀವು ವಾರೀಸುದಾರರಾಗಿ ಮಾಡಲ್ಪಟ್ಟಿರುವ ಈ ಸ್ವರ್ಗವು ನೀವು ಮಾಡುತ್ತಿದ್ದ ಕರ್ಮಗಳ ಪ್ರತಿಫಲವಾಗಿ ನಿಮಗೆ ಸಿಕ್ಕಿದೆ" ಎಂಬ ಧ್ವನಿ ಕೇಳಿ ಬರುವುದು.

وَنَزَعْنَا مَا فِي صُدُورِهِمْ مِّنْ غِلٍّ تَجْرِي
مِنْ تَحْتِهِمُ الْأَنْهٰرُ ۚ وَقَالُوا الْحَمْدُ لِلّٰهِ
الَّذِي هَدٰنَا لِهٰذَا ۖ وَمَا كُنَّا لِنَهْتَدِيَ لَوْ
لَا أَنْ هَدٰنَا اللّٰهُ ۚ لَقَدْ جَاءَتْ رُسُلُ
رَبِّنَا بِالْحَقِّ ۖ وَنُودُوا أَنْ تِلْكُمُ الْجَنَّةُ
أُورِثْتُمُوهَا بِمَا كُنْتُمْ تَعْمَلُونَ ﴿٤٣﴾

44. ಸ್ವರ್ಗದವರು ನರಕದವರನ್ನು ಕೂಗಿ ಹೀಗೆ ಹೇಳುವರು, "ನಮ್ಮ ಪ್ರಭು ನಮಗೆ ನೀಡಿದ್ದ ಸಕಲ ವಾಗ್ದಾನಗಳು ಸರಿಯಾಗಿರುವುದನ್ನು ನಾವು ಕಂಡುಕೊಂಡೆವು. ನಿಮ್ಮ ಪ್ರಭು ನಿಮಗೆ ಮಾಡಿದ್ದ ವಾಗ್ದಾನಗಳು ಸರಿಯಾಗಿರುವುದನ್ನು ನೀವು ಕಂಡುಕೊಂಡಿರಾ?" ಅವರು ಹೌದೆನ್ನುವರು. ಆಗ ಘೋಷಿಸುವವನೊಬ್ಬನು ಅವರ ನಡುವೆ ಹೀಗೆ ಘೋಷಿಸುವನು, ಅಕ್ರಮಿಗಳ ಮೇಲೆ ಅಲ್ಲಾಹನ ಶಾಪವಿದೆ.

وَنَادٰى أَصْحٰبُ الْجَنَّةِ أَصْحٰبَ النَّارِ أَنْ
قَدْ وَجَدْنَا مَا وَعَدَنَا رَبُّنَا حَقًّا فَهَلْ
وَجَدْتُمْ مَّا وَعَدَ رَبُّكُمْ حَقًّا ۖ قَالُوا نَعَمْ ۚ
فَأَذَّنَ مُؤَذِّنٌ بَيْنَهُمْ أَنْ لَّعْنَةُ اللّٰهِ
عَلَى الظّٰلِمِينَ ﴿٤٤﴾

45. ಅವರು ಅಲ್ಲಾಹನ ಮಾರ್ಗದಿಂದ ಜನರನ್ನು ತಡೆಯುತ್ತಿದ್ದರು, ಅದನ್ನು ಜಟಿಲಗೊಳಿಸಲು ಯತ್ನಿಸುತ್ತಿದ್ದರು ಹಾಗೂ ಪರ ಲೋಕವನ್ನು ನಿರಾಕರಿಸುತ್ತಿದ್ದರು.

الَّذِينَ يَصُدُّونَ عَنْ سَبِيلِ اللّٰهِ وَيَبْغُونَهَا
عِوَجًا ۚ وَهُمْ بِالْآخِرَةِ كٰفِرُونَ ﴿٤٥﴾

46. ಇವೆರಡೂ ವರ್ಗಗಳ ಮಧ್ಯೆ ಒಂದು ತೆರೆಯಿರುವುದು. ಅದರ ಶಿಖರ(ಅಲ್‌ರಾಫ್)ಗಳಲ್ಲಿ ಇನ್ನು ಕೆಲವರಿರುವರು. ಇವರು ಪ್ರತಿಯೊಬ್ಬನನ್ನು ಅವನ ಮುಖ ಮುದ್ರೆಯಿಂದಲೇ ಗುರುತು ಹಿಡಿಯುವರು ಮತ್ತು ಸ್ವರ್ಗದವರೊಡನೆ, "ನಿಮಗೆ ಶುಭವಾಗಲಿ" ಎಂದು ಕೂಗಿ ಹೇಳುವರು. ಇವರಿನ್ನೂ ಸ್ವರ್ಗದೊಳಗೆ ಪ್ರವೇಶಿಸಲಿಲ್ಲ. ಆದರೆ ಅದರ ಉಮೇದುವಾರರಾಗಿರುವರು.[12]

وَبَيْنَهُمَا حِجَابٌ ۚ وَعَلَى الْأَعْرَافِ رِجَالٌ
يَّعْرِفُونَ كُلًّا بِسِيمٰهُمْ ۚ وَنَادَوْا أَصْحٰبَ
الْجَنَّةِ أَنْ سَلٰمٌ عَلَيْكُمْ ۚ لَمْ يَدْخُلُوهَا
وَهُمْ يَطْمَعُونَ ﴿٤٦﴾

47. ಇವರ ದೃಷ್ಟಿಗಳು ನರಕದ ಕಡೆಗೆ ತಿರುಗಿದಾಗ ಇವರು, "ಓ ನಮ್ಮ ಪ್ರಭೂ, ನಮ್ಮನ್ನು ಈ ಅಕ್ರಮಿಗಳೊಂದಿಗೆ ಸೇರಿಸಬೇಡ" ಎಂದು ಹೇಳುವರು.

وَإِذَا صُرِفَتْ أَبْصٰرُهُمْ تِلْقَاءَ أَصْحٰبِ النَّارِ
قَالُوا رَبَّنَا لَا تَجْعَلْنَا مَعَ الْقَوْمِ الظّٰلِمِينَ ﴿٤٧﴾

12. 'ಅಸ್‌ಹಾಬುಲ್ ಅಲ್‌ರಾಫ್' ಅಥವಾ ಶಿಖರದವರು. ಅಂದರೆ ಸ್ವರ್ಗ ಪ್ರವೇಶಿಸಲು ಸಾಧ್ಯವಾಗುವಷ್ಟು ಸಕಾರಾತ್ಮಕ ಅಂಶಗಳನ್ನಾಗಲಿ, ನರಕಕ್ಕೆ ತಳ್ಳಿ ಬಿಡಲಾಗುವಷ್ಟು ನಕಾರಾತ್ಮಕ ಅಂಶಗಳನ್ನಾಗಲಿ ಹೊಂದಿರದವರು. ಆದ್ದರಿಂದ ಅವರು ಸ್ವರ್ಗ ಮತ್ತು ನರಕದ ಒಂದು ಸರಹದ್ದಿನಲ್ಲಿದ್ದು ಅಲ್ಲಾಹನ ಅನುಗ್ರಹದಿಂದ ತಮಗೂ ಸ್ವರ್ಗ ಪ್ರಾಪ್ತವಾಗಬಹುದು ಎಂಬ ನಿರೀಕ್ಷೆಯಲ್ಲಿರುವರು.

48. ಅನಂತರ ಈ 'ಶಿಖರದವರು' ನರಕದ ಕೆಲವು ಕುಖ್ಯಾತ ಜನರನ್ನು ಅವರ ಲಕ್ಷಣಗಳಿಂದಲೇ ಗುರುತು ಹಿಡಿದು, "ಇಂದು ನಿಮ್ಮ ಕೂಟಗಳೂ ನೀವು ಅಹಂಕಾರ ಪಡುತ್ತಿದ್ದ ವಸ್ತು ಒಡವೆಗಳೂ ನಿಮಗೆ ಯಾವ ಕೆಲಸಕ್ಕೂ ಬಾರದಾದವು ಎಂಬುದನ್ನು ನೀವು ಕಂಡುಕೊಂಡಿರಿ.

وَنَادٰۤى اَصْحٰبُ الْاَعْرَافِ رِجَالًا يَّعْرِفُوْنَهُمْ
بِسِيْمٰهُمْ قَالُوْا مَاۤ اَغْنٰى عَنْكُمْ جَمْعُكُمْ
وَمَا كُنْتُمْ تَسْتَكْبِرُوْنَ ﴿٤٨﴾

49. ಇವರಿಗೆ ಅಲ್ಲಾಹನು ತನ್ನ ಕೃಪೆಯಿಂದ ಏನನ್ನೂ ನೀಡಲಾರನೆಂದು ನೀವು ಆಣೆ ಹಾಕಿ ಹೇಳುತ್ತಿದ್ದುದು ಈ ಸ್ವರ್ಗವಾಸಿಗಳನ್ನು ಕುರಿತಾಗಿಯೇ ಅಲ್ಲವೇ? ಇಂದು "ಸ್ವರ್ಗದಲ್ಲಿ ಪ್ರವೇಶಿಸಿರಿ. ನಿಮಗೆ ಭಯವೂ ಇಲ್ಲ ವ್ಯಥೆಯೂ ಇಲ್ಲ" ಎಂದು ಹೇಳಿದುದು ಇವರೊಡನೆಯೇ ಅಲ್ಲವೇ?" ಎಂದು ಕೂಗಿ ಹೇಳುವರು.

اَهٰۤؤُلَآءِ الَّذِيْنَ اَقْسَمْتُمْ لَا يَنَالُهُمُ اللّٰهُ
بِرَحْمَةٍ ؕ اُدْخُلُوا الْجَنَّةَ لَا خَوْفٌ عَلَيْكُمْ
وَلَاۤ اَنْتُمْ تَحْزَنُوْنَ ﴿٤٩﴾

50-51. ನರಕದವರು ಸ್ವರ್ಗದವರನ್ನು ಕೂಗಿ, "ನಮ್ಮ ಮೇಲೆ ಒಂದಿಷ್ಟು ನೀರನ್ನು ಸುರಿದುಬಿಡಿರಿ ಅಥವಾ ಅಲ್ಲಾಹನು ನಿಮಗೆ ಕೊಟ್ಟ ಆಹಾರದಿಂದಲೇ ತುಸು ಎಸೆದು ಬಿಡಿರಿ" ಎನ್ನುವರು. ಆಗ, "ಅಲ್ಲಾಹನ ಧರ್ಮವನ್ನು ಆಟವನ್ನಾಗಿಯೂ ವಿನೋದವನ್ನಾಗಿಯೂ ಮಾಡಿಕೊಂಡಿದ್ದ ಹಾಗೂ ಭೂಲೋಕದ ಜೀವನದಿಂದಾಗಿ ವಂಚನೆಗೊಳಪಟ್ಟಿದ್ದ ಸತ್ಯನಿಷೇಧಿಗಳಿಗೆ ಅಲ್ಲಾಹನು ಇವೆರಡು ವಸ್ತುಗಳನ್ನೂ ನಿಷಿದ್ಧಗೊಳಿಸಿರುತ್ತಾನೆ. ಅವರು ಇಂದಿನ ಭೇಟಿಯನ್ನು ಮರೆತುಬಿಟ್ಟಂತೆಯೇ ನಮ್ಮ ದೃಷ್ಟಾಂತಗಳನ್ನು ನಿರಾಕರಿಸುತ್ತಿದ್ದುದರಿಂದ ಇಂದು ನಾವೂ ಅವರನ್ನು ಮರೆತುಬಿಡುವೆವು ಎಂದು ಅಲ್ಲಾಹನು ಹೇಳುತ್ತಾನೆ" ಎಂದು ಅವರು ಉತ್ತರ ಕೊಡುವರು.

وَنَادٰۤى اَصْحٰبُ النَّارِ اَصْحٰبَ الْجَنَّةِ اَنْ
اَفِيْضُوْا عَلَيْنَا مِنَ الْمَآءِ اَوْ مِمَّا رَزَقَكُمُ
اللّٰهُ ؕ قَالُوْۤا اِنَّ اللّٰهَ حَرَّمَهُمَا عَلَى الْكٰفِرِيْنَ ﴿٥٠﴾
الَّذِيْنَ اتَّخَذُوْا دِيْنَهُمْ لَهْوًا وَّلَعِبًا وَّ
غَرَّتْهُمُ الْحَيٰوةُ الدُّنْيَا ۚ فَالْيَوْمَ نَنْسٰهُمْ
كَمَا نَسُوْا لِقَآءَ يَوْمِهِمْ هٰذَا ۙ وَمَا
كَانُوْا بِاٰيٰتِنَا يَجْحَدُوْنَ ﴿٥١﴾

52. ನಾವು ಜ್ಞಾನದ ಆಧಾರದಲ್ಲಿ ಸವಿಸ್ತಾರಗೊಳಿಸಿರುವ ಹಾಗೂ ವಿಶ್ವಾಸವಿಡುವವರಿಗೆ ಮಾರ್ಗದರ್ಶನ ಮತ್ತು ಕರುಣೆಯಾಗಿರುವ ಗ್ರಂಥವನ್ನು ಇವರ ಬಳಿಗೆ ತಂದಿದ್ದೇವೆ.

وَلَقَدْ جِئْنٰهُمْ بِكِتٰبٍ فَصَّلْنٰهُ عَلٰى عِلْمٍ
هُدًى وَّرَحْمَةً لِّقَوْمٍ يُّؤْمِنُوْنَ ﴿٥٢﴾

53. ಇನ್ನೇನು ಈ ಗ್ರಂಥವು ತಿಳಿಸುತ್ತಿರುವ ಪರಿಣಾಮವು ತೋರಿ ಬರಬೇಕೆಂಬುದರ ಹೊರತು ಬೇರೇನನ್ನಾದರೂ ಇವರು ನಿರೀಕ್ಷಿಸುತ್ತಿರುವರೇ? ಆ ಪರಿಣಾಮವು ಮುಂದೆ ಬಂದು ಬಿಟ್ಟಂದು, ಈ ಹಿಂದೆ ಅದನ್ನು ಅವಗಣಿಸಿದ್ದವರೇ ಹೀಗೆ

هَلْ يَنْظُرُوْنَ اِلَّا تَاْوِيْلَهٗ ؕ يَوْمَ يَاْتِيْ
تَاْوِيْلُهٗ يَقُوْلُ الَّذِيْنَ نَسُوْهُ مِنْ قَبْلُ
قَدْ جَآءَتْ رُسُلُ رَبِّنَا بِالْحَقِّ ۚ فَهَلْ لَّنَا

ಹೇಳುವರು: "ನಿಜಕ್ಕೂ ನಮ್ಮ ಪ್ರಭುವಿನ ಸಂದೇಶವಾಹಕರು ಸತ್ಯ ಸಹಿತವೇ ಬಂದಿದ್ದರು. ಇನ್ನು ನಮ್ಮ ಪರವಾಗಿ ಶಿಫಾರಸು ಮಾಡಲು ನಮಗೆ ಯಾರಾದರೂ ಶಿಫಾರಸುದಾರರು ಸಿಗುವರೇ? ಅಥವಾ ನಾವು ಹಿಂದೆ ಮಾಡುತ್ತಿದ್ದುದರ ಬದಲಿಗೆ ಇನ್ನು ಬೇರೆ ರೀತಿಯಿಂದ ಕಾರ್ಯವೆಸಗಿ ತೋರಿಸಲಿಕ್ಕಾಗಿ ನಮ್ಮನ್ನು ಇನ್ನೊಮ್ಮೆ ಹಿಂದಕ್ಕೆ ಕಳುಹಿಸಿ ಬಿಡಲಿ."- ಅವರು ತಮ್ಮನ್ನು ತಾವೇ ನಷ್ಟಕ್ಕೆ ಗುರಿಪಡಿಸಿಕೊಂಡರು. ಅವರು ಸೃಷ್ಟಿಸಿಕೊಂಡಿದ್ದ ಎಲ್ಲ ಸುಳ್ಳುಗಳೂ ಇಂದು ಅವರಿಂದ ಮಾಯವಾದುವು.

مِنْ شُفَعَآءَ فَيَشْفَعُوْا لَنَآ اَوْ نُرَدُّ فَنَعْمَلَ غَيْرَ الَّذِىْ كُنَّا نَعْمَلُ ؕ قَدْ خَسِرُوْٓا اَنْفُسَهُمْ وَضَلَّ عَنْهُمْ مَّا كَانُوْا يَفْتَرُوْنَ ﴿۵۳﴾

54. ವಾಸ್ತವದಲ್ಲಿ ನಿಮ್ಮ ಪ್ರಭು ಅಲ್ಲಾಹನೇ ಆಗಿರುತ್ತಾನೆ. ಅವನು ಭೂಮಿ-ಆಕಾಶಗಳನ್ನು ಆರು ದಿನಗಳಲ್ಲಿ ಸೃಷ್ಟಿಸಿದನು.[13] ತರುವಾಯ ತನ್ನ 'ವಿಶ್ವ ಸಾಮ್ರಾಜ್ಯ ಪೀಠ'ದಲ್ಲಿ (ಅರ್ಶ್) ವಿರಾಜಮಾನನಾದನು.[14] ಅವನು ಇರುಳನ್ನು ಹಗಲಿನ ಮೇಲೆ ಹರಡುತ್ತಾನೆ ಮತ್ತು ರಾತ್ರೆಯನ್ನು ಹಗಲು ಹಿಂಬಾಲಿಸಿಕೊಂಡು ಓಡಿ ಬರುತ್ತದೆ. ಅವನು ಸೂರ್ಯನನ್ನೂ ಚಂದ್ರನನ್ನೂ ನಕ್ಷತ್ರಗಳನ್ನೂ ಸೃಷ್ಟಿಸಿದನು. ಎಲ್ಲವೂ ಅವನ ಆಜ್ಞಾಧೀನವಾಗಿವೆ. ಎಚ್ಚರಿಕೆ! ಅವನದೇ ಸೃಷ್ಟಿ. ಅವನದೇ ಅಪ್ಪಣೆ.[15] ಸರ್ವಲೋಕಗಳ ಒಡೆಯನೂ ಪ್ರಭುವೂ ಆಗಿರುವ ಅಲ್ಲಾಹನುಮಹಾ ಸಮೃದ್ಧನು.[16]

اِنَّ رَبَّكُمُ اللّٰهُ الَّذِىْ خَلَقَ السَّمٰوٰتِ وَالْاَرْضَ فِىْ سِتَّةِ اَيَّامٍ ثُمَّ اسْتَوٰى عَلَى الْعَرْشِ ۚ يُغْشِى الَّيْلَ النَّهَارَ يَطْلُبُهٗ حَثِيْثًا ۙ وَّالشَّمْسَ وَالْقَمَرَ وَالنُّجُوْمَ مُسَخَّرٰتٍۭ بِاَمْرِهٖ ؕ اَلَا لَهُ الْخَلْقُ وَالْاَمْرُ ؕ تَبٰرَكَ اللّٰهُ رَبُّ الْعٰلَمِيْنَ ﴿۵۴﴾

55. ನಿಮ್ಮ ಪ್ರಭುವನ್ನು ಭಯ ವಿನಯದೊಂದಿಗೆ ಮತ್ತು ರಹಸ್ಯವಾಗಿ ಪ್ರಾರ್ಥಿಸಿರಿ. ನಿಶ್ಚಯವಾಗಿಯೂ ಅವನು ಸೀಮೋಲ್ಲಂಘಕರನ್ನು ಮೆಚ್ಚುವುದಿಲ್ಲ.

اُدْعُوْا رَبَّكُمْ تَضَرُّعًا وَّخُفْيَةً ؕ اِنَّهٗ لَا يُحِبُّ الْمُعْتَدِيْنَ ﴿۵۵﴾

56. ಭೂಮಿಯಲ್ಲಿ ಸುಧಾರಣೆಯಾಗಿರುವಾಗ ಕ್ಷೋಭೆಯನ್ನುಂಟು ಮಾಡಬೇಡಿರಿ.[17] ಭಯದೊಂದಿಗೂ ಆಶೆಯೊಂದಿಗೂ

وَلَا تُفْسِدُوْا فِى الْاَرْضِ بَعْدَ اِصْلَاحِهَا وَادْعُوْهُ خَوْفًا وَّطَمَعًا ؕ اِنَّ رَحْمَتَ اللّٰهِ

13. ಇಲ್ಲಿ 'ದಿನ' ಎಂಬ ಪದವು ಲೋಕದ ಜನರು ಇಪ್ಪತ್ತನಾಲ್ಕು ಗಂಟೆಗಳಿಗೆ ಸಮಾನವಾದುದೆಂದು ಭಾವಿಸುವ ದಿನವೂ ಆಗಿರಬಹುದು. ಅಥವಾ ಇದನ್ನು 'ಯುಗ' ಎಂಬ ಅರ್ಥದಲ್ಲೂ ಉಪಯೋಗಿಸಲಾಗಿರಬಹುದು.

14. ದೇವನು ವಿಶ್ವಸಿಂಹಾಸನದಲ್ಲಿ ವಿರಾಜಮಾನನಾಗುವ ಬಗೆ ಹೇಗೆ ಎಂದು ವಿವರವಾಗಿ ತಿಳಿದು ಕೊಳ್ಳಲು ನಮಗೆ ಸಾಧ್ಯವಿಲ್ಲ. ಇದು 'ಮುತಶಾಬಿಹಾತ್' (ಅರ್ಥವಿವರಣೆಯಲ್ಲಿ ಅಸ್ಪಷ್ಟತೆಗೆ ಆಸ್ಪದವಿರುವಂತಹ ಸೂಕ್ತ)ಗಳಲ್ಲಾಗಿದೆ. ಅದಕ್ಕೆ ನಿರ್ದಿಷ್ಟ ಅರ್ಥವನ್ನು ಗೊತ್ತುಪಡಿಸುವಂತಿಲ್ಲ.

15. ಅರ್ಥಾತ್- ದೇವನೇ ಈ ನಿಸರ್ಗವನ್ನು ಸೃಷ್ಟಿಸಿದ್ದಾನೆ. ಅವನೇ ಇದರ ಆಜ್ಞಾಧಿಕಾರಿಯಾಗಿದ್ದಾನೆ. ತನ್ನ ಸೃಷ್ಟಿಯನ್ನು ಅವನು ಇತರರ ಅಧೀನಕ್ಕೆ ಕೊಟ್ಟು ಬಿಟ್ಟಿಲ್ಲ. ಅಂತೆಯೇ ತನ್ನ ಯಾವುದೇ ಸೃಷ್ಟಿಗಳೂ ಸ್ವಚ್ಛಂದವಾಗಿ ಮನಬಂದಂತೆ ವರ್ತಿಸಲು ಅಧಿಕಾರ ನೀಡಿಲ್ಲ.

16. ಅಲ್ಲಾಹನು ಮಹಾ ಸಮೃದ್ಧನಾಗಿದ್ದಾನೆಂದರೆ ಅವನ ಗುಣವಿಶೇಷತೆ ಮತ್ತು ಒಳಿತುಗಳು ನಿಸ್ಸೀಮವಾಗಿವೆ. ಅವನಿಂದ ಲೆಕ್ಕಮಿತಿ ಇಲ್ಲದಷ್ಟು ಒಳಿತುಗಳು ಹರಡುತ್ತಿವೆ.

17. ಅರ್ಥಾತ್-ನೂರಾರು, ಸಾವಿರಾರು ವರ್ಷಗಳ ಅವಧಿಯಲ್ಲಿ ಅಲ್ಲಾಹನ ಪ್ರವಾದಿಗಳು ಮತ್ತು ಮಾನವಕುಲದ ಸುಧಾರಕರ ಪ್ರಯತ್ನಗಳಿಂದ ಮನುಷ್ಯನ ಚಾರಿತ್ರ್ಯ ಮತ್ತು ನಾಗರಿಕತೆಯಲ್ಲಿ ಆಗಿರುವ ಸುಧಾರಣೆಯನ್ನು ತಮ್ಮ ದುಷ್ಕೃತ್ಯಗಳ ಮೂಲಕ ಹಾಳುಗೆಡಹದಿರಿ.

ಅಲ್ಲಾಹನನ್ನೇ ಕೂಗಿ ಪ್ರಾರ್ಥಿಸಿರಿ. ನಿಶ್ಚಯವಾಗಿಯೂ ಅಲ್ಲಾಹನ ಕೃಪೆಯು ಸಜ್ಜನರ ಸಮೀಪದಲ್ಲಿದೆ.

قَرِيْبٌ مِّنَ الْمُحْسِنِيْنَ ﴿٥٦﴾

57. ತನ್ನ ಕೃಪೆಗೆ ಮುಂದಾಗಿ ಸುವಾರ್ತೆಯೊಂದಿಗೆ ಮಾರುತಗಳನ್ನು ಕಳುಹಿಸುವವನು ಅಲ್ಲಾಹನೇ ಆಗಿರುತ್ತಾನೆ. ಅನಂತರ ಅವು ನೀರನ್ನು ಹೊತ್ತ ಮೋಡಗಳನ್ನೆತ್ತಿಕೊಂಡಾಗ ಅವುಗಳಿಗೆ ಯಾವುದಾದರೊಂದು ನಿರ್ಜೀವ ಭೂಭಾಗದ ಕಡೆಗೆ ಚಲನೆ ಕೊಡುತ್ತಾನೆ ಮತ್ತು ಮಳೆಗರೆದು ಆ ನಿರ್ಜೀವ ಭೂಭಾಗದಿಂದ ತರತರದ ಫಲಗಳನ್ನು ಹೊರ ತರುತ್ತಾನೆ. ನೋಡಿರಿ ಹೀಗೆಯೇ ನಾವು ಮೃತರನ್ನು ಮರಣಾವಸ್ಥೆಯಿಂದ ಹೊರ ತರುತ್ತೇವೆ. ಇದು ನೀವು ಈ ಪ್ರತ್ಯಕ್ಷ ದರ್ಶನದಿಂದ ಪಾಠ ಕಲಿಯುವಿರೆಂಬ ನಿರೀಕ್ಷೆಯಿಂದಾಗಿರುತ್ತದೆ.

وَهُوَ الَّذِیْ یُرْسِلُ الرِّیٰحَ بُشْرًاۢ بَیْنَ یَدَیْ رَحْمَتِهٖ ؕ حَتّٰۤی اِذَاۤ اَقَلَّتْ سَحَابًا ثِقَالًا سُقْنٰهُ لِبَلَدٍ مَّیِّتٍ فَاَنْزَلْنَا بِهِ الْمَآءَ فَاَخْرَجْنَا بِهٖ مِنْ كُلِّ الثَّمَرٰتِ ؕ كَذٰلِكَ نُخْرِجُ الْمَوْتٰی لَعَلَّكُمْ تَذَكَّرُوْنَ ﴿٥٧﴾

58. ಉತ್ತಮ ನೆಲವು ತನ್ನ ಪ್ರಭುವಿನ ಆಜ್ಞೆಯಿಂದ ವಿಪುಲವಾಗಿ ಬೆಳೆ ತರುತ್ತದೆ. ಕೆಟ್ಟ ನೆಲದಿಂದ ಕೆಟ್ಟ ಬೆಳೆಯ ವಿನಾ ಇನ್ನೇನೂ ಹೊರ ಬರುವುದಿಲ್ಲ. ಇದೇ ರೀತಿಯಲ್ಲಿ ಕೃತಜ್ಞರಾಗುವವರಿಗೆ ನಾವು ಪದೇ ಪದೇ ನಮ್ಮ ದೃಷ್ಟಾಂತಗಳನ್ನು ಮುಂದಿಡುತ್ತೇವೆ.

وَالْبَلَدُ الطَّیِّبُ یَخْرُجُ نَبَاتُهٗ بِاِذْنِ رَبِّهٖ ۚ وَالَّذِیْ خَبُثَ لَا یَخْرُجُ اِلَّا نَكِدًا ؕ كَذٰلِكَ نُصَرِّفُ الْاٰیٰتِ لِقَوْمٍ یَّشْكُرُوْنَ ﴿٥٨﴾

59. ನಾವು ನೂಹರನ್ನು ಅವರ ಜನಾಂಗದ ಕಡೆಗೆ ಕಳುಹಿಸಿದೆವು.[18] ಅವರು ಹೇಳಿದರು, "ಓ ನನ್ನ ಜನಾಂಗ ಬಾಂಧವರೇ, ಅಲ್ಲಾಹನ ದಾಸ್ಯ-ಆರಾಧನೆ ಮಾಡಿರಿ. ಅವನ ಹೊರತು ನಿಮ್ಮ ಆರಾಧ್ಯನಾರೂ ಇಲ್ಲ. ನಾನು ನಿಮ್ಮ ಬಗ್ಗೆ ಒಂದು ಭಯಾನಕ ದಿನದ ಯಾತನೆ ಯಿಂದ ಭಯಪಡುತ್ತೇನೆ."

لَقَدْ اَرْسَلْنَا نُوْحًا اِلٰی قَوْمِهٖ فَقَالَ یٰقَوْمِ اعْبُدُوا اللّٰهَ مَا لَكُمْ مِّنْ اِلٰهٍ غَیْرُهٗ ؕ اِنِّیْۤ اَخَافُ عَلَیْكُمْ عَذَابَ یَوْمٍ عَظِیْمٍ ﴿٥٩﴾

60. ಅವರ ಜನಾಂಗದ ಮುಂದಾಳುಗಳು ಹೇಳಿದರು: "ನಮಗಂತು ನೀವು ಸುವ್ಯಕ್ತ ಪಥಭ್ರಷ್ಟತೆಯಲ್ಲಿ ಸಿಲುಕಿರುವುದು ಕಂಡು ಬರುತ್ತದೆ."

قَالَ الْمَلَاُ مِنْ قَوْمِهٖۤ اِنَّا لَنَرٰىكَ فِیْ ضَلٰلٍ مُّبِیْنٍ ﴿٦٠﴾

61. ನೂಹರು ಹೇಳಿದರು- "ಓ ನನ್ನ ಜನಾಂಗ ಬಾಂಧವರೇ, ನಾನು ಯಾವುದೇ ಪಥಭ್ರಷ್ಟತೆಯಲ್ಲಿ ಸಿಲುಕಿರುವುದಿಲ್ಲ. ನಿಜವಾಗಿ ನಾನು ಸರ್ವಲೋಕ ಪಾಲಕನ ಸಂದೇಶವಾಹಕನಾಗಿರುತ್ತೇನೆ.

قَالَ یٰقَوْمِ لَیْسَ بِیْ ضَلٰلَةٌ وَّلٰكِنِّیْ رَسُوْلٌ مِّنْ رَّبِّ الْعٰلَمِیْنَ ﴿٦١﴾

62. ನಿಮಗೆ ನನ್ನ ಪ್ರಭುವಿನ ಸಂದೇಶಗಳನ್ನು ತಲಪಿಸುತ್ತೇನೆ. ನಾನು ನಿಮ್ಮ ಹಿತಚಿಂತಕನಾಗಿರುತ್ತೇನೆ. ನಿಮಗೆ ತಿಳಿಯದಿರುವುದು ಅಲ್ಲಾಹನ ಕಡೆಯಿಂದ ನನಗೆ ತಿಳಿದಿದೆ.

اُبَلِّغُكُمْ رِسٰلٰتِ رَبِّیْ وَاَنْصَحُ لَكُمْ وَاَعْلَمُ مِنَ اللّٰهِ مَا لَا تَعْلَمُوْنَ ﴿٦٢﴾

18. ಇಂದು 'ಇರಾಕ್' ಎಂದು ಕರೆಯಲಾಗುವ ಪ್ರದೇಶದಲ್ಲಿ ಹ.ನೂಹ್(ಅ) ಜನಾಂಗ ವಾಸಿಸುತ್ತಿತ್ತು.

63. ನಿಮಗೆ ಎಚ್ಚರಿಕೆ ನೀಡಿ ನೀವು ದುರ್ನೀತಿಯಿಂದ ರಕ್ಷಿಸಲ್ಪಡುವಂತೆ ಮತ್ತು ನಿಮ್ಮ ಮೇಲೆ ದಯೆ ತೋರಲ್ಪಡುವಂತೆ ನಿಮ್ಮ ಬಳಿಗೆ ನಿಮ್ಮ ಸ್ವಂತ ಜನಾಂಗದ ಓರ್ವ ವ್ಯಕ್ತಿಯ ಮೂಲಕ ನಿಮ್ಮ ಪ್ರಭುವಿನ ಉದ್ಬೋಧ ಬಂದುದರ ಬಗ್ಗೆ ನಿಮಗೆ ಆಶ್ಚರ್ಯ ವಾಗುತ್ತಿದೆಯೇ?"

أَوَعَجِبْتُمْ أَن جَآءَكُمْ ذِكْرٌ مِّن رَّبِّكُمْ عَلَىٰ رَجُلٍ مِّنكُمْ لِيُنذِرَكُمْ وَلِتَتَّقُوا۟ وَلَعَلَّكُمْ تُرْحَمُونَ ﴿٦٣﴾

64. ಆದರೆ ಅವರು ಇವರನ್ನು ಸುಳ್ಳಾಗಿಸಿ ಬಿಟ್ಟರು. ಕೊನೆಗೆ ನಾವು ಇವರನ್ನು ಹಾಗೂ ಇವರ ಸಂಗಡಿಗರನ್ನು ಒಂದು ನಾವೆಯಲ್ಲಿ ರಕ್ಷಿಸಿದೆವು ಮತ್ತು ನಮ್ಮ ವಚನಗಳನ್ನು ಸುಳ್ಳಾಗಿಸಿದ್ದವರನ್ನು ಮುಳುಗಿಸಿಬಿಟ್ಟೆವು. ವಾಸ್ತವದಲ್ಲಿ ಅವರು ಕುರುಡ ಜನಾಂಗ ವಾಗಿದ್ದರು.

فَكَذَّبُوهُ فَأَنجَيْنَٰهُ وَٱلَّذِينَ مَعَهُۥ فِى ٱلْفُلْكِ وَأَغْرَقْنَا ٱلَّذِينَ كَذَّبُوا۟ بِـَٔايَٰتِنَآ ۚ إِنَّهُمْ كَانُوا۟ قَوْمًا عَمِينَ ﴿٦٤﴾

65. ನಾವು 'ಆದ್'ರ (ಜನಾಂಗದವರ) ಕಡೆಗೆ ಅವರ ಸಹೋದರ 'ಹೂದ'ರನ್ನು ಕಳುಹಿಸಿದೆವು.[19] ಅವರು ಹೇಳಿದರು; "ಓ ನನ್ನ ಜನಾಂಗ ಬಾಂಧವರೇ, ಅಲ್ಲಾಹನ ದಾಸ್ಯ-ಆರಾಧನೆ ಮಾಡಿರಿ. ಅವನ ಹೊರತು ನಿಮ್ಮ ಆರಾಧ್ಯನಾರೂ ಇಲ್ಲ. ನೀವು ದೇವ ಭಯವಿರಿಸಿ ಕೊಳ್ಳುವುದಿಲ್ಲವೇ?"

وَإِلَىٰ عَادٍ أَخَاهُمْ هُودًا ۗ قَالَ يَٰقَوْمِ ٱعْبُدُوا۟ ٱللَّهَ مَا لَكُم مِّنْ إِلَٰهٍ غَيْرُهُۥٓ ۚ أَفَلَا تَتَّقُونَ ﴿٦٥﴾

66. ಅವರ ಜನಾಂಗದ ಸತ್ಯನಿಷೇಧಿ ಮುಂದಾಳುಗಳು, "ನಾವು ನಿನ್ನನ್ನು ಬುದ್ಧಿಹೀನತೆಯಲ್ಲಿ ಕಾಣುತ್ತೇವೆ. ನೀನು ಸುಳ್ಳುಗಾರನೆಂದು ನಾವು ಭಾವಿಸುತ್ತೇವೆ" ಎಂದು ಉತ್ತರಿಸಿದರು.

قَالَ ٱلْمَلَأُ ٱلَّذِينَ كَفَرُوا۟ مِن قَوْمِهِۦٓ إِنَّا لَنَرَىٰكَ فِى سَفَاهَةٍ وَإِنَّا لَنَظُنُّكَ مِنَ ٱلْكَٰذِبِينَ ﴿٦٦﴾

67. ಅವರು ಹೇಳಿದರು; "ಓ ನನ್ನ ಜನಾಂಗ ಬಾಂಧವರೇ, ನನ್ನಲ್ಲಿ ಬುದ್ಧಿಶೂನ್ಯತೆ ಇಲ್ಲ. ನಿಜವಾಗಿ ನಾನು ಸರ್ವಲೋಕಪಾಲಕನ ಸಂದೇಶವಾಹಕನಾಗಿರುತ್ತೇನೆ.

قَالَ يَٰقَوْمِ لَيْسَ بِى سَفَاهَةٌ وَلَٰكِنِّى رَسُولٌ مِّن رَّبِّ ٱلْعَٰلَمِينَ ﴿٦٧﴾

68. ನಿಮಗೆ ನನ್ನ ಪ್ರಭುವಿನ ಸಂದೇಶಗಳನ್ನು ತಲಪಿಸುತ್ತೇನೆ ಮತ್ತು ನೀವು ಭರವಸೆಯಿಟ್ಟು ಕೊಳ್ಳಬಹುದಾದಂತಹ ಹಿತೈಷಿಯಾಗಿರು ತ್ತೇನೆ.

أُبَلِّغُكُمْ رِسَٰلَٰتِ رَبِّى وَأَنَا۠ لَكُمْ نَاصِحٌ أَمِينٌ ﴿٦٨﴾

69. ನಿಮಗೆ ಎಚ್ಚರಿಕೆ ನೀಡಲಿಕ್ಕಾಗಿ ನಿಮ್ಮ ಸ್ವಂತ ಜನಾಂಗದವನ ಮೂಲಕ ನಿಮ್ಮ ಪ್ರಭುವಿನ ಉದ್ಬೋಧ ಬಂದುದಕ್ಕಾಗಿ ನಿಮಗೆ

أَوَعَجِبْتُمْ أَن جَآءَكُمْ ذِكْرٌ مِّن رَّبِّكُمْ عَلَىٰ رَجُلٍ مِّنكُمْ لِيُنذِرَكُمْ ۚ وَٱذْكُرُوٓا۟

19. ಆದ್ ಜನಾಂಗದ ನೈಜ ವಾಸಸ್ಥಳ 'ಅಹ್‌ಕಾಫ್' ಆಗಿತ್ತು. ಅದು ಹಿಜಾಝ್, ಯಮನ್ ಮತ್ತು ಯಮಾಮದ ನಡುವೆ ಇತ್ತು. ಅಲ್ಲಿಂದಲೇ ಅವರು ಯಮನ್‌ನ ಪಶ್ಚಿಮ ತೀರ ಪ್ರದೇಶಗಳು, ಒಮಾನ್, ಹಳ್ರಮೌತ್‌ಗಳಿಂದ ಇರಾಕ್‌ನ ತನಕ ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಿದ್ದರು.

ಆಶ್ಚರ್ಯವಾಯಿತೇ? ನಿಮ್ಮ ಪ್ರಭು ನೂಹರ ಜನಾಂಗದ ತರುವಾಯ ನಿಮ್ಮನ್ನು ಅದರ ಉತ್ತರಾಧಿಕಾರಿಯನ್ನಾಗಿಯೂ ದೃಢಕಾಯರನ್ನಾಗಿಯೂ ಮಾಡಿದನೆಂಬುದನ್ನು ಮರೆಯದಿರಿ. ಆದ್ದರಿಂದ ಅಲ್ಲಾಹನ ಮಹಿಮೆಯನ್ನು ಸ್ಮರಿಸಿರಿ.[20] ನೀವು ಯಶಸ್ವಿಗಳಾಗಬಹುದು."

إِذْ جَعَلَكُمْ خُلَفَاءَ مِنْ بَعْدِ قَوْمِ نُوحٍ
وَزَادَكُمْ فِي الْخَلْقِ بَصْطَةً ۖ فَاذْكُرُوا
آلَاءَ اللَّهِ لَعَلَّكُمْ تُفْلِحُونَ ﴿٦٩﴾

70. ಅವರು ಹೇಳಿದರು: "ನಾವು ಏಕಮಾತ್ರ ಅಲ್ಲಾಹನನ್ನು ಆರಾಧಿಸಬೇಕು ಮತ್ತು ನಮ್ಮ ಪೂರ್ವಿಕರು ಆರಾಧಿಸುತ್ತಿದ್ದವರನ್ನು ಬಿಟ್ಟುಬಿಡಬೇಕೆಂದು ನೀನು ನಮ್ಮ ಬಳಿಗೆ ಬಂದಿರುವೆಯಾ? ನೀನು ಸತ್ಯವಾದಿಯಾಗಿದ್ದರೆ ನೀನು ನಮಗೆ ಬೆದರಿಕೆ ಹಾಕುತ್ತಿರುವ ಆ ಯಾತನೆಯನ್ನು ತಂದುಬಿಡು."

قَالُوا أَجِئْتَنَا لِنَعْبُدَ اللَّهَ وَحْدَهُ وَنَذَرَ مَا
كَانَ يَعْبُدُ آبَاؤُنَا ۖ فَأْتِنَا بِمَا تَعِدُنَا إِنْ
كُنْتَ مِنَ الصَّادِقِينَ ﴿٧٠﴾

71. ಅವರು ಹೇಳಿದರು: "ನಿಮ್ಮ ಮೇಲೆ ನಿಮ್ಮ ಪ್ರಭುವಿನ ಶಾಪ ಬಿದ್ದಿತು ಮತ್ತು ಅವನ ಕ್ರೋಧವೆರಗಿತು. ಅಲ್ಲಾಹನು ಯಾವ ಆಧಾರ ಪ್ರಮಾಣಗಳನ್ನೂ ಇಳಿಸದಿರುವ, ನೀವು ಮತ್ತು ನಿಮ್ಮ ಪೂರ್ವಿಕರು ಇಟ್ಟುಕೊಂಡಂತಹ ಹೆಸರುಗಳ ಬಗ್ಗೆ ನೀವು ನನ್ನೊಂದಿಗೆ ಜಗಳವಾಡುತ್ತೀರಾ?[21] ನೀವೂ ಕಾದುಕೊಂಡಿರಿ, ನಾನೂ ನಿಮ್ಮೊಂದಿಗೆ ಕಾದಿರುತ್ತೇನೆ."

قَالَ قَدْ وَقَعَ عَلَيْكُمْ مِنْ رَبِّكُمْ رِجْسٌ
وَغَضَبٌ ۖ أَتُجَادِلُونَنِي فِي أَسْمَاءٍ سَمَّيْتُمُوهَا
أَنْتُمْ وَآبَاؤُكُمْ مَا نَزَّلَ اللَّهُ بِهَا مِنْ سُلْطَانٍ ۚ
فَانْتَظِرُوا إِنِّي مَعَكُمْ مِنَ الْمُنْتَظِرِينَ ﴿٧١﴾

72. ಕೊನೆಗೆ ನಾವು ನಮ್ಮ ಕೃಪೆಯಿಂದ ಹೂದ್ ಮತ್ತು ಅವರ ಸಂಗಡಿಗರನ್ನು ರಕ್ಷಿಸಿದೆವು ಮತ್ತು ನಮ್ಮ ನಿದರ್ಶನಗಳನ್ನು ಸುಳ್ಳಾಗಿಸಿದವರ ಬೇರನ್ನೇ ಕಡಿದುಬಿಟ್ಟೆವು. ಅವರು ವಿಶ್ವಾಸ ವಿರಿಸುವವರಾಗಿರಲಿಲ್ಲ.

فَأَنْجَيْنَاهُ وَالَّذِينَ مَعَهُ بِرَحْمَةٍ مِنَّا
وَقَطَعْنَا دَابِرَ الَّذِينَ كَذَّبُوا بِآيَاتِنَا ۖ
وَمَا كَانُوا مُؤْمِنِينَ ﴿٧٢﴾ ع

73. 'ಸಮೂದ್' (ಜನಾಂಗದವರ) ಕಡೆಗೆ ನಾವು ಅವರ ಸಹೋದರ ಸಾಲಿಹರನ್ನು ಕಳುಹಿಸಿದೆವು.[22] ಅವರು ಹೇಳಿದರು: "ಓ ನನ್ನ ಜನಾಂಗ ಬಾಂಧವರೇ, ಅಲ್ಲಾಹನ ದಾಸ್ಯ-ಆರಾಧನೆ ಮಾಡಿರಿ.

وَإِلَىٰ ثَمُودَ أَخَاهُمْ صَالِحًا ۗ قَالَ يَا قَوْمِ
اعْبُدُوا اللَّهَ مَا لَكُمْ مِنْ إِلَٰهٍ غَيْرُهُ ۖ قَدْ

وقف لازم

20. ಮೂಲದಲ್ಲಿ 'ಆಲಾಅ್' ಎಂಬ ಪದ ಪ್ರಯೋಗವಾಗಿದೆ. ಅದರ ಅರ್ಥ ಅನುಗ್ರಹ, ಮಹಿಮೆ ಮತ್ತು ಉನ್ನತ ಗುಣಗಳು ಎಂದಾಗಿದೆ.

21. ಅರ್ಥಾತ್- ನೀವು ಕೆಲವರನ್ನು ಮಳೆಯ, ಗಾಳಿಯ, ಸಂಪತ್ತಿನ ಮತ್ತು ರೋಗರುಜಿನಗಳ ದೇವರೆಂದು ಕರೆಯುತ್ತೀರಿ. ವಾಸ್ತವದಲ್ಲಿ ಆ ಪೈಕಿ ಯಾರೂ ಯಾವುದರ ದೇವರೂ ಅಲ್ಲ. ಇದೆಲ್ಲವೂ ನೀವು ಅವರಿಗೆ ಕೊಟ್ಟಿರುವ ಹೆಸರುಗಳಾಗಿವೆ. ಅವುಗಳಿಗಾಗಿ ಜಗಳ ಮಾಡುವವರು ವಾಸ್ತವದಲ್ಲಿ ಕೆಲವು ಹೆಸರುಗಳಿಗಾಗಿ ಜಗಳಾಡುತ್ತಾರೆ. ಅವರು ಜಗಳಾಡುವುದು ಯಾವುದೇ ವಾಸ್ತವಿಕತೆಗಾಗಿ ಅಲ್ಲ.

22. ಸಮೂದ್ ಜನಾಂಗದ ವಾಸಸ್ಥಳ ವಾಯುವ್ಯ ಅರೇಬಿಯಾದ 'ಅಲ್ ಹಿಜ್ರ್' ಎಂಬ ಪ್ರದೇಶವಾಗಿದೆ. ಈಗ ಮದೀನಾ ಮತ್ತು ತಬೂಕ್‌ನ ನಡುವೆ ಒಂದು ಸ್ಥಳವಿದೆ. ಅದನ್ನು 'ಮದಾಯನ್ ಸಾಲಿಹ್' ಎಂದು ಕರೆಯುತ್ತಾರೆ. ಇದು ಸಮೂದ್ ಜನಾಂಗದ ರಾಜಧಾನಿ ಯಾಗಿತ್ತು. ಹಿಂದಿನ ಕಾಲದಲ್ಲಿ ಅದನ್ನು 'ಹಿಜ್ರ್' ಎಂದು ಕರೆಯಲಾಗುತ್ತಿತ್ತು. ಇಂದಿಗೂ ಸಮೂದ್ ಜನಾಂಗದವರು ಪರ್ವತಗಳನ್ನು ಕೊರೆದು ನಿರ್ಮಿಸಿದಂತಹ ಕೆಲವು ಕಟ್ಟಡಗಳು ಅಲ್ಲಿ ಅಸ್ತಿತ್ವದಲ್ಲಿವೆ.

ಅವನ ಹೊರತು ನಿಮ್ಮ ಆರಾಧ್ಯನಾರೂ ಇಲ್ಲ. ನಿಮ್ಮ ಬಳಿಗೆ ನಿಮ್ಮ ಪ್ರಭುವಿನ ಕಡೆಯಿಂದ ಸ್ಪಷ್ಟ ಪ್ರಮಾಣ ಬಂದಿರುತ್ತದೆ. ಅಲ್ಲಾಹನ ಈ ಹೆಣ್ಣೊಂಟೆಯು ನಿಮಗೊಂದು ದೃಷ್ಟಾಂತದ ರೂಪದಲ್ಲಿದೆ.[23] ಆದುದರಿಂದ ಅಲ್ಲಾಹನ ಭೂಮಿಯಲ್ಲಿ ಇದನ್ನು ಮೇಯಲು ಬಿಡಿರಿ. ದುರುದ್ದೇಶದಿಂದ ಇದನ್ನು ಮುಟ್ಟಬೇಡಿರಿ. ಅನ್ಯಥಾ ಒಂದು ವೇದನಾಯುಕ್ತ ಯಾತನೆ ನಿಮ್ಮನ್ನು ಆಕ್ರಮಿಸುವುದು.

جَآءَتْكُمْ بَيِّنَةٌ مِّنْ رَّبِّكُمْ ۗ هٰذِهٖ نَاقَةُ
اللّٰهِ لَكُمْ اٰيَةً فَذَرُوْهَا تَاْكُلْ فِيْٓ اَرْضِ
اللّٰهِ وَلَا تَمَسُّوْهَا بِسُوْٓءٍ فَيَاْخُذَكُمْ عَذَابٌ اَلِيْمٌ ﴿٧٣﴾

74. ಅಲ್ಲಾಹನು 'ಆದ್' ಜನಾಂಗದ ತರುವಾಯ ನಿಮ್ಮನ್ನು ಅದರ ಉತ್ತರಾಧಿಕಾರಿಯನ್ನಾಗಿ ಮಾಡಿದ ಸಂದರ್ಭವನ್ನು ಸ್ಮರಿಸಿರಿ. ನೀವಿಂದು ಅದರ ಸಮತಟ್ಟಾದ ಬಯಲುಗಳಲ್ಲಿ ಭವ್ಯ ಭವನಗಳನ್ನು ಕಟ್ಟುವಂತೆಯೂ ಅದರ ಪರ್ವತಗಳನ್ನು ಕಟ್ಟಡಗಳ ರೂಪದಲ್ಲಿ ಕೊರೆಯುವಂತೆಯೂ ನಿಮಗೆ ಅವನು ಭೂಮಿಯ ಮೇಲೆ ಪ್ರತಿಷ್ಠೆ ದಯಪಾಲಿಸಿದನು. ಆದ್ದರಿಂದ ಅವನ ಮಹಿಮಾದ್ಭುತಗಳ ಬಗ್ಗೆ ಬೋಧಶೂನ್ಯರಾಗಬೇಡಿರಿ. ಭೂಮಿಯ ಮೇಲೆ ಕ್ಷೋಭೆ ಹರಡಬೇಡಿರಿ.

وَاذْكُرُوْٓا اِذْ جَعَلَكُمْ خُلَفَآءَ مِنْۢ بَعْدِ عَادٍ
وَّبَوَّاَكُمْ فِي الْاَرْضِ تَتَّخِذُوْنَ مِنْ سُهُوْلِهَا
قُصُوْرًا وَّتَنْحِتُوْنَ الْجِبَالَ بُيُوْتًا ۚ فَاذْكُرُوْٓا
اٰلَآءَ اللّٰهِ وَلَا تَعْثَوْا فِي الْاَرْضِ مُفْسِدِيْنَ ﴿٧٤﴾

75. ಅವರ ಜನಾಂಗದ ದುರಹಂಕಾರಿ ನಾಯಕರು, ವಿಶ್ವಾಸವಿಟ್ಟಿದ್ದ ದುರ್ಬಲ ವರ್ಗದವರೊಡನೆ ಹೇಳಿದರು:- "ಸಾಲಿಹರು ತಮ್ಮ ಪ್ರಭುವಿನ ಸಂದೇಶವಾಹಕರೇ ಆಗಿರುತ್ತಾರೆಂದು ನಿಜಕ್ಕೂ ನೀವು ಅರಿತಿರುವಿರಾ?" ಅವರು ಉತ್ತರವಿತ್ತರು: "ನಿಶ್ಚಯವಾಗಿಯೂ ಅವರು ಯಾವ ಸಂದೇಶದೊಂದಿಗೆ ಕಳುಹಿಸಲ್ಪಟ್ಟಿರುತ್ತಾರೋ ಅದನ್ನು ನಾವು ನಂಬುತ್ತೇವೆ."

قَالَ الْمَلَاُ الَّذِيْنَ اسْتَكْبَرُوْا مِنْ قَوْمِهٖ
لِلَّذِيْنَ اسْتُضْعِفُوْا لِمَنْ اٰمَنَ مِنْهُمْ
اَتَعْلَمُوْنَ اَنَّ صٰلِحًا مُّرْسَلٌ مِّنْ رَّبِّهٖ ۚ
قَالُوْٓا اِنَّا بِمَآ اُرْسِلَ بِهٖ مُؤْمِنُوْنَ ﴿٧٥﴾

76. (ಆಗ) ಆ ದುರಹಂಕಾರಿಗಳು: "ನಿಶ್ಚಯವಾಗಿಯೂ ನೀವು ಯಾವುದರ ಮೇಲೆ ವಿಶ್ವಾಸವಿಟ್ಟಿರುತ್ತೀರೋ ನಾವು ಅದರ ನಿಷೇಧಕರು" ಎಂದು ಹೇಳಿದರು.

قَالَ الَّذِيْنَ اسْتَكْبَرُوْٓا اِنَّا بِالَّذِيْٓ
اٰمَنْتُمْ بِهٖ كٰفِرُوْنَ ﴿٧٦﴾

77. ತರುವಾಯ ಅವರು ಆ ಹೆಣ್ಣೊಂಟೆಯನ್ನು ಕೊಂದು ಹಾಕಿದರು[24] ಮತ್ತು ಪ್ರಭುವಿನ ಆಜ್ಞೆಯನ್ನು ಸಂಪೂರ್ಣ ಧಿಕ್ಕರಿಸಿ ನಡೆದರು.

فَعَقَرُوا النَّاقَةَ وَعَتَوْا عَنْ اَمْرِ رَبِّهِمْ
وَقَالُوْا يٰصٰلِحُ ائْتِنَا بِمَا تَعِدُنَآ اِنْ كُنْتَ

23. ಈ ಘಟನೆಯ ವಿವರಗಳನ್ನು ಕುರ್‌ಆನಿನಲ್ಲಿ ವಿವಿಧೆಡೆ ಪ್ರಸ್ತಾಪಿಸಲಾಗಿದೆ. ಇದರಿಂದ ವ್ಯಕ್ತವಾಗುವುದೇನೆಂದರೆ ಹ. ಸಾಲಿಹ್(ಅ) ಅಲ್ಲಾಹನಿಂದ ನೇಮಕಗೊಂಡವರೇ ಆಗಿದ್ದಾರೆ ಎಂದು ಸಾರುವಂತಹ ಸ್ಪಷ್ಟ ನಿದರ್ಶನವೊಂದನ್ನು ಸಮೂದ್ ಜನಾಂಗ ಅವರಿಂದ ಬಯಸಿತ್ತು. ಇದಕ್ಕುತ್ತರವಾಗಿ ಹ. ಸಾಲಿಹ್(ಅ) ಹೆಣ್ಣು ಒಂಟೆಯನ್ನು ತೋರಿಸಿದರು.

24. ಒಂಟೆಯನ್ನು ಓರ್ವ ವ್ಯಕ್ತಿ ಕೊಂದಿದ್ದನು. ಇದನ್ನು 'ಅಲ್‌ಕಮರ್' ಮತ್ತು 'ಅಶ್ಶಮ್ಸ್' ಅಧ್ಯಾಯದಲ್ಲಿ ಪ್ರಸ್ತಾಪಿಸಲಾಗಿದೆ. ಆದರೆ ಈ ಅಪರಾಧಕ್ಕೆ ಸಮಸ್ತ ಜನಾಂಗದ ಬೆಂಬಲವಿತ್ತು. ಕೊಂದವನು ತನ್ನ ಜನಾಂಗದ ಇಚ್ಛೆಯನ್ನು ಈಡೇರಿಸಿದ್ದನಷ್ಟೆ. ಆದ್ದರಿಂದ ಅದರ ಆರೋಪಕ್ಕೆ ಸಮಸ್ತ ಜನಾಂಗವನ್ನು ಗುರಿಪಡಿಸಲಾಯಿತು.

'ಸಾಲಿಹ್'ರೊಂದಿಗೆ ಹೀಗೆಂದರು:- "ನೀವು ನಿಜಕ್ಕೂ ಸಂದೇಶ ವಾಹಕರಲ್ಲಾಗಿರುವಿರಾದರೆ, ನೀವು ನಮಗೆ ಬೆದರಿಕೆ ಹಾಕುತ್ತಿರುವ ಆ ಯಾತನೆಯನ್ನು ತನ್ನಿರಿ."

مِنَ الْمُرْسَلِيْنَ ٧٧

78. ಕೊನೆಗೆ ನಡುಗಿಸಿಬಿಡುವಂತಹ ವಿಪತ್ತೊಂದು ಅವರ ಮೇಲೆ ಬಂದೆರಗಿತು ಮತ್ತು ಅವರು ತಮ್ಮ ಮನೆಗಳಲ್ಲಿ ಅಧೋಮುಖ ರಾಗಿ ಬಿದ್ದಲ್ಲೇ ಬಿದ್ದುಬಿಟ್ಟರು.

فَاَخَذَتْهُمُ الرَّجْفَةُ فَاَصْبَحُوْا فِيْ دَارِهِمْ جٰثِمِيْنَ ٧٨

79. ಸಾಲಿಹರು: "ಓ ನನ್ನ ಜನಾಂಗ ಬಾಂಧವರೇ ನಾನು ನನ್ನ ಪ್ರಭುವಿನ ಸಂದೇಶವನ್ನು ನಿಮಗೆ ತಲಪಿಸಿ ಬಿಟ್ಟೆ. ನಾನು ನಿಮಗೆ ತುಂಬಾ ಹಿತೋಪದೇಶ ನೀಡಿದೆ. ಆದರೆ, ನೀವು ನಿಮ್ಮ ಹಿತಚಿಂತಕನನ್ನು ಮೆಚ್ಚದೆ ಹೋದರೆ ನಾನೇನು ಮಾಡಲಿ!" ಎನ್ನುತ್ತ ಅವರ ನಾಡುಗಳಿಂದ ಹೊರಟು ಹೋಗಿ ಬಿಟ್ಟರು.

فَتَوَلّٰى عَنْهُمْ وَقَالَ يٰقَوْمِ لَقَدْ اَبْلَغْتُكُمْ رِسَالَةَ رَبِّيْ وَنَصَحْتُ لَكُمْ وَلٰكِنْ لَّا تُحِبُّوْنَ النّٰصِحِيْنَ ٧٩

80. ಅನಂತರ ನಾವು 'ಲೂತ'ರನ್ನು ಸಂದೇಶವಾಹಕರನ್ನಾಗಿ ಮಾಡಿ ಕಳುಹಿಸಿದೆವು. ಅವರು ತಮ್ಮ ಜನಾಂಗದವರನ್ನುದ್ದೇಶಿಸಿ ಹೇಳಿದ ಸಂದರ್ಭವನ್ನು ಸ್ಮರಿಸಿರಿ.[25] 'ನೀವು ನಿಮಗಿಂತ ಮುಂಚೆ ಜಗತ್ತಿನಲ್ಲಿ ಇನ್ನಾರೂ ಮಾಡದಿರುವಂಥ ಅಶ್ಲೀಲಕಾರ್ಯವನ್ನೆಸಗುವ ಲಜ್ಜಾಹೀನರಾಗಿಬಿಟ್ಟಿರಾ?

وَلُوْطًا اِذْ قَالَ لِقَوْمِهٖٓ اَتَاْتُوْنَ الْفَاحِشَةَ مَا سَبَقَكُمْ بِهَا مِنْ اَحَدٍ مِّنَ الْعٰلَمِيْنَ ٨٠

81. ನೀವು ಸ್ತ್ರೀಯರನ್ನು ಬಿಟ್ಟು ಪುರುಷರೊಂದಿಗೆ ನಿಮ್ಮ ಕಾಮಾಭಿ ಲಾಷೆಯನ್ನು ನೀಗಿಸಿಕೊಳ್ಳುತ್ತೀರಾ? ವಾಸ್ತವದಲ್ಲಿ ನೀವು ಸ್ಪಷ್ಟವಾಗಿ ಹದಮೀರುವವರಾಗಿರುತ್ತೀರಿ."

اِنَّكُمْ لَتَاْتُوْنَ الرِّجَالَ شَهْوَةً مِّنْ دُوْنِ النِّسَآءِ ۚ بَلْ اَنْتُمْ قَوْمٌ مُّسْرِفُوْنَ ٨١

82. ಆದರೆ, ಆ ಜನಾಂಗದ ಉತ್ತರ, "ಇವರನ್ನು ನಮ್ಮ ನಾಡಿನಿಂದ ಹೊರಕ್ಕೆ ದಬ್ಬಿರಿ. ಭಾರೀ ಪರಿಶುದ್ಧರಾಗುತ್ತಾರಿವರು!" ಎಂಬುದರ ವಿನಾ ಇನ್ನೇನೂ ಇರಲಿಲ್ಲ.

وَمَا كَانَ جَوَابَ قَوْمِهٖٓ اِلَّآ اَنْ قَالُوْٓا اَخْرِجُوْهُمْ مِّنْ قَرْيَتِكُمْ ۚ اِنَّهُمْ اُنَاسٌ يَّتَطَهَّرُوْنَ ٨٢

83. ಕೊನೆಗೆ ನಾವು ಲೂತರನ್ನೂ ಅವರ ಮನೆಯವರನ್ನೂ- ಹಿಂದೆ ಉಳಿದುಬಿಟ್ಟ ಅವರ ಪತ್ನಿಯ ಹೊರತು- ರಕ್ಷಿಸಿ ಒಯ್ದೆವು.

فَاَنْجَيْنٰهُ وَاَهْلَهٗٓ اِلَّا امْرَاَتَهٗ ۖ كَانَتْ مِنَ الْغٰبِرِيْنَ ٨٣

84. ಮತ್ತು ಆ ಜನಾಂಗದ ಮೇಲೆ ನಾವೊಂದು ಮಳೆಗರೆದೆವು.[26] ಅನಂತರ ಆ ಅಪರಾಧಿಗಳ ಪಾಡೇನಾಯಿತೆಂದು ನೋಡಿರಿ.

وَاَمْطَرْنَا عَلَيْهِمْ مَّطَرًا ۗ فَانْظُرْ كَيْفَ كَانَ عَاقِبَةُ الْمُجْرِمِيْنَ ٨٤

25. ಹ. ಲೂತ್(ಅ) ಅವರು ಹ. ಇಬ್‌ರಾಹೀಮ್‌ರ(ಅ) ಸೋದರ ಪುತ್ರರಾಗಿದ್ದರು. ಇಂದು ಶಾಂತ ಸಾಗರವಿರುವ ಪ್ರದೇಶದಲ್ಲಿ ವಾಸಿಸುತ್ತಿದ್ದ ಜನಾಂಗಕ್ಕೆ ಅವರನ್ನು ಪ್ರವಾದಿಯಾಗಿ ಕಳುಹಿಸಲಾಗಿತ್ತು.

26. ಮಳೆಯೆಂದರೆ ಇಲ್ಲಿ ನೀರಿನ ಮಳೆ ಎಂದು ಅರ್ಥವಲ್ಲ. ಬದಲಾಗಿ ಕುರ್‌ಆನಿನ ಇತರ ಕಡೆಗಳಲ್ಲಿ ವಿವರಿಸಲಾಗಿರುವಂತೆ ಅದು ಕಲ್ಲಿನ ಮಳೆಯಾಗಿತ್ತು.

85. ಮದ್‌ಯನರ[27] ಕಡೆಗೆ ಅವರ ಸಹೋದರ 'ಶುಐಬ್'ರನ್ನು ಕಳುಹಿಸಿದೆವು. ಅವರು ಹೇಳಿದರು, "ಓ ನನ್ನ ಜನಾಂಗ ಬಾಂಧವರೇ, ಅಲ್ಲಾಹನ ದಾಸ್ಯ-ಆರಾಧನೆ ಮಾಡಿರಿ. ಅವನ ಹೊರತು ನಿಮ್ಮ ಆರಾಧ್ಯನಾರೂ ಇಲ್ಲ. ನಿಮ್ಮ ಬಳಿಗೆ ನಿಮ್ಮ ಪ್ರಭುವಿನ ಸುವ್ಯಕ್ತ ಮಾರ್ಗದರ್ಶನ ಬಂದಿರುತ್ತದೆ. ಆದುದರಿಂದ ಅಳತೆ ಮತ್ತು ತೂಕವನ್ನು ಸಂಪೂರ್ಣ ಗೊಳಿಸಿರಿ. ಜನರಿಗೆ ಅವರ ವಸ್ತುಗಳನ್ನು ಕಡಿತಗೊಳಿಸಿಕೊಡಬೇಡಿರಿ ಮತ್ತು ಭೂಮಿಯಲ್ಲಿ ಸುಧಾರಣೆಯಾದ ಬಳಿಕ ಕ್ಷೋಭೆಯನ್ನುಂಟು ಮಾಡಬೇಡಿರಿ. ನೀವು ನಿಜಕ್ಕೂ ವಿಶ್ವಾಸಿಗಳಾಗಿದ್ದರೆ ಇದರಲ್ಲಿ ನಿಮಗೆ ಒಳಿತಿದೆ.[28]

وَإِلَىٰ مَدْيَنَ أَخَاهُمْ شُعَيْبًا ۗ قَالَ يَٰقَوْمِ
اعْبُدُوا اللَّهَ مَا لَكُم مِّنْ إِلَٰهٍ غَيْرُهُ ۖ
قَدْ جَاءَتْكُم بَيِّنَةٌ مِّن رَّبِّكُمْ ۖ
فَأَوْفُوا الْكَيْلَ وَالْمِيزَانَ وَلَا تَبْخَسُوا
النَّاسَ أَشْيَاءَهُمْ وَلَا تُفْسِدُوا فِي الْأَرْضِ
بَعْدَ إِصْلَاحِهَا ۚ ذَٰلِكُمْ خَيْرٌ لَّكُمْ إِن
كُنتُم مُّؤْمِنِينَ ﴿٨٥﴾

86. ಜನರನ್ನು ಭಯಭೀತರನ್ನಾಗಿ ಮಾಡುತ್ತಲೂ ವಿಶ್ವಾಸವಿಡುವವರನ್ನು ಅಲ್ಲಾಹನ ಮಾರ್ಗದಿಂದ ತಡೆಯಲುದ್ಯುಕ್ತರಾಗುತ್ತಲೂ ನೇರ ಮಾರ್ಗವನ್ನು ವಕ್ರಗೊಳಿಸುತ್ತಲೂ ಇರಲಿಕ್ಕಾಗಿ (ಜೀವನದ) ಎಲ್ಲ ಮಾರ್ಗಗಳಲ್ಲೂ ದರೋಡೆಗಾರರಾಗಿ ಕುಳಿತಿರಬೇಡಿರಿ. ನೀವು ಕಡಿಮೆ ಸಂಖ್ಯೆಯಲ್ಲಿದ್ದಿರಿ. ತರುವಾಯ ಅಲ್ಲಾಹನು ನಿಮ್ಮನ್ನು ಬಹುಸಂಖ್ಯೆ ಯವರನ್ನಾಗಿ ಮಾಡಿದನು. ಆ ಕಾಲವನ್ನು ಸ್ಮರಿಸಿರಿ. ಜಗತ್ತಿನಲ್ಲಿ ಗೊಂದಲಗಾರರ ಪರಿಣಾಮವೇನಾಯಿತೆಂಬುದನ್ನು ಚೆನ್ನಾಗಿ ಕಣ್ತೆರೆದು ನೋಡಿರಿ.

وَلَا تَقْعُدُوا بِكُلِّ صِرَاطٍ تُوعِدُونَ
وَتَصُدُّونَ عَن سَبِيلِ اللَّهِ مَنْ آمَنَ
بِهِ وَتَبْغُونَهَا عِوَجًا ۚ وَاذْكُرُوا إِذْ كُنتُمْ
قَلِيلًا فَكَثَّرَكُمْ ۖ وَانظُرُوا كَيْفَ كَانَ
عَاقِبَةُ الْمُفْسِدِينَ ﴿٨٦﴾

87. ಯಾವ ಶಿಕ್ಷಣದೊಂದಿಗೆ ನಾನು ಕಳುಹಿಸಲ್ಪಟ್ಟಿರುತ್ತೇನೋ ಅದರ ಮೇಲೆ ನಿಮ್ಮ ಪೈಕಿ ಒಂದು ಪಂಗಡವು ವಿಶ್ವಾಸ ವಿಡುತ್ತಲೂ ಇನ್ನೊಂದು (ಪಂಗಡವು) ವಿಶ್ವಾಸವಿಡದೆಯೂ ಇದ್ದರೆ ಅಲ್ಲಾಹನು ನಮ್ಮ ನಡುವೆ ಒಂದು ತೀರ್ಮಾನ ಮಾಡುವವರೆಗೂ ಸಹನೆಯೊಂದಿಗೆ ಕಾದು ಕೊಂಡಿರಿ ಮತ್ತು ಅವನೇ ಎಲ್ಲರಿಗಿಂತಲೂ ಉತ್ತಮ ತೀರ್ಮಾನ ಮಾಡುವವನಾಗಿರುತ್ತಾನೆ.

وَإِن كَانَ طَائِفَةٌ مِّنكُمْ آمَنُوا بِالَّذِي
أُرْسِلْتُ بِهِ وَطَائِفَةٌ لَّمْ يُؤْمِنُوا فَاصْبِرُوا
حَتَّىٰ يَحْكُمَ اللَّهُ بَيْنَنَا ۚ وَهُوَ خَيْرُ الْحَاكِمِينَ ﴿٨٧﴾

27. ಮದ್‌ಯನಿನ ನಿಜವಾದ ಭೂಭಾಗವು ಹಿಜಾಝ್‌ನ ವಾಯುವ್ಯ ಮತ್ತು ಫೆಲೆಸ್ತೀನಿನ ದಕ್ಷಿಣದಲ್ಲಿ ಕೆಂಪು ಸಮುದ್ರ ಮತ್ತು ಅಕಬಾ ಕೊಲ್ಲಿಯ ದಡದಲ್ಲಿತ್ತು. ಅಲ್ಲದೆ ಸೀನಾಯಿ ಪರ್ಯಾಯ ದ್ವೀಪದ ಪೂರ್ವ ಕರಾವಳಿಯಲ್ಲೂ ಅದರ ಕೆಲವು ಪ್ರದೇಶ ಹರಡಿಕೊಂಡಿತ್ತು. ಅವರು ದೊಡ್ಡ ವ್ಯಾಪಾರಿ ಜನಾಂಗವಾಗಿದ್ದರು. ಪುರಾತನ ಕಾಲದಲ್ಲಿ ಕೆಂಪು ಸಮುದ್ರದ ಕರಾವಳಿಯಲ್ಲಿ ಯಮನ್‌ನಿಂದ ಮಕ್ಕಾ ಮತ್ತು ಯಂಬೂಅ್‌ಗಳ ಮೂಲಕ ಸಿರಿಯಾದೆಡೆಗೆ ಹೋಗುವ ಹೆದ್ದಾರಿಯಿತ್ತು. ಇನ್ನೊಂದು ವ್ಯಾಪಾರಿ ಹೆದ್ದಾರಿ ಇರಾಕ್‌ನಿಂದ ಈಜಿಪ್ಟಿನ ಕಡೆಗೆ ಹೋಗುತ್ತಿತ್ತು. ಇವೆರಡು ಹೆದ್ದಾರಿಗಳು ಕೂಡುವ ಸ್ಥಳದಲ್ಲೇ ಈ ಜನಾಂಗದ ನಾಡುಗಳಿದ್ದವು.

28. ಅವರು ತಾವು ಸತ್ಯವಿಶ್ವಾಸಿಗಳೆಂದು ವಾದಿಸಿಕೊಳ್ಳುತ್ತಿದ್ದರು ಎಂದು ಇದರಿಂದ ವ್ಯಕ್ತವಾಗುತ್ತದೆ.

88. *ತಮ್ಮ ಹಿರಿಮೆಯ ಅಹಂಕಾರದಲ್ಲಿ ಸಿಲುಕಿದ್ದ ಅವರ ಜನಾಂಗದ ಮುಂದಾಳುಗಳು ಅವರೊಡನೆ (ಹೀಗೆ) ಹೇಳಿದರು, "ಓ ಶುಐಬ್, ನಾವು ನಿಮ್ಮನ್ನೂ ನಿಮ್ಮೊಂದಿಗೆ ವಿಶ್ವಾಸವಿಟ್ಟವರನ್ನೂ ನಮ್ಮ ನಾಡಿನಿಂದ ಹೊರಕ್ಕಟ್ಟುವೆವು. ಅನ್ಯಥಾ ನೀವು ನಮ್ಮ ಒಕ್ಕೂಟಕ್ಕೆ ಮರಳಿ ಬರಬೇಕಾದೀತು." (ಆಗ) ಶುಐಬರು (ಹೀಗೆ) ಉತ್ತರ ಕೊಟ್ಟರು- "ನಾವು ಒಪ್ಪದಿದ್ದರೂ ನಮ್ಮನ್ನು ಬಲಾತ್ಕಾರವಾಗಿ ತಿರುಗಿಸಲಾಗುವುದೇ?

قَالَ الْمَلَأُ الَّذِينَ اسْتَكْبَرُوا مِن قَوْمِهِ لَنُخْرِجَنَّكَ يَا شُعَيْبُ وَالَّذِينَ آمَنُوا مَعَكَ مِن قَرْيَتِنَا أَوْ لَتَعُودُنَّ فِي مِلَّتِنَا ۚ قَالَ أَوَلَوْ كُنَّا كَارِهِينَ ﴿٨٨﴾

89. ಅಲ್ಲಾಹನು ನಮ್ಮನ್ನು ನಿಮ್ಮ ಒಕ್ಕೂಟದಿಂದ ವಿಮೋಚನೆಗೊಳಿಸಿರುವಾಗ ನಾವು ಅದಕ್ಕೆ ಮರಳಿ ಬಂದರೆ ನಾವು ಅಲ್ಲಾಹನ ಮೇಲೆ ಸುಳ್ಳನ್ನು ಸೃಷ್ಟಿಸುವವರಾಗುವೆವು. ನಮ್ಮ ಪ್ರಭು ಅಲ್ಲಾಹನೇ ಆ ರೀತಿ ಇಚ್ಛಿಸುವ ವಿನಾ ನಮಗೆ ಅದರ ಕಡೆಗೆ ಮರಳಲು ಖಂಡಿತ ಸಾಧ್ಯವಾಗದು. ನಮ್ಮ ಪ್ರಭುವಿನ ಜ್ಞಾನವು ಸಕಲ ವಸ್ತುಗಳನ್ನಾವರಿಸಿಕೊಂಡಿದೆ. ನಾವು ಅವನ ಮೇಲೆಯೇ ಭರವಸೆಯನ್ನಿರಿಸಿದೆವು. ಓ ನಮ್ಮ ಪ್ರಭೂ, ನಮ್ಮ ಮತ್ತು ನಮ್ಮ ಜನಾಂಗದ ನಡುವೆ ಸರಿಯಾಗಿ ತೀರ್ಮಾನ ಮಾಡಿಬಿಡು. ನೀನು ಅತ್ಯುತ್ತಮ ತೀರ್ಪು ನೀಡುವವನಾಗಿರುತ್ತೀ."

قَدِ افْتَرَيْنَا عَلَى اللَّهِ كَذِبًا إِنْ عُدْنَا فِي مِلَّتِكُم بَعْدَ إِذْ نَجَّانَا اللَّهُ مِنْهَا ۚ وَمَا يَكُونُ لَنَا أَن نَّعُودَ فِيهَا إِلَّا أَن يَشَاءَ اللَّهُ رَبُّنَا ۚ وَسِعَ رَبُّنَا كُلَّ شَيْءٍ عِلْمًا ۚ عَلَى اللَّهِ تَوَكَّلْنَا ۚ رَبَّنَا افْتَحْ بَيْنَنَا وَبَيْنَ قَوْمِنَا بِالْحَقِّ وَأَنتَ خَيْرُ الْفَاتِحِينَ ﴿٨٩﴾

90. ಅವರನ್ನು ನಿರಾಕರಿಸಿದ ಅವರ ಜನಾಂಗದ ಮುಂದಾಳುಗಳು ತಮ್ಮೊಳಗೆ ಹೀಗೆ ಹೇಳಿದರು, "ನೀವು ಶುಐಬರ ಅನುಸರಣೆ ಮಾಡಿದರೆ ಹಾಳಾಗಿ ಹೋಗುವಿರಿ.[29]

وَقَالَ الْمَلَأُ الَّذِينَ كَفَرُوا مِن قَوْمِهِ لَئِنِ اتَّبَعْتُمْ شُعَيْبًا إِنَّكُمْ إِذًا لَّخَاسِرُونَ ﴿٩٠﴾

91. ಆದರೆ, ಒಂದು ಭೀಕರ ವಿಪತ್ತು ಬಂದು ಅವರನ್ನು ಆಕ್ರಮಿಸಿತು ಮತ್ತು ಅವರು ತಮ್ಮ ಮನೆಗಳಲ್ಲಿ ಅಧೋಮುಖರಾಗಿ ಬಿದ್ದಲ್ಲೇ ಬಿದ್ದುಬಿಟ್ಟರು.

فَأَخَذَتْهُمُ الرَّجْفَةُ فَأَصْبَحُوا فِي دَارِهِمْ جَاثِمِينَ ﴿٩١﴾

92. ಶುಐಬರನ್ನು ಸುಳ್ಳಾಗಿಸಿದವರು ಅವರ ಮನೆಗಳಲ್ಲಿ ವಾಸಿಸಲೇ ಇಲ್ಲವೋ ಎಂಬಂತೆ ಅಳಿದುಹೋದರು. ಕೊನೆಗೆ ಶುಐಬರನ್ನು ಸುಳ್ಳಾಗಿಸಿದವರೇ ಹಾಳಾಗಿ ಹೋದರು.

الَّذِينَ كَذَّبُوا شُعَيْبًا كَأَن لَّمْ يَغْنَوْا فِيهَا ۚ الَّذِينَ كَذَّبُوا شُعَيْبًا كَانُوا هُمُ الْخَاسِرِينَ ﴿٩٢﴾

***ಇಲ್ಲಿಂದ 9ನೆಯ ಕಾಂಡ ಆರಂಭ.**

29. ಇದು ಕೇವಲ ಶುಐಬ್‌ರ(ಅ) ಜನಾಂಗದ ಸರದಾರರಿಗೆ ಸೀಮಿತವಾದ ವಿಷಯವಲ್ಲ. ಸತ್ಯ, ಸನ್ಮಾರ್ಗ ಮತ್ತು ಪ್ರಾಮಾಣಿಕತೆಯ ಧೋರಣೆ ತಳೆಯುವುದರಲ್ಲಿ ಎಲ್ಲಾ ಕಾಲದ ಕೆಟ್ಟ ಜನರು ಇಂತಹುದೇ ಅಪಾಯಗಳನ್ನು ಗುರುತಿಸಿದ್ದಾರೆ. ವ್ಯಾಪಾರ, ರಾಜಕೀಯ ಮುಂತಾದ ಲೌಕಿಕ ವ್ಯವಹಾರಗಳೂ ಸುಳ್ಳು, ಅವಿಶ್ವಾಸ ಮತ್ತು ದುರ್ನಡತೆಯ ಹೊರತು ನಡೆಯಲಾರದು. ಪ್ರಾಮಾಣಿಕತೆಯನ್ನು ಪಾಲಿಸುವುದೆಂದರೆ ತನ್ನ ಲೋಕವನ್ನು ನಷ್ಟಪಡಿಸಿಕೊಳ್ಳುವುದಾಗಿದೆ ಎಂಬುದು ಎಲ್ಲಾ ಕಾಲದ ಪಥಭ್ರಷ್ಟ ಜನರ ಭಾವನೆಯಾಗಿತ್ತು.

93. ಶುಐಬರು, "ಓ ನನ್ನ ಜನಾಂಗ ಬಾಂಧವರೇ, ನಾನು ನನ್ನ ಪ್ರಭುವಿನ ಸಂದೇಶಗಳನ್ನು ನಿಮಗೆ ತಲಪಿಸಿದೆ. ನಿಮ್ಮ ಮೇಲಿನ ಹಿತಚಿಂತನೆಯ ಋಣವನ್ನು ಸಲ್ಲಿಸಿದೆ. ಈಗ ನಾನು ಸತ್ಯವನ್ನು ನಿರಾಕರಿಸುವಂತಹ ಜನಾಂಗಕ್ಕಾಗಿ ಖೇದ ಪಡುವುದೆಂತು?" ಎನ್ನುತ್ತ ತಮ್ಮ ನಾಡಿನಿಂದ ಹೊರಟು ಹೋಗಿಬಿಟ್ಟರು.	فَتَوَلّٰى عَنْهُمْ وَقَالَ يٰقَوْمِ لَقَدْ اَبْلَغْتُكُمْ رِسٰلٰتِ رَبِّيْ وَنَصَحْتُ لَكُمْ ۚ فَكَيْفَ اٰسٰى عَلٰى قَوْمٍ كٰفِرِيْنَ ﴿٩٣﴾ ع
94. ಒಂದು ನಾಡಿಗೆ ನಾವು ಪ್ರವಾದಿಯನ್ನು ಕಳುಹಿಸಿದಾಗ, ಎಂದೂ ಆ ನಾಡಿನ ಜನರನ್ನು ಮೊದಲು ಅಭಾವ ಹಾಗೂ ಸಂಕಷ್ಟಗಳಿಗೊಳಪಡಿಸದೆ ಇರಲಿಲ್ಲ. ಅವರು ವಿನಮ್ರರಾಗಬಹುದೆಂದು (ಹೀಗೆ ಮಾಡಿದ್ದೆವು.)	وَمَآ اَرْسَلْنَا فِيْ قَرْيَةٍ مِّنْ نَّبِيٍّ اِلَّآ اَخَذْنَآ اَهْلَهَا بِالْبَاْسَآءِ وَالضَّرَّآءِ لَعَلَّهُمْ يَضَّرَّعُوْنَ ﴿٩٤﴾
95. ತರುವಾಯ ಅವರ ದಾರಿದ್ರ್ಯವನ್ನು ಸಮೃದ್ಧಿಯನ್ನಾಗಿ ಬದಲಾಯಿಸಿಬಿಟ್ಟೆವು. ಇದರಿಂದ ಅವರು ಚೆನ್ನಾಗಿ ಅಭಿವೃದ್ಧಿ ಹೊಂದಿದರು. ಆಗ ಅವರು, "ನಮ್ಮ ಪೂರ್ವಿಕರಿಗೂ ಕಷ್ಟ ಕಾಲಗಳೂ ಸುಖದ ಕಾಲಗಳೂ ಬರುತ್ತಲೇ ಇದ್ದುವು" ಎಂದು ಹೇಳತೊಡಗಿದರು. ಕೊನೆಗೆ ನಾವು ಅವರನ್ನು ಹಠಾತ್ತನೆ ಹಿಡಿದುಬಿಟ್ಟೆವು. ಅವರಿಗೆ ಅದರ ಸುಳಿವೂ ಸಿಗಲಿಲ್ಲ.[30]	ثُمَّ بَدَّلْنَا مَكَانَ السَّيِّئَةِ الْحَسَنَةَ حَتّٰى عَفَوْا وَّقَالُوْا قَدْ مَسَّ اٰبَآءَنَا الضَّرَّآءُ وَالسَّرَّآءُ فَاَخَذْنٰهُمْ بَغْتَةً وَّهُمْ لَا يَشْعُرُوْنَ ﴿٩٥﴾
96. ನಾಡಿನವರು ವಿಶ್ವಾಸವಿರಿಸುತ್ತಿದ್ದರೆ ಮತ್ತು ದೇವಭಯವಿರಿಸುತ್ತಿದ್ದರೆ, ನಾವು ಅವರಿಗೆ ಆಕಾಶ ಮತ್ತು ಭೂಮಿಯಿಂದ ಸಮೃದ್ಧಿಯ ದ್ವಾರಗಳನ್ನು ತೆರೆದು ಕೊಡುತ್ತಿದ್ದೆವು. ಆದರೆ ಅವರು ಸುಳ್ಳಾಗಿಸಿದರು. ಆದುದರಿಂದ ಅವರು ಶೇಖರಿಸುತ್ತಿದ್ದ ಕೆಟ್ಟ ಗಳಿಕೆಗಾಗಿ ಅವರನ್ನು ನಾವು ಹಿಡಿದುಬಿಟ್ಟೆವು.	وَلَوْ اَنَّ اَهْلَ الْقُرٰٓى اٰمَنُوْا وَاتَّقَوْا لَفَتَحْنَا عَلَيْهِمْ بَرَكٰتٍ مِّنَ السَّمَآءِ وَالْاَرْضِ وَلٰكِنْ كَذَّبُوْا فَاَخَذْنٰهُمْ بِمَا كَانُوْا يَكْسِبُوْنَ ﴿٩٦﴾
97. ನಾಡಿನವರು ರಾತ್ರೆ ನಿದ್ರಿಸುತ್ತಿದ್ದಾಗ ನಮ್ಮ ಯಾತನೆಯು ಹಠಾತ್ತನೆ ಬಂದು ಬಿಡಲಾರದೆಂದು ಈಗ ನಿರ್ಭೀತರಾಗಿರುವರೇ?	اَفَاَمِنَ اَهْلُ الْقُرٰٓى اَنْ يَّاْتِيَهُمْ بَاْسُنَا بَيَاتًا وَّهُمْ نَآئِمُوْنَ ﴿٩٧﴾

30. ಒಬ್ಬೊಬ್ಬ ಪ್ರವಾದಿ ಮತ್ತು ಒಂದೊಂದೇ ಜನಾಂಗದ ವಿವರಗಳನ್ನು ಪ್ರತ್ಯಪ್ರತ್ಯೇಕವಾಗಿ ವಿವರಿಸಿದ ಬಳಿಕ, ಎಲ್ಲಾ ಕಾಲಗಳಲ್ಲೂ ಪ್ರವಾದಿಗಳನ್ನು ನೇಮಿಸುವಾಗ ಅಲ್ಲಾಹನು ಅನುಸರಿಸುವ ಸಮಗ್ರ ನಿಯಮವನ್ನು ವಿವರಿಸಲಾಗುತ್ತಿದೆ. ಅದಾವುದೆಂದರೆ ಪ್ರವಾದಿಗಳನ್ನು ಕಳುಹಿಸುವ ಮೊದಲು ಆ ಜನಾಂಗವನ್ನು ಸಂಕಷ್ಟ ಮತ್ತು ವಿಕೋಪಗಳಿಗೆ ಗುರಿಪಡಿಸಲಾಗುತ್ತದೆ. ದೇವೋಪದೇಶಕ್ಕೆ ಅವರ ಕಿವಿಗಳು ತೆರೆದುಕೊಳ್ಳಲಿ ಮತ್ತು ಅವರು ದೇವನ ಮುಂದೆ ದೈನ್ಯತೆಯಿಂದ ಬಾಗಲು ಸಿದ್ಧರಾಗಲಿ ಎಂಬುದೇ ಇದರ ಉದ್ದೇಶ. ಇಂತಹ ಅನುಕೂಲಕರ ಪರಿಸ್ಥಿತಿಯಲ್ಲೂ ಅವರ ಹೃದಯ ಸತ್ಯಸ್ವೀಕಾರದ ಕಡೆಗೆ ವಾಲದಿದ್ದರೆ ಅವರನ್ನು ಸುಭಿಕ್ಷೆಯ ಪರೀಕ್ಷೆಗೆ ಒಳಪಡಿಸಲಾಗುತ್ತದೆ. ಆ ಮೂಲಕ ಅವರ ವಿನಾಶಕ್ಕೆ ಪೀಠಿಕೆ ಹಾಕಲಾಗುತ್ತದೆ. ಪ್ರವಾದಿಗಳನ್ನು ಉಲ್ಲಂಘಿಸಿದರೂ ಅನುಗ್ರಹಗಳ ಮಳೆಗರೆಯುತ್ತಿರುವುದನ್ನು ಕಂಡು ಮೇಲಿನಿಂದ ನಿಯಂತ್ರಿಸುವಂತಹ ಯಾವ ದೇವನೂ ಇಲ್ಲ ಎಂದವರು ಭಾವಿಸುತ್ತಾರೆ. ನಮಗೆ ನಾವೇ ದೊಡ್ಡವರೆಂಬ ಭಾವನೆ ಅವರ ಮನಸ್ಸನ್ನು ಆವರಿಸಿಕೊಳ್ಳುತ್ತದೆ. ಹೀಗೆ ಅಂತಿಮವಾಗಿ ಅವರು ದೇವಯಾತನೆಗೆ ಗುರಿಯಾಗಿ ಬಿಡುತ್ತಾರೆ.

98. ಅಥವಾ ಅವರು ಹಗಲು ಹೊತ್ತಿನಲ್ಲಿ ಕ್ರೀಡಾ ಮಗ್ನರಾಗಿದ್ದಾಗ ನಮ್ಮ ಯಾತನೆ ಎರಗಲಾರದೆಂದು ನಾಡಿನವರು ನಿಶ್ಚಿಂತ ರಾಗಿರುವರೇ?

اَوَاَمِنَ اَهۡلُ الۡقُرٰٓى اَنۡ يَّاۡتِيَهُمۡ بَاۡسُنَا
ضُحًى وَّهُمۡ يَلۡعَبُوۡنَ ﴿٩٨﴾

99. ಇವರು ಅಲ್ಲಾಹನ ನಿಗೂಢ ತಂತ್ರದ[31] ಬಗ್ಗೆ ನಿರ್ಭೀತರಾಗಿರು ವರೇ? ವಸ್ತುತಃ ನಾಶ ಹೊಂದುವ ಜನಾಂಗ ಮಾತ್ರವೇ ಅಲ್ಲಾಹನ ನಿಗೂಢ ತಂತ್ರದಿಂದ ನಿರ್ಭೀತವಾಗಿರುವುದು.

اَفَاَمِنُوۡا مَكۡرَ اللّٰهِ‌ۚ فَلَا يَاۡمَنُ مَكۡرَ
اللّٰهِ اِلَّا الۡقَوۡمُ الۡخٰسِرُوۡنَ ﴿٩٩﴾

100. ನಾವಿಚ್ಛಿಸಿದರೆ ಅವರ ಪಾಪಗಳಿಗಾಗಿ ಅವರನ್ನು ಹಿಡಿಯಬಲ್ಲೆವೆಂಬ ವಾಸ್ತವಿಕತೆಯು ಭೂಮಿಯ ಪೂರ್ವ ನಿವಾಸಿಗಳ ಅನಂತರ ಅದರ ವಾರೀಸುದಾರರಾಗಿರುವವರಿಗೆ ಏನೂ ಪಾಠ ಕಲಿಸಿಕೊಡ ಲಿಲ್ಲವೆ? (ಆದರೆ ಅವರು ಬೋಧಪ್ರದ ವಾಸ್ತವಿಕತೆಯ ಬಗ್ಗೆ ಅನಾಸ್ಥೆ ವಹಿಸುತ್ತಾರೆ.) ನಾವು ಅವರ ಹೃದಯಗಳ ಮೇಲೆ ಮುದ್ರೆಯೊತ್ತುತ್ತೇವೆ. ಅನಂತರ ಅವರು ಏನನ್ನೂ ಆಲಿ ಸುವುದಿಲ್ಲ.

اَوَلَمۡ يَهۡدِ لِلَّذِيۡنَ يَرِثُوۡنَ الۡاَرۡضَ مِنۡۢ
بَعۡدِ اَهۡلِهَاۤ اَنۡ لَّوۡ نَشَآءُ اَصَبۡنٰهُمۡ بِذُنُوۡبِهِمۡ‌ۚ
وَنَطۡبَعُ عَلٰى قُلُوۡبِهِمۡ فَهُمۡ لَا يَسۡمَعُوۡنَ ﴿١٠٠﴾

101. ನಾವು ನಿಮಗೆ ಯಾವ ಜನಾಂಗಗಳ ವೃತ್ತಾಂತಗಳನ್ನು ಹೇಳುತ್ತಿರುವೆವೋ ಅವರ (ಉದಾಹರಣೆಗಳು ನಿಮ್ಮ ಮುಂದಿವೆ.) ಪ್ರವಾದಿಗಳು ಅವರ ಮುಂದೆ ಸುವ್ಯಕ್ತ ಪ್ರಮಾಣಗಳನ್ನು ತಂದರು. ಆದರೆ ಅವರು ಒಮ್ಮೆ ಸುಳ್ಳಾಗಿಸಿದುದನ್ನು ಪುನಃ ಸ್ವೀಕರಿಸುವವರಾಗಿರಲಿಲ್ಲ. ನೋಡಿರಿ, ನಾವು ಇದೇ ರೀತಿಯಲ್ಲಿ ಸತ್ಯನಿಷೇಧಿಗಳ ಹೃದಯಗಳ ಮೇಲೆ ಮುದ್ರೆಯೊತ್ತಿ ಬಿಡುತ್ತೇವೆ.

تِلۡكَ الۡقُرٰى نَقُصُّ عَلَيۡكَ مِنۡ اَنۡۢبَآئِهَا‌ۚ
وَلَقَدۡ جَآءَتۡهُمۡ رُسُلُهُمۡ بِالۡبَيِّنٰتِ‌ۚ فَمَا
كَانُوۡا لِيُؤۡمِنُوۡا بِمَا كَذَّبُوۡا مِنۡ قَبۡلُ‌ؕ
كَذٰلِكَ يَطۡبَعُ اللّٰهُ عَلٰى قُلُوۡبِ الۡكٰفِرِيۡنَ ﴿١٠١﴾

102. ನಾವು ಅವರ ಪೈಕಿ ಹೆಚ್ಚಿನವರಲ್ಲಿ ಯಾವ ಕರಾರು ಪಾಲನೆಯನ್ನೂ ಕಾಣಲಿಲ್ಲ. ಮಾತ್ರವಲ್ಲ ಹೆಚ್ಚಿನವರು 'ಕರ್ಮಭ್ರಷ್ಟ'ರಾಗಿರುವುದನ್ನೇ ಕಂಡೆವು.

وَمَا وَجَدۡنَا لِاَكۡثَرِهِمۡ مِّنۡ عَهۡدٍ‌ۚ وَاِنۡ
وَّجَدۡنَاۤ اَكۡثَرَهُمۡ لَفٰسِقِيۡنَ ﴿١٠٢﴾

103. ಆ ಬಳಿಕ (ಮೇಲೆ ಪ್ರಸ್ತಾಪಿಸಲಾದ) ಆ ಜನಾಂಗಗಳ ತರುವಾಯ ನಾವು ಮೂಸಾರನ್ನು ನಮ್ಮ ದೃಷ್ಟಾಂತಗಳ ಸಹಿತ ಫಿರ್‌ಔನ್ ಮತ್ತು ಅವನ ಜನಾಂಗದ ಸರದಾರರ ಬಳಿಗೆ ಕಳುಹಿಸಿದೆವು.[32]

ثُمَّ بَعَثۡنَا مِنۡۢ بَعۡدِهِمۡ مُّوۡسٰى بِاٰيٰتِنَاۤ
اِلٰى فِرۡعَوۡنَ وَمَلَا۟ئِهٖ فَظَلَمُوۡا بِهَا‌ۚ فَانۡظُرۡ

31. ಮೂಲದಲ್ಲಿ 'ಮಕರ್' ಎಂಬ ಪದ ಪ್ರಯೋಗವಾಗಿದೆ. ಅರಬಿ ಭಾಷೆಯಲ್ಲಿ ಅದರ ಅರ್ಥ 'ಸಂಚು' ಎಂದಾಗಿದೆ. ಅರ್ಥಾತ್ ಒಬ್ಬನಿಗೆ ನಿರ್ಣಾಯಕ ಹೊಡೆತ ಬೀಳುವ ತನಕವೂ ಆತನು ಎಲ್ಲವೂ ಸರಿಯಾಗಿಯೇ ಇದೆ. ತನಗೆ ಯಾವ ಬಾಧೆಯೂ ತಟ್ಟದು ಎಂದು ಬಾಹ್ಯ ವಿದ್ಯಮಾನಗಳನ್ನು ಕಂಡು ಭಾವಿಸುತ್ತಿರುವಂತೆ ಒಬ್ಬನ ವಿರುದ್ಧ ಒಳಸಂಚು ನಡೆಸುವುದು.

32. 'ಫಿರ್‌ಔನ್' ಎಂಬ ಶಬ್ದದ ಅರ್ಥ 'ಸೂರ್ಯ ದೇವತೆಯ ಸಂತತಿ' ಎಂದಾಗಿದೆ. ಈಜಿಪ್ಟ್‌ನ ಪುರಾತನ ಕಾಲದ ಜನರು ತಮ್ಮ ಪರಮ ದೇವನೆಂದು ಭಾವಿಸುತ್ತಿದ್ದ ಸೂರ್ಯನನ್ನು 'ರಅ್' ಎನ್ನುತ್ತಿದ್ದರು. ಅದರಿಂದಲೇ 'ಫಿರ್‌ಔನ್' ಎಂಬ ಪದ ಹುಟ್ಟಿ ಬಂದಿದೆ. ಇದು ಯಾವುದಾದರೊಬ್ಬ ವ್ಯಕ್ತಿಯ ಹೆಸರಲ್ಲ. ಈಜಿಪ್ಟಿನ ಎಲ್ಲಾ ರಾಜರುಗಳನ್ನೂ ಈ ಹೆಸರಿನಿಂದಲೇ ಕರೆಯುತ್ತಿದ್ದರು. ಇದು ರಷ್ಯಾದ ರಾಜರುಗಳನ್ನು 'ಝಾರ್' ಮತ್ತು ಇರಾನ್‌ನ ರಾಜರುಗಳನ್ನು 'ಕಿಸ್ರಾ' ಎಂದು ಕರೆಯುವಂತಿದೆ.

كَيْفَ كَانَ عَاقِبَةُ الْمُفْسِدِينَ ۝١٠٣

ಆದರೆ ಅವರೂ ನಮ್ಮ ದೃಷ್ಟಾಂತಗಳಿಗೆ ಅಕ್ರಮವೆಸಗಿದರು. ಆ ಕಿಡಿಗೇಡಿಗಳ ಪರಿಣಾಮವೇನಾಯಿತೆಂದು ನೋಡಿರಿ.

وَقَالَ مُوسَىٰ يَا فِرْعَوْنُ إِنِّي رَسُولٌ مِّن
رَّبِّ الْعَالَمِينَ ۝١٠٤

104. ಮೂಸಾ ಹೇಳಿದರು: "ಓ ಫಿರ್‌ಔನ್, ನಾನು ಸರ್ವಲೋಕ ಪಾಲಕನ ಕಡೆಯಿಂದ ಕಳುಹಿಸಲ್ಪಟ್ಟಿದ್ದೇನೆ.

حَقِيقٌ عَلَىٰ أَن لَّا أَقُولَ عَلَى اللَّهِ إِلَّا الْحَقَّ ۚ
قَدْ جِئْتُكُم بِبَيِّنَةٍ مِّن رَّبِّكُمْ
فَأَرْسِلْ مَعِيَ بَنِي إِسْرَائِيلَ ۝١٠٥

105. ಅಲ್ಲಾಹನ ನಾಮವೆತ್ತಿ ಸತ್ಯದ ಹೊರತು ಇನ್ನೇನನ್ನೂ ಹೇಳದಿರಲಿಕ್ಕಾಗಿಯೇ ನನ್ನನ್ನು ನಿಯೋಜಿಸಲಾಗಿದೆ. ನಾನು ನಿಮ್ಮ ಬಳಿಗೆ ನನ್ನ ಪ್ರಭುವಿನ ಕಡೆಯಿಂದ ನೇಮಕದ ಸುವ್ಯಕ್ತ ಪ್ರಮಾಣ ಹೊಂದಿ ಬಂದಿರುತ್ತೇನೆ. ಆದುದರಿಂದ ನೀನು ಬನೀಇಸ್‌ರಾಈಲರನ್ನು ನನ್ನ ಸಂಗಡ ಕಳುಹಿಸಿಕೊಡು.

قَالَ إِن كُنتَ جِئْتَ بِآيَةٍ فَأْتِ بِهَا
إِن كُنتَ مِنَ الصَّادِقِينَ ۝١٠٦

106. ಫಿರ್‌ಔನನು ಹೇಳಿದನು- "ನೀನು ದೃಷ್ಟಾಂತವೇನಾದರೂ ತಂದಿದ್ದರೆ ಹಾಗೂ ನೀನು ಸತ್ಯವಂತನಾಗಿದ್ದರೆ ಅದನ್ನು ಮುಂದಿಡು."

فَأَلْقَىٰ عَصَاهُ فَإِذَا هِيَ ثُعْبَانٌ مُّبِينٌ ۝١٠٧

107. ಮೂಸಾ ತಮ್ಮ ಲಾಠಿಯನ್ನು ಎಸೆದರು. ಹಠಾತ್ತನೆ ಅದೊಂದು ಜೀವಂತ ಹೆಬ್ಬಾವಾಗಿತ್ತು.

وَنَزَعَ يَدَهُ فَإِذَا هِيَ بَيْضَاءُ لِلنَّاظِرِينَ ۝١٠٨

108. ಅವರು ತಮ್ಮ ಜೇಬಿನಿಂದ ಕೈ ಹೊರತೆಗೆದರು ಮತ್ತು ಅದು ಪ್ರೇಕ್ಷಕರ ಮುಂದೆ ಜಗ ಜಗಿಸುತ್ತಿತ್ತು.

قَالَ الْمَلَأُ مِن قَوْمِ فِرْعَوْنَ إِنَّ
هَٰذَا لَسَاحِرٌ عَلِيمٌ ۝١٠٩

109. ಈ ಕಾರಣಕ್ಕಾಗಿ ಫಿರ್‌ಔನನ ಸರದಾರರು ಪರಸ್ಪರ ಹೇಳಿದರು- "ಖಂಡಿತವಾಗಿಯೂ ಇವನೊಬ್ಬ ನಿಪುಣ ಮಾಟಗಾರನಾಗಿರುತ್ತಾನೆ.

يُرِيدُ أَن يُخْرِجَكُم مِّنْ أَرْضِكُمْ ۖ
فَمَاذَا تَأْمُرُونَ ۝١١٠

110. ನಿಮ್ಮನ್ನು ನಿಮ್ಮ ಭೂಮಿಯಿಂದ ಹೊರ ಹಾಕಲಿಚ್ಛಿಸುತ್ತಾನೆ.[33] ಈಗ ನೀವೇನು ಹೇಳುತ್ತೀರಿ?"

قَالُوا أَرْجِهْ وَأَخَاهُ وَأَرْسِلْ فِي
الْمَدَائِنِ حَاشِرِينَ ۝١١١

111. ಅನಂತರ ಅವರೆಲ್ಲರೂ, "ಇವನಿಗೂ ಇವನ ಸಹೋದರನಿಗೂ ಕಾದಿರಲು ಹೇಳಿರಿ. ಎಲ್ಲಾ ತಜ್ಞ ಮಾಟಗಾರರನ್ನು ನಿಮ್ಮಲ್ಲಿಗೆ ತರಲಿಕ್ಕಾಗಿ ಎಲ್ಲಾ ಪಟ್ಟಣಗಳಲ್ಲಿ ಹರಿಕಾರರನ್ನು ಕಳುಹಿಸಿರಿ" ಎಂದು ಫಿರ್‌ಔನ್‌ನಿಗೆ ಸೂಚಿಸಿದರು.

33. ಮೂಸಾ(ಅ) ಅವರು ತಾನು ಪ್ರವಾದಿಯಾಗಿದ್ದೇನೆಂದು ವಾದಿಸಿಕೊಳ್ಳುವುದರ ಅರ್ಥವೇ ಅವರು ಸಮಸ್ತ ಜೀವನ ವ್ಯವಸ್ಥೆಯನ್ನು ಬದಲಾಯಿಸ ಬಯಸುತ್ತಾರೆ ಎಂದಾಗಿತ್ತು. ಸಹಜವಾಗಿಯೇ ರಾಜಕೀಯ ವ್ಯವಸ್ಥೆಯೂ ಅದರಲ್ಲಿ ಸೇರಿದೆ. ಏಕೆಂದರೆ ಸರ್ವಲೋಕಗಳ ಒಡೆಯನ ಪ್ರತಿನಿಧಿಯು ಇತರರ ಅನುಸರಣಶೀಲ ಪ್ರಜೆಯಾಗಿರಲಿಕ್ಕೆ ಬರುವುದಿಲ್ಲ. ಅವನು ಸ್ವತಃ ಅನುಕರಿಸಲ್ಪಡಲಿಕ್ಕೆ ಮತ್ತು ಆಡಳಿತ ನಿರ್ವಹಿಸಲಿಕ್ಕೆ ಬರುತ್ತಾನೆ. ಸತ್ಯನಿಷೇಧಿಯೊಬ್ಬನ ಆಡಳಿತಾಧಿಕಾರವನ್ನು ಸಮ್ಮತಿಸುವುದು ಪ್ರವಾದಿತ್ವದ ಪದವಿಗೆ ತೀರಾ ವಿರುದ್ಧವಾಗಿದೆ. ಆದ್ದರಿಂದಲೇ ಮೂಸಾರ(ಅ) ಬಾಯಿಯಿಂದ ಪ್ರವಾದಿತ್ವದ ಘೋಷಣೆಯನ್ನು ಕೇಳುತ್ತಲೇ ಫಿರ್‌ಔನ್ ಮತ್ತು ಅವನ ಸಾಮ್ರಾಜ್ಯದ ಪ್ರಭುತ್ವಗಳಿಗೆ, ಇಂತಹ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಕ್ರಾಂತಿಯ ಅಪಾಯ ತಲೆದೋರಿತು. ಈ ವ್ಯಕ್ತಿಯ ಮಾತಿಗೆ ಮಾನ್ಯತೆ ದೊರೆತರೆ ಅಧಿಕಾರ ನಮ್ಮ ಕೈಯಿಂದ ಹೊರಟು ಹೋಗುತ್ತದೆ ಎಂದು ಅವರು ಭಾವಿಸಿದರು.

112. ಆ ಪ್ರಕಾರ ಮಾಟಗಾರರು ಫಿರ್‌ಔನನ ಬಳಿಗೆ ಬಂದರು.

يَأْتُوكَ بِكُلِّ سٰحِرٍ عَلِيْمٍ ﴿١١٢﴾

113. ಅವರು (ಹೀಗೆ) ಹೇಳಿದರು: "ನಾವು ಗೆದ್ದರೆ ನಮಗೆ ಪ್ರತಿಫಲ ಖಂಡಿತವಾಗಿಯೂ ಸಿಗುವುದಲ್ಲವೇ?"

وَجَآءَ السَّحَرَةُ فِرْعَوْنَ قَالُوْٓا اِنَّ لَنَا
لَاَجْرًا اِنْ كُنَّا نَحْنُ الْغٰلِبِيْنَ ﴿١١٣﴾

114. ಫಿರ್‌ಔನನು ಉತ್ತರ ಕೊಟ್ಟನು, "ಹೌದು. ಜೊತೆಗೇ ನೀವು ಆಸ್ಥಾನದ ನಿಕಟವರ್ತಿಗಳೂ ಆಗುವಿರಿ."

قَالَ نَعَمْ وَاِنَّكُمْ لَمِنَ الْمُقَرَّبِيْنَ ﴿١١٤﴾

115. ಅನಂತರ ಅವರು ಮೂಸಾರೊಡನೆ, "ನೀವು ಎಸೆಯುತ್ತೀರಾ ಅಥವಾ ನಾವು ಎಸೆಯಬೇಕೇ?" ಎಂದು ಕೇಳಿದರು.

قَالُوْا يٰمُوْسٰٓى اِمَّآ اَنْ تُلْقِيَ وَاِمَّآ اَنْ
نَّكُوْنَ نَحْنُ الْمُلْقِيْنَ ﴿١١٥﴾

116. ಮೂಸಾರು, "ನೀವೇ ಎಸೆಯಿರಿ" ಎಂದರು. ಅವರು ತಮ್ಮ ಮಂತ್ರ ದಂಡಗಳನ್ನೆಸೆದು ದೃಷ್ಟಿಗಳನ್ನು ವಶೀಕರಿಸಿ ಹೃದಯಗಳನ್ನು ಭಯಗ್ರಸ್ತಗೊಳಿಸಿದರು ಮತ್ತು ಅವರು ಭಾರೀ ದೊಡ್ಡ ಮಾಟವನ್ನೇ ತಂದಿದ್ದರು.

قَالَ اَلْقُوْا ۚ فَلَمَّآ اَلْقَوْا سَحَرُوْٓا اَعْيُنَ النَّاسِ
وَاسْتَرْهَبُوْهُمْ وَجَآءُوْ بِسِحْرٍ عَظِيْمٍ ﴿١١٦﴾

117. ನಾವು ಮೂಸಾರಿಗೆ ಲಾಠಿಯನ್ನು ಎಸೆದು ಬಿಡಿರೆಂದು ಸೂಚನೆ ಕೊಟ್ಟೆವು. ಅದನ್ನು ಎಸೆದೊಡನೆ ಕ್ಷಣಾರ್ಧದಲ್ಲಿ ಅದು ಅವರ ಮೋಸದ ಮಾಟವನ್ನು ನುಂಗುತ್ತಾ ಸಾಗಿತು.

وَاَوْحَيْنَآ اِلٰى مُوْسٰٓى اَنْ اَلْقِ عَصَاكَ ۚ فَاِذَا
هِيَ تَلْقَفُ مَا يَاْفِكُوْنَ ﴿١١٧﴾

118. ಹೀಗೆ ಸತ್ಯವಿದ್ದುದು ಸತ್ಯವಾಗಿಯೇ ಸ್ಥಿರಪಟ್ಟಿತು. ಅವರು ಮಾಡಿಟ್ಟದ್ದೆಲ್ಲ ಮಿಥ್ಯವಾಯಿತು.

فَوَقَعَ الْحَقُّ وَبَطَلَ مَا كَانُوْا يَعْمَلُوْنَ ﴿١١٨﴾

119. ಫಿರ್‌ಔನ್ ಮತ್ತು ಅವನ ಸಂಗಡಿಗರು ಸ್ಪರ್ಧಾರಂಗದಲ್ಲಿ ಸೋತು ಹೋದರು (ಮತ್ತು ವಿಜಯಿಗಳಾಗುವ ಬದಲು)- ಅವಮಾನಿತರಾದರು.

فَغُلِبُوْا هُنَالِكَ وَانْقَلَبُوْا صٰغِرِيْنَ ﴿١١٩﴾

120. ಯಾವುದೋ ಒಂದು ವಸ್ತುವು ಮಾಟಗಾರರ ಅಂತರಂಗದಿಂದಲೇ ಅವರನ್ನು ಸಾಷ್ಟಾಂಗವೆರಗುವಂತೆ ಮಾಡಿತು.

وَاُلْقِيَ السَّحَرَةُ سٰجِدِيْنَ ﴿١٢٠﴾

121. ಅವರು, "ನಾವು ಸರ್ವಲೋಕಪಾಲಕನನ್ನು ನಂಬಿದೆವು-

قَالُوْٓا اٰمَنَّا بِرَبِّ الْعٰلَمِيْنَ ﴿١٢١﴾

122. ಮೂಸಾ ಮತ್ತು ಹಾರೂನ್ ನಂಬುವ ಪ್ರಭುವನ್ನು"- ಎಂದರು.[34]

رَبِّ مُوْسٰى وَهٰرُوْنَ ﴿١٢٢﴾

34. ಹೀಗೆ ಅಲ್ಲಾಹನು ಫಿರ್‌ಔನ್ ಮತ್ತವನ ಸಂಗಡಿಗರ ಉಪಾಯವು ಅವರಿಗೇ ತಿರುಗಿ ಬೀಳುವಂತೆ ಮಾಡಿದನು. ಅವನು ದೇಶದ ಎಲ್ಲಾ ಪರಿಣತ ಜಾದೂಗಾರರನ್ನು ಕರೆಸಿ ಸಾರ್ವಜನಿಕರ ಮುಂದೆ ಪ್ರದರ್ಶನ ಏರ್ಪಡಿಸಿದನು. ಮೂಸಾರನ್ನು(ಅ) ಜಾದೂಗಾರನೆಂದು

123. ಫಿರ್‌ಔನನು ಹೇಳಿದನು- "ನಾನು ನಿಮಗೆ ಅಪ್ಪಣೆ ಕೊಡುವುದಕ್ಕಿಂತ ಮುಂಚೆ ನೀವು ಅವನ ಮೇಲೆ ವಿಶ್ವಾಸವಿಟ್ಟಿರಾ? ನಿಶ್ಚಯ ವಾಗಿಯೂ ಇದು ಈ ರಾಜಧಾನಿಯಲ್ಲಿ ಇದರ ಮಾಲಿಕರನ್ನು ಅಧಿಕಾರಚ್ಯುತರಾಗಿ ಮಾಡಲಿಕ್ಕಾಗಿ ನೀವು ಹೂಡಿದ ಒಳಸಂಚಾ ಗಿತ್ತು. ಇದರ ಪರಿಣಾಮವು ಸದ್ಯದಲ್ಲೇ ನಿಮಗೆ ತಿಳಿಯಲಿದೆ.

قَالَ فِرْعَوْنُ اٰمَنْتُمْ بِهٖ قَبْلَ اَنْ اٰذَنَ
لَكُمْ ۚ اِنَّ هٰذَا لَمَكْرٌ مَّكَرْتُمُوْهُ فِى الْمَدِيْنَةِ
لِتُخْرِجُوْا مِنْهَآ اَهْلَهَا ۚ فَسَوْفَ تَعْلَمُوْنَ ﴿١٢٣﴾

124. ನಾನು ನಿಮ್ಮ ಕೈಕಾಲುಗಳನ್ನು ವಿರುದ್ಧ ದಿಕ್ಕುಗಳಿಂದ ಕಡಿಸಿ ಬಿಡುವೆನು. ಅನಂತರ ನಿಮ್ಮೆಲ್ಲರನ್ನು ಶಿಲುಬೆಗೇರಿಸುವೆನು."

لَاُقَطِّعَنَّ اَيْدِيَكُمْ وَاَرْجُلَكُمْ مِّنْ
خِلَافٍ ثُمَّ لَاُصَلِّبَنَّكُمْ اَجْمَعِيْنَ ﴿١٢٤﴾

125. ಅವರು ಉತ್ತರಿಸಿದರು- "ನಮಗಂತು ನಮ್ಮ ಪ್ರಭುವಿನ ಕಡೆಗೇ ಮರಳಲಿಕ್ಕಿದೆ.

قَالُوْٓا اِنَّآ اِلٰى رَبِّنَا مُنْقَلِبُوْنَ ﴿١٢٥﴾

126. ನಮ್ಮ ಪ್ರಭುವಿನ ದೃಷ್ಟಾಂತಗಳು ನಮ್ಮ ಮುಂದೆ ಬಂದಾಗ ನಾವು ಅವುಗಳ ಮೇಲೆ ವಿಶ್ವಾಸವಿರಿಸಿದೆವೆಂಬ ಕಾರಣಕ್ಕಾಗಿಯೇ ವಿನಾ ಇನ್ನಾವುದಕ್ಕೂ ನೀನು ನಮ್ಮ ವಿರುದ್ಧ ಪ್ರತೀಕಾರಕ್ಕಿಳಿಯುವು ದಿಲ್ಲ. ಓ ನಮ್ಮ ಪ್ರಭೂ, ನಮಗೆ ಸಹನೆಯನ್ನು ಅನುಗ್ರಹಿಸು. ನಾವು ನಿನ್ನ ಮುಸ್ಲಿಮ(ವಿಧೇಯ ಆಜ್ಞಾಪಾಲಕ)ರಾಗಿರುವ ಸ್ಥಿತಿಯಲ್ಲಿ ನೀನು ನಮ್ಮನ್ನು ಈ ಲೋಕದಿಂದ ಎತ್ತಿಕೋ."[35]

وَمَا تَنْقِمُ مِنَّآ اِلَّآ اَنْ اٰمَنَّا بِاٰيٰتِ رَبِّنَا لَمَّا
جَآءَتْنَا ۚ رَبَّنَآ اَفْرِغْ عَلَيْنَا صَبْرًا وَّتَوَفَّنَا مُسْلِمِيْنَ ﴿١٢٦﴾

127. ಫಿರ್‌ಔನನೊಡನೆ ಅವನ ಜನಾಂಗದ ಸರದಾರರು ಹೀಗೆಂದರು: "ನೀನು ಮೂಸಾ ಮತ್ತು ಅವನ ಜನಾಂಗವನ್ನು ದೇಶದಲ್ಲಿ

وَقَالَ الْمَلَاُ مِنْ قَوْمِ فِرْعَوْنَ اَتَذَرُ مُوْسٰى
وَقَوْمَهٗ لِيُفْسِدُوْا فِى الْاَرْضِ وَيَذَرَكَ

ಜನರಿಗೆ ದೃಢಪಡಿಸುವುದು ಇದರ ಉದ್ದೇಶವಾಗಿತ್ತು. ಅಥವಾ ಕನಿಷ್ಠಪಕ್ಷ ಅವರ ಬಗ್ಗೆ ಜನರಲ್ಲಿ ಸಂಶಯ ಮೂಡಬೇಕೆಂದು ಅವರು ಭಾವಿಸಿದ್ದರು. ಆದರೆ ಈ ಸ್ಪರ್ಧೆಯಲ್ಲಿ ಸೋತ ನಂತರ ಅವರಿಂದ ಆಹ್ವಾನಿಸಲ್ಪಟ್ಟ ಜಾದೂಗಾರರೇ, "ಮೂಸಾರು(ಅ) ಸಮರ್ಪಿಸುತ್ತಿರುವುದು ನಿಶ್ಚಯವಾಗಿ ಜಾದೂ ಅಲ್ಲ. ಖಂಡಿತವಾಗಿಯೂ ಅದು ಸರ್ವಲೋಕಗಳ ಒಡೆಯನ ಶಕ್ತಿಯ ಮಹಿಮೆ ಯಾಗಿದೆ. ಅದರ ಮುಂದೆ ಎಂತಹ ಜಾದುವೂ ನಡೆಯಲಾರದು" ಎಂದು ಒಮ್ಮತಾಭಿಪ್ರಾಯದಿಂದ ನಿರ್ಧರಿಸಿದರು.

35. ಫಿರ್‌ಔನ್ ತನ್ನ ಉಪಾಯ ತಲೆಕೆಳಗಾಗುತ್ತಿರುವುದನ್ನು ಕಂಡು ಕೊನೆಯದಾಗಿ ಇನ್ನೊಂದು ಸಂಚು ಹೂಡಿದನು. ಈ ಸಮಸ್ತ ಪ್ರಕರಣವನ್ನು ಅವನು ಮೂಸಾ ಮತ್ತು ಜಾದೂಗಾರರ ಹೂಟವೆಂದು ಸಾರಿ ಅವರಿಗೆ ದೈಹಿಕ ಶಿಕ್ಷೆ ಮತ್ತು ಕೊಲೆಯ ಬೆದರಿಕೆ ಹಾಕಿದನು. ಆ ಮೂಲಕ ಅವರು ತಪ್ಪೊಪ್ಪಿಕೊಳ್ಳಲಿ ಎಂದು ಅವನು ಬಯಸಿದ್ದನು. ಆದರೆ ಅವನ ಈ ತಂತ್ರವೂ ವಿಫಲವಾಯಿತು. ಜಾದೂಗಾರರು ಎಂತಹ ಶಿಕ್ಷೆಗೂ ಸಿದ್ಧವೆಂದು ಸಾರಿ ತಮ್ಮನ್ನು ಅರ್ಪಿಸಿ ಕೊಂಡರು. ಮೂಸಾರ(ಅ) ಸತ್ಯಸಂಧತೆಯ ಮೇಲೆ ವಿಶ್ವಾಸವಿಡುವುದಕ್ಕೆ ಕಾರಣ ಒಳಸಂಚಲ್ಲ ಬದಲಾಗಿ ಸತ್ಯದ ಅಂಗೀಕಾರವಾಗಿದೆ ಎಂದು ಆ ಮೂಲಕ ಅವರು ಸಾಬೀತುಪಡಿಸಿದರು. ಸತ್ಯವಿಶ್ವಾಸವು ಕೆಲವು ಕ್ಷಣಗಳಲ್ಲೇ ಆ ಜಾದೂಗಾರರ ಮನಸ್ಸಿನಲ್ಲಿ ಎಂತಹ ಪರಿವರ್ತನೆಯುಂಟು ಮಾಡಿತು ಎಂಬುದೂ ಇಲ್ಲಿ ಗಮನಾರ್ಹ. ಸ್ವಲ್ಪ ಹೊತ್ತಿಗೆ ಮೊದಲು ಅವರು ತಮ್ಮ ಪೂರ್ವಜರ ಧರ್ಮದ ಬೆಂಬಲಕ್ಕಾಗಿ ತಮ್ಮ ಮನೆಗಳಿಂದ ಹೊರಟು ಬಂದಿದ್ದರು. ನಮ್ಮ ಧರ್ಮವನ್ನು ಮೂಸಾರ(ಅ) ಆಕ್ರಮಣದಿಂದ ರಕ್ಷಿಸುವಲ್ಲಿ ಸಫಲರಾದರೆ ಸರ್ಕಾರದಿಂದ ನಮಗೇನು ಉಡುಗೊರೆ ಸಿಗುವುದು ಎಂದು ಅವರು ಫಿರ್‌ಔನನೊಡನೆ ಕೇಳುತ್ತಿದ್ದರು. ಆದರೆ ಸತ್ಯವಿಶ್ವಾಸದ ಅನುಗ್ರಹ ಪ್ರಾಪ್ತವಾದಾಗ ಅವರ ಸತ್ಯಸಂಧತೆ ಮತ್ತು ದೃಢಚಿತ್ತತೆ ಪರಾಕಾಷ್ಠೆಗೆ ತಲಪಿತು. ಸ್ವಲ್ಪ ಹೊತ್ತು ಮೊದಲು ಅವರು ದುರಾಶೆಯಿಂದ ರಾಜನ ಮುಂದೆ ಕೈಯೊಡ್ಡುತ್ತಿದ್ದರು. ಆದರೆ ಈಗ ಅವರು ಅವನ ದೊಡ್ಡಸ್ತಿಕೆ ಮತ್ತು ಗರ್ವವನ್ನು ಮೆಟ್ಟಿ ನಿಂತು ಅತ್ಯಂತ ಭಯಾನಕ ಯಾತನೆಯ ಬಗ್ಗೆ ಅವನು ನೀಡಿದ್ದ ಬೆದರಿಕೆಯನ್ನು ಸ್ವೀಕರಿ ಸಲು ಸಿದ್ಧರಾಗಿದ್ದರು. ತಮ್ಮ ಮುಂದೆ ಅನಾವರಣಗೊಂಡಿದ್ದ ಸತ್ಯವನ್ನು ಯಾವ ಕಾರಣಕ್ಕೂ ಬಿಟ್ಟು ಬಿಡಲು ಅವರು ಸಿದ್ಧರಿರಲಿಲ್ಲ.

ಗೊಂದಲಗಳನ್ನು ಹಬ್ಬಿಸುತ್ತಿರಲಿಕ್ಕೂ ನಿನ್ನ ಹಾಗೂ ನಿನ್ನ ಆರಾಧ್ಯರ ಆರಾಧನೆಯನ್ನು ತೊರೆದು ಬಿಟ್ಟಿರಲಿಕ್ಕೂ ಹೀಗೆಯೇ ಬಿಟ್ಟು ಬಿಡುವೆಯಾ?" ಫಿರ್‌ಔನನು ಹೇಳಿದನು: "ನಾನು ಅವರ ಗಂಡು ಮಕ್ಕಳನ್ನು ಕೊಲೆ ಮಾಡಿಸುವೆನು ಮತ್ತು ಅವರ ಹೆಣ್ಮಕ್ಕಳನ್ನು ಜೀವಂತ ವಿರಲು ಬಿಡುವೆನು.[36] ಅವರ ಮೇಲೆ ನಮ್ಮ ಅಧಿಕಾರದ ಹಿಡಿತ ಬಿಗಿಯಾಗಿದೆ."

وَآلِهَتَكَ ۚ قَالَ سَنُقَتِّلُ أَبْنَاءَهُمْ وَنَسْتَحْيِي
نِسَاءَهُمْ وَإِنَّا فَوْقَهُمْ قَاهِرُونَ ﴿١٢٧﴾

128. ಮೂಸಾ ತಮ್ಮ ಜನಾಂಗದೊಡನೆ ಹೀಗೆಂದರು: "ಅಲ್ಲಾಹನೊಡನೆ ಸಹಾಯ ಯಾಚಿಸಿರಿ ಮತ್ತು ತಾಳ್ಮೆ ವಹಿಸಿರಿ. ಭೂಮಿ ಅಲ್ಲಾಹನದು. ಅವನು ತನ್ನ ದಾಸರಲ್ಲಿ ತನಗಿಷ್ಟ ಬಂದವರನ್ನು ಅದರ ಉತ್ತರಾಧಿಕಾರಿಗಳಾಗಿ ಮಾಡುತ್ತಾನೆ.[37] ಅಂತಿಮ ವಿಜಯವು ಅವನನ್ನು ಭಯಪಟ್ಟು ವರ್ತಿಸುವವರಿಗಾಗಿದೆ."

قَالَ مُوسَىٰ لِقَوْمِهِ اسْتَعِينُوا بِاللَّهِ
وَاصْبِرُوا ۖ إِنَّ الْأَرْضَ لِلَّهِ يُورِثُهَا مَنْ
يَشَاءُ مِنْ عِبَادِهِ ۖ وَالْعَاقِبَةُ لِلْمُتَّقِينَ ﴿١٢٨﴾

129. ಅವರ ಜನಾಂಗದವರು ಹೇಳಿದರು: "ನೀವು ಬರುವುದಕ್ಕೆ ಮುಂಚೆಯೂ ನಾವು ಸತಾಯಿಸಲ್ಪಡುತ್ತಿದ್ದೆವು. ಈಗ ನೀವು ಬಂದ ಬಳಿಕವೂ ಸತಾಯಿಸಲ್ಪಡುತ್ತಿದ್ದೇವೆ." ಅವರು ಹೀಗೆ ಹೇಳಿದರು: "ನಿಮ್ಮ ಪ್ರಭು ನಿಮ್ಮ ಶತ್ರುವನ್ನು ನಾಶಗೊಳಿಸುವ ಹಾಗೂ ನಿಮ್ಮನ್ನು ಭೂಮಿಯಲ್ಲಿ ಪ್ರತಿನಿಧಿಗಳನ್ನಾಗಿ ಮಾಡುವ ಸಮಯ ಸನ್ನಿಹಿತವಾಗಿದೆ. ಆಮೇಲೆ ಅವನು ನೀವು ಹೇಗೆ ವರ್ತಿಸುತ್ತೀರೆಂದು ನೋಡುವನು."

قَالُوا أُوذِينَا مِنْ قَبْلِ أَنْ تَأْتِيَنَا وَمِنْ
بَعْدِ مَا جِئْتَنَا ۚ قَالَ عَسَىٰ رَبُّكُمْ أَنْ
يُهْلِكَ عَدُوَّكُمْ وَيَسْتَخْلِفَكُمْ فِي الْأَرْضِ
فَيَنْظُرَ كَيْفَ تَعْمَلُونَ ﴿١٢٩﴾

130. ಫಿರ್‌ಔನನ ಜನರಿಗೆ ಬುದ್ಧಿ ಬರಬಹುದೆಂದು ನಾವು ಅವರನ್ನು ಅನೇಕ ವರ್ಷಗಳ ವರೆಗೆ ಬರಗಾಲ ಮತ್ತು ಫಲಗಳ ಅಭಾವದಲ್ಲಿ ಸಿಲುಕಿಸಿಟ್ಟೆವು.

وَلَقَدْ أَخَذْنَا آلَ فِرْعَوْنَ بِالسِّنِينَ
وَنَقْصٍ مِنَ الثَّمَرَاتِ لَعَلَّهُمْ يَذَّكَّرُونَ ﴿١٣٠﴾

131. ಆದರೆ, ಅವರಿಗೆ ಸುದಿನಗಳು ಬಂದಾಗ ಅವರು, ನಾವು ಇದಕ್ಕೇ ಅರ್ಹರಾಗಿದ್ದೆವೆನ್ನುತ್ತಿದ್ದರು. ದುರ್ದಿನಗಳು ಬಂದಾಗ ಮೂಸಾ ಮತ್ತು ಅವರ ಸಂಗಡಿಗರನ್ನು ಅಪಶಕುನವೆನ್ನುತ್ತಿದ್ದರು. ವಸ್ತುತಃ ಅವರ ಅಪಶಕುನವು ಅಲ್ಲಾಹನ ಕೈಯಲ್ಲಿತ್ತು. ಆದರೆ ಅವರಲ್ಲಿ ಹೆಚ್ಚಿನವರು ಅರಿವಿಲ್ಲದವರಾಗಿದ್ದರು.

فَإِذَا جَاءَتْهُمُ الْحَسَنَةُ قَالُوا لَنَا هَٰذِهِ ۖ
وَإِنْ تُصِبْهُمْ سَيِّئَةٌ يَطَّيَّرُوا بِمُوسَىٰ وَ
مَنْ مَعَهُ ۗ أَلَا إِنَّمَا طَائِرُهُمْ عِنْدَ اللَّهِ
وَلَٰكِنَّ أَكْثَرَهُمْ لَا يَعْلَمُونَ ﴿١٣١﴾

36. ಹಿಂಸೆಯ ಒಂದು ಯುಗವು ಹ. ಮೂಸಾರ(ಅ) ಜನನಕ್ಕೆ ಮೊದಲು ಜಾರಿಗೊಂಡಿತ್ತು. ಮೂಸಾರ(ಅ) ಪ್ರವಾದಿತ್ವದ ನಂತರ ಈ ಎರಡನೆಯ ಹಿಂಸಾಯುಗ ಆರಂಭಗೊಂಡಿತು. ಎರಡೂ ಯುಗಗಳಲ್ಲಿದ್ದ ಒಂದು ಸಾಮಾನ್ಯ ಅಂಶವೆಂದರೆ ಬನೀಇಸ್ರಾಈಲರ ಪುತ್ರರನ್ನು ವಧಿಸಲಾಯಿತು ಮತ್ತು ಅವರ ಪುತ್ರಿಯರನ್ನು ಜೀವಿಸಲು ಬಿಡಲಾಯಿತು. ಕ್ರಮೇಣ ಅವರ ವಂಶ ಕೊನೆಗೊಂಡು ಅವರು ಇತರ ಜನಾಂಗಗಳಲ್ಲಿ ಲೀನವಾಗಿ ಬಿಡಬೇಕು ಎಂಬುದು ಇದರ ಉದ್ದೇಶವಾಗಿತ್ತು.

37. ಇಂದಿನ ಕಾಲದಲ್ಲಿ ಕೆಲವರು ಈ ಸೂಕ್ತದ "ಭೂಮಿಯು ಅಲ್ಲಾಹನದು" ಎಂಬ ಭಾಗವನ್ನು ಆಯ್ದುಕೊಳ್ಳುತ್ತಾರೆ. ಆದರೆ "ಯಾರನ್ನು ಬೇಕಾದರೂ ಅವನು ಅದರ ವಾರೀಸುದಾರರನ್ನಾಗಿ ಮಾಡುತ್ತಾನೆ" ಎಂಬ ಅನಂತರದ ಭಾಗವನ್ನು ಬಿಟ್ಟು ಬಿಡುತ್ತಾರೆ.

132. ಅವರು ಮೂಸಾರೊಡನೆ, "ನೀನು ನಮ್ಮನ್ನು ಆಕರ್ಷಿಸಲು ಎಂತಹ ದೃಷ್ಟಾಂತವನ್ನು ತಂದರೂ ನಾವು ನಿನ್ನ ಮಾತನ್ನು ನಂಬುವವರಲ್ಲ" ಎಂದರು.

وَقَالُوا مَهْمَا تَأْتِنَا بِهِ مِنْ آيَةٍ لِتَسْحَرَنَا بِهَا فَمَا نَحْنُ لَكَ بِمُؤْمِنِينَ ١٣٢

133. ಕೊನೆಗೆ ನಾವು ಅವರ ಮೇಲೆ ಚಂಡಮಾರುತ ಕಳುಹಿಸಿದೆವು. ಮಿಡತೆಗಳ ಕೂಟವನ್ನು ಬಿಟ್ಟೆವು. (ಧಾನ್ಯ ಕೆಡಿಸುವ) ಕೀಟಗಳನ್ನು ಹಬ್ಬಿಸಿದೆವು. ಕಪ್ಪೆಗಳನ್ನು ಹೊರಡಿಸಿದೆವು, ರಕ್ತವನ್ನು ಸುರಿಸಿದೆವು. ಇವೆಲ್ಲ ದೃಷ್ಟಾಂತಗಳನ್ನು ಬೇರೆ ಬೇರೆಯಾಗಿ ತೋರಿಸಿದೆವು. ಆದರೆ, ಅವರು ಅಹಂಕಾರವೆಸಗುತ್ತಲೇ ಸಾಗಿದರು ಮತ್ತು ಅವರು ಮಹಾ ಅಪರಾಧಿ ಜನಾಂಗವಾಗಿದ್ದರು.

فَأَرْسَلْنَا عَلَيْهِمُ الطُّوفَانَ وَالْجَرَادَ وَالْقُمَّلَ وَالضَّفَادِعَ وَالدَّمَ آيَاتٍ مُفَصَّلَاتٍ فَاسْتَكْبَرُوا وَكَانُوا قَوْمًا مُجْرِمِينَ ١٣٣

134. ಅವರ ಮೇಲೆ ವಿಪತ್ತು ಎರಗಿದಾಗ ಅವರು ಹೀಗೆನ್ನುತ್ತಿದ್ದರು: "ಓ ಮೂಸಾ, ನಿನಗೆ ನಿನ್ನ ಪ್ರಭುವಿನ ವತಿಯಿಂದ ದೊರೆತಿರುವ ಪದವಿಯ ಆಧಾರದಲ್ಲಿ ನಮಗಾಗಿ ಪ್ರಾರ್ಥಿಸು. ನೀನು ಈ ಸಲ ನಮ್ಮ ಮೇಲಿಂದ ಈ ವಿಪತ್ತನ್ನು ಹೋಗಲಾಡಿಸಿ ಬಿಟ್ಟರೆ ನಾವು ನಿನ್ನ ಮಾತನ್ನು ನಂಬುವೆವು ಮತ್ತು ಬನೀಇಸ್ರಾಈಲರನ್ನು ನಿನ್ನೊಂದಿಗೆ ಕಳುಹಿಸುವೆವು."

وَلَمَّا وَقَعَ عَلَيْهِمُ الرِّجْزُ قَالُوا يَا مُوسَى ادْعُ لَنَا رَبَّكَ بِمَا عَهِدَ عِنْدَكَ لَئِنْ كَشَفْتَ عَنَّا الرِّجْزَ لَنُؤْمِنَنَّ لَكَ وَلَنُرْسِلَنَّ مَعَكَ بَنِي إِسْرَائِيلَ ١٣٤

135. ಆದರೆ, ನಾವು ಅವರ ಮೇಲಿಂದ ನಮ್ಮ ಯಾತನೆಯನ್ನು, ಅವರು ಪೂರ್ತಿಗೊಳಿಸಲಿಕ್ಕಿದ್ದ ಒಂದು ಅವಧಿಯವರೆಗೆ ಸರಿಸಿಬಿಡುತ್ತಿದ್ದರೆ ಅವರು ಒಮ್ಮೆಲೆ ವಚನಭಂಗ ಮಾಡುತ್ತಿದ್ದರು.

فَلَمَّا كَشَفْنَا عَنْهُمُ الرِّجْزَ إِلَىٰ أَجَلٍ هُمْ بَالِغُوهُ إِذَا هُمْ يَنْكُثُونَ ١٣٥

136. ಆಗ ನಾವು ಅವರಿಂದ ಪ್ರತೀಕಾರ ಪಡೆದೆವು ಮತ್ತು ಅವರನ್ನು ಸಮುದ್ರದಲ್ಲಿ ಮುಳುಗಿಸಿ ಬಿಟ್ಟೆವು. ಏಕೆಂದರೆ, ಅವರು ನಮ್ಮ ದೃಷ್ಟಾಂತಗಳನ್ನು ಸುಳ್ಳಾಗಿಸಿದ್ದರು ಮತ್ತು ಅವುಗಳ ಬಗ್ಗೆ ಅಲಕ್ಷ್ಯರಾಗಿದ್ದರು.

فَانْتَقَمْنَا مِنْهُمْ فَأَغْرَقْنَاهُمْ فِي الْيَمِّ بِأَنَّهُمْ كَذَّبُوا بِآيَاتِنَا وَكَانُوا عَنْهَا غَافِلِينَ ١٣٦

137. ಅವರ ಸ್ಥಾನದಲ್ಲಿ ದುರ್ಬಲರಾಗಿರಿಸಲ್ಪಟ್ಟಿದ್ದವರನ್ನು ನಾವು ಸಮೃದ್ಧಿಯನ್ನಿರಿಸಿದ್ದ ಆ ಭೂಭಾಗದ ಪೂರ್ವ ಪಶ್ಚಿಮಗಳ ವಾರೀಸುದಾರರನ್ನಾಗಿ ಮಾಡಿಬಿಟ್ಟೆವು.[38] ಈ ರೀತಿಯಲ್ಲಿ ಬನೀಇಸ್‌ರಾಈಲರಿಗೆ ನೀಡಿದ್ದ ನಿನ್ನ ಪ್ರಭುವಿನ ಉತ್ತಮ

وَأَوْرَثْنَا الْقَوْمَ الَّذِينَ كَانُوا يُسْتَضْعَفُونَ مَشَارِقَ الْأَرْضِ وَمَغَارِبَهَا الَّتِي بَارَكْنَا فِيهَا وَتَمَّتْ كَلِمَتُ رَبِّكَ الْحُسْنَىٰ عَلَىٰ بَنِي إِسْرَائِيلَ بِمَا صَبَرُوا وَدَمَّرْنَا

38. ಅರ್ಥಾತ್- ಬನೀಇಸ್ರಾಈಲರನ್ನು ಫೆಲೆಸ್ತೀನ್ ಸಾಮ್ರಾಜ್ಯದ ವಾರೀಸುದಾರರನ್ನಾಗಿ ಮಾಡಿದನು. ಕುರ್‌ಆನಿನ ವಿವಿಧೆಡೆಗಳಲ್ಲಿ ನಾವು ಈ ಪ್ರದೇಶದಲ್ಲಿ ಸಮೃದ್ಧಿಯನ್ನಿರಿಸಿದ್ದೇವೆ ಎಂಬ ಪದ ಫೆಲೆಸ್ತೀನ್ ಮತ್ತು ಸಿರಿಯಾಗಳಿಗೆ ಪ್ರಯೋಗವಾಗಿದೆ.

ವಾಗ್ದಾನವು ನೆರವೇರಿತು. ಏಕೆಂದರೆ ಅವರು ತಾಳ್ಮೆ ವಹಿಸಿದ್ದರು. ಫಿರ್‌ಔನ್ ಮತ್ತು ಅವನ ಜನಾಂಗದವರು ರಚಿಸಿದ್ದೆಲ್ಲವನ್ನೂ ಕಟ್ಟಿಟ್ಟದ್ದೆಲ್ಲವನ್ನೂ ನಾವು ಧ್ವಂಸ ಮಾಡಿ ಬಿಟ್ಟೆವು.

مَا كَانَ يَصْنَعُ فِرْعَوْنُ وَقَوْمُهٗ وَمَا
كَانُوْا يَعْرِشُوْنَ ﴿١٣٧﴾

138. ನಾವು ಬನೀಇಸ್ರಾಈಲರನ್ನು ಸಮುದ್ರದಿಂದ ಪಾರುಗೊಳಿಸಿದೆವು. ಅನಂತರ ಅವರು ಮುಂದೆ ಸಾಗಿದರು. ದಾರಿಯಲ್ಲಿ ಕೆಲವು ವಿಗ್ರಹಗಳ ಮುಂದೆ ತನ್ಮಯರಾಗಿ ಕುಳಿತಿದ್ದ ಒಂದು ಜನಾಂಗದ ಬಳಿಗೆ ತಲಪಿದಾಗ, "ಓ ಮೂಸಾ, ಇವರ ಆರಾಧ್ಯ ವಸ್ತುಗಳಂತಹ ಆರಾಧ್ಯ ವಸ್ತುವನ್ನು ನಮಗೂ ಮಾಡಿಕೊಡು"[39] ಎಂದರು. ಮೂಸಾ ಹೇಳಿದರು, "ನಿಜಕ್ಕೂ ನೀವು ಅಜ್ಞಾನದ ಮಾತುಗಳನ್ನಾಡುತ್ತೀರಿ.

وَجٰوَزْنَا بِبَنِيْٓ اِسْرَآءِيْلَ الْبَحْرَ فَاَتَوْا
عَلٰى قَوْمٍ يَّعْكُفُوْنَ عَلٰٓى اَصْنَامٍ لَّهُمْ ۚ قَالُوْا
يٰمُوْسَى اجْعَلْ لَّنَآ اِلٰهًا كَمَا لَهُمْ اٰلِهَةٌ ؕ
قَالَ اِنَّكُمْ قَوْمٌ تَجْهَلُوْنَ ﴿١٣٨﴾

139. ಇವರು ಅನುಸರಿಸುತ್ತಿರುವ ಕ್ರಮವು ನಿಶ್ಚಯವಾಗಿಯೂ ನಾಶವಾಗಲಿದೆ ಮತ್ತು ಇವರು ಮಾಡುತ್ತಿರುವುದು ಕೇವಲ ಮಿಥ್ಯ ಕಾರ್ಯ."

اِنَّ هٰٓؤُلَآءِ مُتَبَّرٌ مَّا هُمْ فِيْهِ وَبٰطِلٌ
مَّا كَانُوْا يَعْمَلُوْنَ ﴿١٣٩﴾

140. ಅನಂತರ ಮೂಸಾ ಹೇಳಿದರು: "ನಾನು ನಿಮಗಾಗಿ ಅಲ್ಲಾಹನ ಹೊರತು ಇನ್ನಾವುದಾದರೂ ಆರಾಧ್ಯನನ್ನು ಹುಡುಕುವುದೇ? ವಸ್ತುತಃ ನಿಮಗೆ ಅಖಿಲ ಜಗತ್ತಿನ ಜನಾಂಗಗಳ ಮೇಲೆ ಶ್ರೇಷ್ಠತೆ ಪ್ರದಾನ ಮಾಡಿದವನು ಅಲ್ಲಾಹನೇ ಆಗಿರುತ್ತಾನೆ.

قَالَ اَغَيْرَ اللّٰهِ اَبْغِيْكُمْ اِلٰهًا وَّهُوَ
فَضَّلَكُمْ عَلَى الْعٰلَمِيْنَ ﴿١٤٠﴾

141. ನಾವು ಫಿರ್‌ಔನ್‌ನವರಿಂದ ನಿಮ್ಮನ್ನು ವಿಮೋಚನೆಗೊಳಿಸಿದ ಸಂದರ್ಭವನ್ನು ಸ್ಮರಿಸಿರಿ (ಎಂದು ಅಲ್ಲಾಹನು ಹೇಳುತ್ತಾನೆ). ಅವರು ನಿಮ್ಮನ್ನು ಕಠಿಣ ಯಾತನೆಯಲ್ಲಿ ಸಿಲುಕಿಸಿದ್ದರು. ನಿಮ್ಮ ಗಂಡು ಮಕ್ಕಳನ್ನು ವಧಿಸುತ್ತಿದ್ದರು ಮತ್ತು ನಿಮ್ಮ ಹೆಣ್ಮಕ್ಕಳನ್ನು ಬದುಕಲು ಬಿಡುತ್ತಿದ್ದರು. ಅದರಲ್ಲಿ ನಿಮ್ಮ ಪ್ರಭುವಿನ ಕಡೆಯಿಂದ ನಿಮಗೊಂದು ದೊಡ್ಡ ಪರೀಕ್ಷೆ ಇತ್ತು."

وَاِذْ اَنْجَيْنٰكُمْ مِّنْ اٰلِ فِرْعَوْنَ يَسُوْمُوْنَكُمْ
سُوْٓءَ الْعَذَابِ ۚ يُقَتِّلُوْنَ اَبْنَآءَكُمْ وَ
يَسْتَحْيُوْنَ نِسَآءَكُمْ ؕ وَفِيْ ذٰلِكُمْ بَلَآءٌ
مِّنْ رَّبِّكُمْ عَظِيْمٌ ﴿١٤١﴾

142. ನಾವು ಮೂಸಾರನ್ನು ಮೂವತ್ತು ಅಹೋರಾತ್ರಿಗಳಿಗಾಗಿ (ಸಿನಾಯಿ ಪರ್ವತಕ್ಕೆ) ಕರೆದೆವು. ತರುವಾಯ ಹತ್ತು ದಿನ ಹೆಚ್ಚಿಸಿದೆವು. ಹೀಗೆ ಅವರ ಪ್ರಭು ನಿಶ್ಚಯಿಸಿದ್ದ ಅವಧಿ ನಲ್ವತ್ತು ದಿನಗಳಾದುವು. ಮೂಸಾ ಹೋಗುವಾಗ ತಮ್ಮ ಸಹೋದರ ಹಾರೂನರೊಡನೆ, "ನನ್ನ ಅನುಪಸ್ಥಿತಿಯಲ್ಲಿ ನೀವು ನನ್ನ ಜನಾಂಗದ ಪ್ರತಿನಿಧಿಯಾಗಿರ

وَوٰعَدْنَا مُوْسٰى ثَلٰثِيْنَ لَيْلَةً وَّاَتْمَمْنٰهَا
بِعَشْرٍ فَتَمَّ مِيْقَاتُ رَبِّهٖٓ اَرْبَعِيْنَ لَيْلَةً ۚ
وَقَالَ مُوْسٰى لِاَخِيْهِ هٰرُوْنَ اخْلُفْنِيْ فِيْ

39. ಅದು ಮುಸ್ಲಿಮ್ ಸಮುದಾಯವಾಗಿದ್ದರೂ ನೂರಾರು ವರ್ಷಗಳ ಕಾಲ ಈಜಿಪ್ಟಿನ ಮೂರ್ತಿ ಪೂಜಕ ಸಮುದಾಯದ ನಡುವೆ ಇದ್ದುದರಿಂದ ಅದರಿಂದ ಪ್ರಭಾವಿತವಾಗಿತ್ತು.

ಬೇಕು; ಒಳ್ಳೆಯ ಕಾರ್ಯವೆಸಗಬೇಕು ಕೆಡುಕುಂಟು ಮಾಡುವವರ ಮಾರ್ಗದಲ್ಲಿ ನಡೆಯಬಾರದು" ಎಂದರು.

قَوْمِيْ وَاَصْلِحْ وَلَا تَتَّبِعْ سَبِيْلَ الْمُفْسِدِيْنَ ﴿١٤٢﴾

143. ನಾವು ನಿಶ್ಚಯಿಸಿದ ಸಮಯಕ್ಕೆ ಸರಿಯಾಗಿ ಅವರು ತಲಪಿ ಅವರ ಪ್ರಭು ಅವರೊಡನೆ ಮಾತನಾಡಿದಾಗ ಅವರು, "ಓ ಪ್ರಭೂ, ನನಗೆ ನಿನ್ನ ದರ್ಶನಕ್ಕೆ ಬೇಕಾದ ದೃಕ್ಷಕ್ತಿ ಪ್ರದಾನ ಮಾಡು" ಎಂದು ಭಿನ್ನವಿಸಿದಾಗ, "ನೀನು ನನ್ನನ್ನು ನೋಡಲಾರೆ. ಅದೋ ಮುಂದಿರುವ ಪರ್ವತವನ್ನು ನೋಡು. ಅದು ತನ್ನ ಸ್ಥಾನದಲ್ಲಿ ಸ್ಥಿರವಾಗಿ ನಿಂತರೆ ನೀನು ನನ್ನನ್ನು ನೋಡಬಲ್ಲೆ" ಎಂದನು. ಆ ಪ್ರಕಾರ ಅವರ ಪ್ರಭು ಪರ್ವತದ ಮೇಲೆ ದಿವ್ಯ ಪ್ರಕಾಶವನ್ನು ಬೀರಿದಾಗ ಅದು ಅದನ್ನು ನುಚ್ಚು ನೂರುಗೊಳಿಸಿತು. ಮೂಸಾ ಮೂರ್ಛೆ ತಪ್ಪಿ ಬಿದ್ದರು. ಸ್ಮೃತಿ ಬಂದಾಗ ಹೀಗೆಂದರು, "ನೀನು ಮಹಾ ಪರಿಶುದ್ಧನು. ನಾನು ನಿನ್ನಲ್ಲಿ ಪಶ್ಚಾತ್ತಾಪ ಪಡುತ್ತೇನೆ ಮತ್ತು ಎಲ್ಲರಿಗಿಂತಲೂ ಮೊದಲು ವಿಶ್ವಾಸವಿಡುವವನು ನಾನಾಗಿರುತ್ತೇನೆ."

وَلَمَّا جَآءَ مُوْسٰى لِمِيْقَاتِنَا وَكَلَّمَهٗ رَبُّهٗ ۙ
قَالَ رَبِّ اَرِنِيْٓ اَنْظُرْ اِلَيْكَ ۗ قَالَ لَنْ
تَرٰىنِيْ وَلٰكِنِ انْظُرْ اِلَى الْجَبَلِ فَاِنِ
اسْتَقَرَّ مَكَانَهٗ فَسَوْفَ تَرٰىنِيْ ۚ فَلَمَّا تَجَلّٰى
رَبُّهٗ لِلْجَبَلِ جَعَلَهٗ دَكًّا وَّخَرَّ مُوْسٰى صَعِقًا ۚ
فَلَمَّآ اَفَاقَ قَالَ سُبْحٰنَكَ تُبْتُ اِلَيْكَ وَ
اَنَا اَوَّلُ الْمُؤْمِنِيْنَ ﴿١٤٣﴾

144. ಅಲ್ಲಾಹನು, "ಓ ಮೂಸಾ, ನಾನು ನನ್ನ ಸಂದೇಶವಾಹಕತ್ವ ನೆರವೇರಿಸಲಿಕ್ಕೂ ನನ್ನೊಂದಿಗೆ ಮಾತಾಡಲಿಕ್ಕೂ ಎಲ್ಲರಿಗಿಂತಲೂ ಮಿಗಿಲಾಗಿ ನಿನ್ನನ್ನು ಆರಿಸಿಕೊಂಡಿದ್ದೇನೆ. ಆದ ಕಾರಣ ನಾನು ನಿನಗೆ ಕೊಟ್ಟುದನ್ನು ಸ್ವೀಕರಿಸಿ ಕೃತಜ್ಞತೆ ಸಲ್ಲಿಸು" ಎಂದನು.

قَالَ يٰمُوْسٰٓى اِنِّى اصْطَفَيْتُكَ عَلَى النَّاسِ
بِرِسٰلٰتِيْ وَبِكَلَامِيْ ۖ فَخُذْ مَآ اٰتَيْتُكَ
وَكُنْ مِّنَ الشّٰكِرِيْنَ ﴿١٤٤﴾

145. ಅನಂತರ ನಾವು ಮೂಸಾರಿಗೆ ಜೀವನದ ಪ್ರತಿಯೊಂದು ವಿಭಾಗಕ್ಕೆ ಸಂಬಂಧಿಸಿದ ಬೋಧನೆಯನ್ನೂ ಪ್ರತಿಯೊಂದು ವಿಭಾಗಕ್ಕೆ ಸಂಬಂಧಿಸಿದ ಸ್ಪಷ್ಟ ಮಾರ್ಗದರ್ಶನವನ್ನೂ ಫಲಕಗಳ ಮೇಲೆ ಬರೆದು ಕೊಟ್ಟೆವು ಮತ್ತು ಹೀಗೆ ಹೇಳಿದೆವು: "ಈ ಮಾರ್ಗದರ್ಶನಗಳನ್ನು ಭದ್ರವಾಗಿ ಹಿಡಿದುಕೊಳ್ಳಿರಿ ಮತ್ತು ಇವುಗಳ ಉತ್ತಮ ಅರ್ಥವನ್ನು ಅನುಸರಿಸುವಂತೆ ನಿಮ್ಮ ಜನಾಂಗಕ್ಕೆ ಅಪ್ಪಣೆ ಕೊಡಿರಿ. ಕರ್ಮಭ್ರಷ್ಟರ ನಿವಾಸವನ್ನು ಸದ್ಯವೇ ನಿಮಗೆ ತೋರಿಸಿ ಕೊಡುವೆನು.

وَكَتَبْنَا لَهٗ فِى الْاَلْوَاحِ مِنْ كُلِّ شَيْءٍ
مَّوْعِظَةً وَّتَفْصِيْلًا لِّكُلِّ شَيْءٍ ۚ فَخُذْهَا
بِقُوَّةٍ وَّاْمُرْ قَوْمَكَ يَاْخُذُوْا بِاَحْسَنِهَا ۗ
سَاُورِيْكُمْ دَارَ الْفٰسِقِيْنَ ﴿١٤٥﴾

146. ಅನ್ಯಾಯವಾಗಿ ಭೂಮಿಯಲ್ಲಿ ಅಹಂಕಾರ ಪಡುವವರ ದೃಷ್ಟಿಗಳನ್ನು ನನ್ನ ನಿದರ್ಶನಗಳಿಂದ ತಿರುಗಿಸಿಬಿಡುವೆನು. ಅವರು ಯಾವ ನಿದರ್ಶನಗಳನ್ನು ಕಂಡರೂ ಎಷ್ಟು ಮಾತ್ರಕ್ಕೂ ವಿಶ್ವಾಸವಿಡುವವರಲ್ಲ. ಅವರ ಮುಂದೆ ನೇರ ಮಾರ್ಗ ಬಂದರೆ ಅದನ್ನು ಸ್ವೀಕರಿಸಲಿಕ್ಕಿಲ್ಲ ಮತ್ತು ವಾಮ ಮಾರ್ಗವನ್ನು ಕಂಡರೆ ಅದರಲ್ಲಿ ಮುನ್ನಡೆಯುವರು. ಏಕೆಂದರೆ ಅವರು ನಮ್ಮ ನಿದರ್ಶನಗಳನ್ನು ಸುಳ್ಳಾಗಿಸಿದರು ಮತ್ತು ಅವುಗಳ ಬಗ್ಗೆ ಅಲಕ್ಷ್ಯರಾಗಿದ್ದರು.

سَاَصْرِفُ عَنْ اٰيٰتِيَ الَّذِيْنَ يَتَكَبَّرُوْنَ
فِى الْاَرْضِ بِغَيْرِ الْحَقِّ ۗ وَاِنْ يَّرَوْا كُلَّ
اٰيَةٍ لَّا يُؤْمِنُوْا بِهَا ۚ وَاِنْ يَّرَوْا سَبِيْلَ
الرُّشْدِ لَا يَتَّخِذُوْهُ سَبِيْلًا ۚ وَاِنْ يَّرَوْا
سَبِيْلَ الْغَيِّ يَتَّخِذُوْهُ سَبِيْلًا ۗ ذٰلِكَ بِاَنَّهُمْ
كَذَّبُوْا بِاٰيٰتِنَا وَكَانُوْا عَنْهَا غٰفِلِيْنَ ﴿١٤٦﴾

147. ನಮ್ಮ ನಿದರ್ಶನಗಳನ್ನು ಸುಳ್ಳಾಗಿಸಿದವನ ಮತ್ತು ಪರಲೋಕದ ಹಾಜರಾಗುವಿಕೆಯನ್ನು ನಿರಾಕರಿಸಿದವನ ಸಂಪೂರ್ಣ ಕರ್ಮಗಳು ವ್ಯರ್ಥವಾದವು. ಜನರು ತಮ್ಮ ಕರ್ಮಕ್ಕೆ ತಕ್ಕ ಪ್ರತಿಫಲ ವನ್ನುಣ್ಣುವುದರ ವಿನಾ ಇನ್ನೇನನ್ನಾದರೂ ಪಡೆಯಬಲ್ಲರೇ?

وَ الَّذِيْنَ كَذَّبُوْا بِاٰيٰتِنَا وَلِقَآءِ الْاٰخِرَةِ حَبِطَتْ اَعْمَالُهُمْ ؕ هَلْ يُجْزَوْنَ اِلَّا مَا كَانُوْا يَعْمَلُوْنَ ﴿١٤٧﴾

148. ಮೂಸಾರ ಅನುಪಸ್ಥಿತಿಯಲ್ಲಿ ಅವರ ಜನಾಂಗದವರು ತಮ್ಮ ಆಭರಣಗಳಿಂದ ಒಂದು ಕರುವಿನ ವಿಗ್ರಹವನ್ನು ತಯಾರಿಸಿದರು. ಅದರಿಂದ ಎತ್ತಿನಂತಹ ಸ್ವರ ಹೊರಡುತ್ತಿತ್ತು. ಅದು ಅವರೊಡನೆ ಮಾತಾಡುವುದಿಲ್ಲವೆಂಬುದೂ ಯಾವ ವಿಷಯದಲ್ಲೂ ಮಾರ್ಗದರ್ಶನ ಮಾಡುವುದಿಲ್ಲವೆಂಬುದೂ ಅವರಿಗೆ ಕಾಣ ದಾಯಿತೇ? ಆದರೂ ಅವರು ಅದನ್ನು ಆರಾಧ್ಯವನ್ನಾಗಿ ಮಾಡಿ ಕೊಂಡರು ಮತ್ತು ಅವರು ಮಹಾ ಅಕ್ರಮಿಗಳಾಗಿದ್ದರು.[40]

وَاتَّخَذَ قَوْمُ مُوْسٰى مِنْۢ بَعْدِهٖ مِنْ حُلِيِّهِمْ عِجْلًا جَسَدًا لَّهٗ خُوَارٌ ؕ اَلَمْ يَرَوْا اَنَّهٗ لَا يُكَلِّمُهُمْ وَلَا يَهْدِيْهِمْ سَبِيْلًا ۘ اِتَّخَذُوْهُ وَكَانُوْا ظٰلِمِيْنَ ﴿١٤٨﴾

149. ಅನಂತರ ಅವರ ವಂಚನೆಯ ಜಾಲವು ಮುರಿದಾಗ ಹಾಗೂ ಅವರು ನಿಜಕ್ಕೂ ಪಥಭ್ರಷ್ಟರಾಗಿ ಬಿಟ್ಟಿದ್ದಾರೆಂದು ಕಂಡಾಗ, "ನಮ್ಮ ಪ್ರಭು ನಮ್ಮ ಮೇಲೆ ಕೃಪೆ ತೋರದಿದ್ದರೆ ಮತ್ತು ನಮ್ಮನ್ನು ಕ್ಷಮಿಸದಿದ್ದರೆ ನಾವು ಹಾಳಾಗಿ ಹೋಗುವೆವು" ಎಂದು ಹೇಳ ತೊಡಗಿದರು.

وَلَمَّا سُقِطَ فِيْۤ اَيْدِيْهِمْ وَرَاَوْا اَنَّهُمْ قَدْ ضَلُّوْا ۙ قَالُوْا لَئِنْ لَّمْ يَرْحَمْنَا رَبُّنَا وَيَغْفِرْ لَنَا لَنَكُوْنَنَّ مِنَ الْخٰسِرِيْنَ ﴿١٤٩﴾

150. ಅತ್ತ ಮೂಸಾ ಕ್ರೋಧ ಹಾಗೂ ದುಃಖಿತರಾಗಿ ತಮ್ಮ ಜನಾಂಗದ ಕಡೆಗೆ ಮರಳಿದರು. ಬಂದೊಡನೆ, "ನಾನಿಲ್ಲದಿರುವಾಗ ನೀವು ಅತ್ಯಂತ ಕೆಟ್ಟ ರೀತಿಯಲ್ಲಿ ನನ್ನನ್ನು ಪ್ರತಿನಿಧೀಕರಿಸಿದಿರಿ! ನಿಮ್ಮ ಪ್ರಭುವಿನ ಆಜ್ಞೆಯನ್ನು ಕಾಯುವಷ್ಟು ತಾಳ್ಮೆಯೂ ನಿಮಗೆ ಉಂಟಾಗಲಿಲ್ಲವೇ?" ಎನ್ನುತ್ತ ಫಲಕಗಳನ್ನು ಎಸೆದು ಬಿಟ್ಟರು ಮತ್ತು ತಮ್ಮ ಸಹೋದರ(ಹಾರೂನ)ನ ತಲೆಗೂದಲನ್ನು ಹಿಡಿದೆಳೆದರು. ಹಾರೂನರು, "ಓ ನನ್ನ ಮಾತಾಪುತ್ರನೇ, ಇವರು ನನ್ನನ್ನು ದುರ್ಬಲನನ್ನಾಗಿ ಮಾಡಿಬಿಟ್ಟರು. ನನ್ನನ್ನು ವಧಿಸಿ ಬಿಡುವುದರಲ್ಲಿದ್ದರು. ಆದ್ದರಿಂದ ಶತ್ರುಗಳಿಗೆ ನನ್ನ ಮೇಲೆ ನಗುವ ಸಂದರ್ಭ ಕೊಡಬೇಡ ಮತ್ತು ಈ ಅಕ್ರಮಿ ಜನಾಂಗ ದೊಂದಿಗೆ ನನ್ನನ್ನು ಸೇರಿಸಬೇಡ" ಎಂದರು.

وَلَمَّا رَجَعَ مُوْسٰۤى اِلٰى قَوْمِهٖ غَضْبَانَ اَسِفًا ۙ قَالَ بِئْسَمَا خَلَفْتُمُوْنِيْ مِنْۢ بَعْدِيْ ۚ اَعَجِلْتُمْ اَمْرَ رَبِّكُمْ ۚ وَاَلْقَى الْاَلْوَاحَ وَاَخَذَ بِرَاْسِ اَخِيْهِ يَجُرُّهٗۤ اِلَيْهِ ؕ قَالَ ابْنَ اُمَّ اِنَّ الْقَوْمَ اسْتَضْعَفُوْنِيْ وَكَادُوْا يَقْتُلُوْنَنِيْ ۖ ؗ فَلَا تُشْمِتْ بِيَ الْاَعْدَآءَ وَلَا تَجْعَلْنِيْ مَعَ الْقَوْمِ الظّٰلِمِيْنَ ﴿١٥٠﴾

40. ಇದು ಬನೀಇಸ್ರಾಈಲರು ಈಜಿಪ್ಟಿನವರಿಂದ ಪ್ರಭಾವಿತವಾಗಿದ್ದುದರ ದ್ವಿತೀಯ ಪ್ರಕಟಣೆಯಾಗಿತ್ತು. ಈಜಿಪ್ಟ್‌ನಲ್ಲಿ ಗೋಪೂಜೆ ಮತ್ತು ಗೋವಿನ ಪಾವಿತ್ರ್ಯದ ನಂಬಿಕೆ ಇತ್ತು. ಇದರಿಂದ ಬನೀಇಸ್ರಾಈಲ್ ಜನಾಂಗ ಎಷ್ಟು ತೀವ್ರವಾಗಿ ಪ್ರಭಾವಿತವಾಗಿತ್ತೆಂದರೆ ಅವರ ಪ್ರವಾದಿ ಅವರಿಂದ ಕಣ್ಮರೆಯಾಗುತ್ತಲೇ ಅವರು ಆರಾಧನೆ ಮಾಡಲಿಕ್ಕಾಗಿ ಕೃತಕ ಕರುವೊಂದನ್ನು ಸಿದ್ಧಪಡಿಸಿದರು.

151. ಆಗ ಮೂಸಾ, "ಓ ನನ್ನ ಪ್ರಭೂ, ನನ್ನನ್ನೂ ನನ್ನ ಸಹೋದರನನ್ನೂ ಕ್ಷಮಿಸು ಮತ್ತು ನಮ್ಮನ್ನು ನಿನ್ನ ಕರುಣೆಯಲ್ಲಿ ಸೇರಿಸಿಕೋ, ನೀನು ಅತ್ಯಂತ ಕೃಪಾಳುವಾಗಿರುವೆ" ಎಂದರು.

قَالَ رَبِّ اغۡفِرۡ لِىۡ وَلِاَخِىۡ وَاَدۡخِلۡنَا فِىۡ
رَحۡمَتِكَ ‌ۖ وَاَنۡتَ اَرۡحَمُ الرّٰحِمِيۡنَ ﴿۱۵۱﴾

152. (ಇದಕ್ಕೆ ಉತ್ತರವಾಗಿ ಹೀಗೆ ಅಪ್ಪಣೆಯಾಯಿತು) ಕರುವನ್ನು ತಮ್ಮ ಆರಾಧ್ಯವನ್ನಾಗಿ ಮಾಡಿಕೊಂಡವರು ಖಂಡಿತವಾಗಿಯೂ ತಮ್ಮ ಪ್ರಭುವಿನ ಕ್ರೋಧಕ್ಕೊಳಗಾಗಿಯೇ ತೀರುವರು ಮತ್ತು ಇಹಜೀವನದಲ್ಲಿ ಅವಮಾನಿತರಾಗುವರು. ಸುಳ್ಳನ್ನು ಸೃಷ್ಟಿಸುವವರಿಗೆ ನಾವು ಇದೇ ರೀತಿಯ ಶಿಕ್ಷೆ ಕೊಡುತ್ತೇವೆ.

اِنَّ الَّذِيۡنَ اتَّخَذُوا الۡعِجۡلَ سَيَنَالُهُمۡ
غَضَبٌ مِّنۡ رَّبِّهِمۡ وَذِلَّةٌ فِى الۡحَيٰوةِ
الدُّنۡيَا ‌ؕ وَكَذٰلِكَ نَجۡزِى الۡمُفۡتَرِيۡنَ ﴿۱۵۲﴾

153. ದುಷ್ಕರ್ಮಗಳನ್ನೆಸಗಿ ಅನಂತರ ಪಶ್ಚಾತ್ತಾಪ ಪಟ್ಟು ವಿಶ್ವಾಸ ಸ್ವೀಕರಿಸಿದರೆ ನಿಶ್ಚಯವಾಗಿಯೂ ಈ ಪಶ್ಚಾತ್ತಾಪ ಮತ್ತು ವಿಶ್ವಾಸದ ಬಳಿಕ ನಿನ್ನ ಪ್ರಭು ಕ್ಷಮಿಸುವವನೂ ಕರುಣಾಮಯಿಯೂ ಆಗಿರುತ್ತಾನೆ.

وَالَّذِيۡنَ عَمِلُوا السَّيِّاٰتِ ثُمَّ تَابُوۡا مِنۡۢ
بَعۡدِهَا وَاٰمَنُوۡۤا اِنَّ رَبَّكَ مِنۡۢ
بَعۡدِهَا لَغَفُوۡرٌ رَّحِيۡمٌ ﴿۱۵۳﴾

154. ಈ ರೀತಿಯಲ್ಲಿ ಮೂಸಾರ ಕೋಪ ಇಳಿದಾಗ ಅವರು ಆ ಫಲಕಗಳನ್ನು ಎತ್ತಿಕೊಂಡರು. ಅವುಗಳಲ್ಲಿ ತಮ್ಮ ಪ್ರಭುವನ್ನು ಭಯಪಡುವವರಿಗಾಗಿ ಮಾರ್ಗದರ್ಶನ ಮತ್ತು ಕೃಪೆ ಲಿಖಿತಗೊಂಡಿತ್ತು.

وَلَمَّا سَكَتَ عَنۡ مُّوۡسَى الۡغَضَبُ اَخَذَ
الۡاَلۡوَاحَ ‌ۖ وَفِىۡ نُسۡخَتِهَا هُدًى وَّرَحۡمَةٌ
لِّلَّذِيۡنَ هُمۡ لِرَبِّهِمۡ يَرۡهَبُوۡنَ ﴿۱۵۴﴾

155. ಮತ್ತು ಅವರು (ತಮ್ಮ ಸಂಗಡ) ನಾವು ಗೊತ್ತುಪಡಿಸಿದ ಸಮಯಕ್ಕೆ ಸರಿಯಾಗಿ ಹಾಜರಾಗುವಂತೆ ತಮ್ಮ ಜನಾಂಗದ ಎಪ್ಪತ್ತು ಮಂದಿಯನ್ನು ಆರಿಸಿಕೊಂಡರು.[41] ಒಂದು ಪ್ರಚಂಡ ಭೂಕಂಪವು ಅವರನ್ನು ಬಾಧಿಸಿದಾಗ ಮೂಸಾರು ಹೀಗೆ ಹೇಳಿದರು: "ಓ ನನ್ನ ಪ್ರಭೂ, ನೀನಿಚ್ಛಿಸುತ್ತಿದ್ದರೆ ಇವರನ್ನೂ ನನ್ನನ್ನೂ ಈ ಮೊದಲೇ ನಾಶಪಡಿಸಬಹುದಿತ್ತು. ನಮ್ಮ ಪೈಕಿ ಕೆಲವು ತಿಳಿಗೇಡಿಗಳು ಮಾಡಿದ್ದ ಅಪರಾಧಕ್ಕಾಗಿ ನಮ್ಮೆಲ್ಲರನ್ನೂ ನಾಶಗೊಳಿಸುವೆಯಾ? ಇದಂತು ನೀನು ಮಾಡಿದ ಒಂದು ಪರೀಕ್ಷೆಯಾಗಿತ್ತು. ನೀನು ಇದರ ಮೂಲಕ ನಿನಗಿಷ್ಟ ಬಂದವರನ್ನು ಪಥಭ್ರಷ್ಟಗೊಳಿಸುತ್ತೀ ಮತ್ತು ನಿನಗಿಷ್ಟಬಂದವರಿಗೆ ಸನ್ಮಾರ್ಗದರ್ಶನ ನೀಡುತ್ತೀ. ನೀನೇ ನಮ್ಮ ರಕ್ಷಕ ಮಿತ್ರನಾಗಿರುವೆ. ನಮ್ಮನ್ನು ಕ್ಷಮಿಸು. ನಮ್ಮ ಮೇಲೆ ಕೃಪೆತೋರು. ನೀನು ಕ್ಷಮಿಸುವವರಲ್ಲಿ ಅತಿ ಶ್ರೇಷ್ಠನಾಗಿರುವೆ.

وَاخۡتَارَ مُوۡسٰى قَوۡمَهٗ سَبۡعِيۡنَ رَجُلًا
لِّمِيۡقَاتِنَا ‌ۚ فَلَمَّاۤ اَخَذَتۡهُمُ الرَّجۡفَةُ قَالَ
رَبِّ لَوۡ شِئۡتَ اَهۡلَكۡتَهُمۡ مِّنۡ قَبۡلُ وَاِيَّاىَ‌ ؕ
اَتُهۡلِكُنَا بِمَا فَعَلَ السُّفَهَآءُ مِنَّا ‌ۚ اِنۡ هِىَ
اِلَّا فِتۡنَتُكَ ‌ؕ تُضِلُّ بِهَا مَنۡ تَشَآءُ وَتَهۡدِىۡ
مَنۡ تَشَآءُ‌ ؕ اَنۡتَ وَلِيُّنَا فَاغۡفِرۡ لَنَا وَارۡحَمۡنَا‌
وَاَنۡتَ خَيۡرُ الۡغٰفِرِيۡنَ ﴿۱۵۵﴾

41. ಜನಾಂಗದ ಎಪ್ಪತ್ತು ಮಂದಿ ಪ್ರತಿನಿಧಿಗಳು ಸೀನಾಯಿ ಪರ್ವತದಲ್ಲಿ ದೇವಸನ್ನಿಧಿಯಲ್ಲಿ ಹಾಜರಾಗಿ ಜನಾಂಗದ ವತಿಯಿಂದ ಕರುವಿನ ಆರಾಧನೆಯ ಅಪರಾಧಕ್ಕಾಗಿ ಕ್ಷಮೆಯಾಚಿಸಬೇಕು ಮತ್ತು ಅನುಸರಣೆಯ ಕರಾರನ್ನು ಪುನಃ ದೃಢೀಕರಿಸಬೇಕು ಎಂಬ ಉದ್ದೇಶಕ್ಕಾಗಿ ಈ ಕರೆ ನೀಡಲಾಗಿತ್ತು.

156. ನಮಗಾಗಿ ಇಹಲೋಕದ ಹಿತವನ್ನೂ ಪರಲೋಕದ ಹಿತವನ್ನೂ ಲಿಖಿತಗೊಳಿಸು. ನಾವು ನಿನ್ನ ಕಡೆಗೆ ಮರಳಿದೆವು." ಇದಕ್ಕುತ್ತರವಾಗಿ ಹೀಗೆ ಅಪ್ಪಣೆಯಾಯಿತು -"ನಾನು ಇಷ್ಟಬಂದವರಿಗೆ ಶಿಕ್ಷೆ ವಿಧಿಸುತ್ತೇನೆ. ಆದರೆ ನನ್ನ ಕರುಣೆಯು ಸರ್ವವನ್ನೂ ವ್ಯಾಪಿಸಿ ಕೊಂಡಿದೆ. ನಾನು ಅದನ್ನು ಆಜ್ಞೋಲ್ಲಂಘನೆ ಮಾಡದ, ಝಕಾತ್ ಕೊಡುವ ಮತ್ತು ನನ್ನ ನಿದರ್ಶನಗಳ ಮೇಲೆ ವಿಶ್ವಾಸ ವಿರಿಸುವವರಿಗಾಗಿ ಲಿಖಿತಗೊಳಿಸುವೆನು."

وَاكْتُبْ لَنَا فِي هٰذِهِ الدُّنْيَا حَسَنَةً وَّفِي
الْاٰخِرَةِ اِنَّا هُدْنَآ اِلَيْكَ ؕ قَالَ عَذَابِيْٓ
اُصِيْبُ بِهٖ مَنْ اَشَآءُ ۚ وَرَحْمَتِيْ وَسِعَتْ
كُلَّ شَيْءٍ ؕ فَسَاَكْتُبُهَا لِلَّذِيْنَ يَتَّقُوْنَ وَ
يُؤْتُوْنَ الزَّكٰوةَ وَالَّذِيْنَ هُمْ بِاٰيٰتِنَا يُؤْمِنُوْنَ ﴿١٥٦﴾

157. (ಆದ್ದರಿಂದ) ತಮ್ಮಲ್ಲಿರುವ 'ತೌರಾತ್' ಮತ್ತು 'ಇಂಜೀಲ್' ಗಳಲ್ಲಿ ಪ್ರಸ್ತಾಪಿಸಲಾಗಿರುವ ಈ ಸಂದೇಶವಾಹಕ 'ನಿರಕ್ಷರಿ ಪ್ರವಾದಿ'ಯ ಅನುಸರಣೆಯನ್ನು ಸ್ವೀಕರಿಸಿದವರು[42] (ಈ ಕೃಪೆಗೆ ಪಾತ್ರರಾಗುವವರು) ಇವರು (ಪ್ರವಾದಿ) ಅವರಿಗೆ ಸತ್ಕರ್ಮದ ಆದೇಶ ನೀಡುತ್ತಾರೆ ಮತ್ತು ದುಷ್ಕೃತ್ಯದಿಂದ ತಡೆಯುತ್ತಾರೆ. ಅವರಿಗೆ ಶುದ್ಧ ವಸ್ತುಗಳನ್ನು 'ಧರ್ಮಸಮ್ಮತ' ಮತ್ತು ಅಶುದ್ಧ ವಸ್ತುಗಳನ್ನು 'ನಿಷಿದ್ಧ'ಗೊಳಿಸುತ್ತಾರೆ. ಅವರ ಮೇಲೆ ಹೇರಲಾಗಿರುವ ಹೊರೆಗಳನ್ನು ಇಳಿಸುತ್ತಾರೆ. ಅವರನ್ನು ಬಿಗಿಯಲಾಗಿದ್ದ ಬಂಧನಗಳನ್ನು ಬಿಡಿಸುತ್ತಾರೆ.[43] ಆದುದರಿಂದ ಇವರ ಮೇಲೆ ವಿಶ್ವಾಸವಿರಿಸುವವರು, ಇವರನ್ನು ಸಮರ್ಥಿಸುವವರು, ಇವರಿಗೆ ಸಹಕಾರ ನೀಡುವವರು ಮತ್ತು ಇವರೊಂದಿಗೆ ಅವತೀರ್ಣಗೊಳಿಸಲಾಗಿರುವ ಪ್ರಕಾಶವನ್ನು ಅನುಸರಿಸುವವರು ಮಾತ್ರ ಯಶಸ್ವಿ ಗಳಾಗುವವರು.

اَلَّذِيْنَ يَتَّبِعُوْنَ الرَّسُوْلَ النَّبِيَّ الْاُمِّيَّ
الَّذِيْ يَجِدُوْنَهٗ مَكْتُوْبًا عِنْدَهُمْ فِي التَّوْرٰىةِ
وَالْاِنْجِيْلِ ؗ يَاْمُرُهُمْ بِالْمَعْرُوْفِ وَيَنْهٰىهُمْ
عَنِ الْمُنْكَرِ وَيُحِلُّ لَهُمُ الطَّيِّبٰتِ وَيُحَرِّمُ
عَلَيْهِمُ الْخَبٰٓئِثَ وَيَضَعُ عَنْهُمْ اِصْرَهُمْ
وَالْاَغْلٰلَ الَّتِيْ كَانَتْ عَلَيْهِمْ ؕ فَالَّذِيْنَ
اٰمَنُوْا بِهٖ وَعَزَّرُوْهُ وَنَصَرُوْهُ وَاتَّبَعُوا
النُّوْرَ الَّذِيْٓ اُنْزِلَ مَعَهٗٓ ۙ اُولٰٓئِكَ هُمُ
الْمُفْلِحُوْنَ ﴿١٥٧﴾

42. ಯಹೂದಿಯರಲ್ಲಿ ಪ್ರಚಲಿತವಿದ್ದ ಪಾರಿಭಾಷಿಕದಂತೆ ಇಲ್ಲಿ ಪ್ರವಾದಿವರ್ಯರಿಗೆ(ಸ) 'ಉಮ್ಮಿ' (ನಿರಕ್ಷರಿ) ಎಂಬ ಪದವನ್ನು ಉಪಯೋಗಿಸಲಾಗಿದೆ. ಬನೀಇಸ್ರಾಈಲರು ತಮ್ಮನ್ನುಳಿದು ಇತರೆಲ್ಲ ಜನಾಂಗಗಳನ್ನು 'ಉಮ್ಮಿ' (GENTILE) ಎನ್ನುತ್ತಿದ್ದರು. ಆದ್ದರಿಂದ ತಮ್ಮ ಜನಾಂಗದ ಬಗ್ಗೆ ಅವರಿಗಿದ್ದ ಹಿರಿಮೆಯಿಂದಾಗಿ ಅವರು 'ಉಮ್ಮಿ'ಗಳ ನೇತೃತ್ವವನ್ನು ಸಹಿಸುವುದಂತಿರಲಿ ತಮಗೆ ಸರಿಸಾಟಿಯಾದ ಮಾನವೀಯ ಹಕ್ಕುಗಳು 'ಉಮ್ಮಿ'ಗಳಿಗೆ ಪ್ರಾಪ್ತವಾಗುವುದೂ ಅವರಿಗೆ ಸಹ್ಯವಿರಲಿಲ್ಲ. ಆದ್ದರಿಂದಲೇ ಕುರ್‌ಆನಿನಲ್ಲಿ "ಉಮ್ಮಿಗಳ ಸಂಪತ್ತು ಸೂರೆಗೈಯುವುದರ ಬಗ್ಗೆ ನಮ್ಮೊಡನೆ ಯಾವ ವಿಚಾರಣೆಯೂ ಇಲ್ಲ" (ಆಲಿ ಇಮ್ರಾನ್: 75) ಎಂಬ ಅವರ ಮಾತನ್ನು ಉಲ್ಲೇಖಿಸಲಾಗಿದೆ. ಇಲ್ಲಿ ಅವರು ಉಪಯೋಗಿಸುತ್ತಿದ್ದ ಪದವನ್ನೇ ಉಪಯೋಗಿಸುವ ಮೂಲಕ ಅಲ್ಲಾಹನು, "ಈಗ ಈ 'ಉಮ್ಮಿ'ಯಲ್ಲೇ ನಿಮ್ಮ ಭವಿಷ್ಯ ಅಡಕವಾಗಿದೆ." ಅವರ ಅನುಸರಣೆ ಮಾಡಿದರೆ ಮಾತ್ರ ನನ್ನ ಅನುಗ್ರಹದಲ್ಲಿ ಪಾಲು ಪಡೆಯುತ್ತೀರಿ. ಅನ್ಯಥಾ ನೀವು ಶತಮಾನಗಳಿಂದ ಈಡಾಗುತ್ತಾ ಬಂದಿರುವ ದೇವಕ್ರೋಧವೇ ನಿಮ್ಮ ಪಾಲಿಗಿರುವುದು ಎಂದು ಹೇಳುತ್ತಿದ್ದಾನೆ.

43. ಅರ್ಥಾತ್- ಅವರ ಕರ್ಮಶಾಸ್ತ್ರಜ್ಞರು ತಮ್ಮ ಕೂದಲು ಸೀಳುವಿಕೆಯ ನಿಯಮಗಳಿಂದ, ಅವರ ಸನ್ಯಾಸಿಗಳು ತಮ್ಮ ಸನ್ಯಾಸದ ಉತ್ಪ್ರೇಕ್ಷಿತ ಕಲ್ಪನೆಯಿಂದ ಮತ್ತು ಅವರ ಅಜ್ಞಾನಪೀಡಿತ ಜನರು ಮೂಢನಂಬಿಕೆ ಮತ್ತು ಸ್ವಯಂಕೃತ ನಿಯಮಗಳಿಂದ ತಮ್ಮ ಜೀವನವನ್ನು ಹೊರೆ ಗಳಡಿಯಲ್ಲಿ ಸಿಲುಕಿಸಿಕೊಂಡಿದ್ದರು. ಅನೇಕ ಬಂಧನಗಳಲ್ಲಿ ತಮ್ಮನ್ನು ಬಿಗಿದುಕೊಂಡಿದ್ದರು. ಪ್ರವಾದಿವರ್ಯರು(ಸ) ಇಂತಹ ಹೊರೆಗಳನ್ನೆಲ್ಲಾ ಇಳಿಸುತ್ತಾರೆ ಮತ್ತು ಬಂಧನಗಳನ್ನೆಲ್ಲಾ ಬಿಡಿಸಿ ಜೀವನವನ್ನು ಮುಕ್ತಗೊಳಿಸುತ್ತಾರೆ.

158. ಓ ಮುಹಮ್ಮದರೇ, ಹೇಳಿರಿ: "ಓ ಮಾನವರೇ, ನಾನು ನಿಮ್ಮೆಲ್ಲರ ಕಡೆಗೆ ಭೂಮಿ ಆಕಾಶಗಳ ಸಾರ್ವಭೌಮನಾಗಿರುವ ಅಲ್ಲಾಹನ ಸಂದೇಶವಾಹಕನಾಗಿರುತ್ತೇನೆ. ಅವನ ಹೊರತು ಆರಾಧ್ಯನಿಲ್ಲ. ಅವನೇ ಜೀವನ ನೀಡುವವನು. ಅವನೇ ಮರಣ ಕೊಡುವವನು. ಆದುದರಿಂದ ಅಲ್ಲಾಹನ ಮೇಲೂ ಹಾಗೂ ಅವನಿಂದ ಕಳುಹಿಸ ಲಾದ, ಅಲ್ಲಾಹ್ ಮತ್ತು ಅವನ ಆದೇಶಗಳ ಮೇಲೆ ವಿಶ್ವಾಸವಿರಿ ಸುವ, 'ನಿರಕ್ಷರಿ' ಪ್ರವಾದಿಯವರ ಮೇಲೂ ವಿಶ್ವಾಸವಿರಿಸಿರಿ ಮತ್ತು ಅವರನ್ನು ಅನುಸರಿಸಿರಿ. ನೀವು ಸನ್ಮಾರ್ಗ ಹೊಂದ ಬಹುದು."

قُلْ يٰۤاَيُّهَا النَّاسُ اِنِّيْ رَسُوْلُ اللّٰهِ اِلَيْكُمْ
جَمِيْعًا الَّذِيْ لَهٗ مُلْكُ السَّمٰوٰتِ وَالْاَرْضِ
لَاۤ اِلٰهَ اِلَّا هُوَ يُحْيٖ وَيُمِيْتُ فَاٰمِنُوْا
بِاللّٰهِ وَرَسُوْلِهِ النَّبِيِّ الْاُمِّيِّ الَّذِيْ يُؤْمِنُ
بِاللّٰهِ وَكَلِمٰتِهٖ وَاتَّبِعُوْهُ لَعَلَّكُمْ تَهْتَدُوْنَ ﴿١٥٨﴾

159. ಮೂಸಾರ ಜನಾಂಗದಲ್ಲಿ ಸತ್ಯದ ಪ್ರಕಾರ ಮಾರ್ಗದರ್ಶನ ಮಾಡುತ್ತಿದ್ದ ಹಾಗೂ ಸತ್ಯದ ಪ್ರಕಾರವೇ ನ್ಯಾಯಪಾಲನೆ ಮಾಡುತ್ತಿದ್ದ ಒಂದು ಪಂಗಡವಿತ್ತು.

وَمِنْ قَوْمِ مُوْسٰۤى اُمَّةٌ يَّهْدُوْنَ بِالْحَقِّ
وَبِهٖ يَعْدِلُوْنَ ﴿١٥٩﴾

160. ನಾವು ಆ ಜನಾಂಗವನ್ನು ಹನ್ನೆರಡು ಮನೆತನಗಳಾಗಿ ವಿಭಾಗಿಸಿ, ಅವರನ್ನು ಸ್ವತಂತ್ರ ಪಂಗಡಗಳಾಗಿ ರೂಪಿಸಿದ್ದೆವು. ಆ ಜನಾಂಗವು ಮೂಸಾರೊಡನೆ ನೀರು ಕೇಳಿದಾಗ ನಾವು ಆ ಬಂಡೆಯ ಮೇಲೆ ತಮ್ಮ ಲಾಠಿಯಿಂದ ಹೊಡೆಯಲು ಸೂಚನೆ ಕೊಟ್ಟೆವು. ಆ ಪ್ರಕಾರ ಆ ಬಂಡೆಯಿಂದ ಹಠಾತ್ತನೆ ಹನ್ನೆರಡು ಚಿಲುಮೆಗಳು ಉಕ್ಕಿ ಬಂದುವು. ಪ್ರತಿಯೊಂದು ಪಂಗಡವು ನೀರು ಪಡೆಯಬೇಕಾದ ಸ್ಥಳವನ್ನು ನಿಶ್ಚಯಿಸಿಕೊಂಡಿತು. ನಾವು ಅವರ ಮೇಲೆ ಮೋಡದ ನೆರಳನ್ನು ಮಾಡಿದೆವು. ಅವರಿಗೆ 'ಮನ್ನ್' ಮತ್ತು 'ಸಲ್ವಾ' ಇಳಿಸಿದೆವು. "ನಾವು ನಿಮಗೆ ದಯಪಾಲಿಸಿದ ಶುದ್ಧ ವಸ್ತುಗಳನ್ನು ಉಣ್ಣಿರಿ" (ಎಂದು ಅಪ್ಪಣೆ ಕೊಟ್ಟೆವು) ಆದರೆ ಆ ಬಳಿಕ ಅವರು ಮಾಡಿದ್ದೆಲ್ಲ ನಮ್ಮ ಮೇಲೆ ಅಕ್ರಮವಾಗಿರಲಿಲ್ಲ, ನಿಜವಾಗಿ ಅವರು ತಮ್ಮ ಮೇಲೆಯೇ ಅಕ್ರಮವೆಸಗಿಕೊಂಡಿದ್ದರು.

وَقَطَّعْنٰهُمُ اثْنَتَيْ عَشْرَةَ اَسْبَاطًا اُمَمًا
وَاَوْحَيْنَاۤ اِلٰى مُوْسٰۤى اِذِ اسْتَسْقٰىهُ قَوْمُهٗۤ
اَنِ اضْرِبْ بِّعَصَاكَ الْحَجَرَ فَانْۢبَجَسَتْ
مِنْهُ اثْنَتَا عَشْرَةَ عَيْنًا قَدْ عَلِمَ كُلُّ
اُنَاسٍ مَّشْرَبَهُمْ وَظَلَّلْنَا عَلَيْهِمُ الْغَمَامَ
وَاَنْزَلْنَا عَلَيْهِمُ الْمَنَّ وَالسَّلْوٰى كُلُوْا
مِنْ طَيِّبٰتِ مَا رَزَقْنٰكُمْ وَمَا ظَلَمُوْنَا
وَلٰكِنْ كَانُوْۤا اَنْفُسَهُمْ يَظْلِمُوْنَ ﴿١٦٠﴾

161. "ಈ ನಾಡಿನಲ್ಲಿ ವಾಸಿಸಿರಿ; ನಿಮ್ಮಿಷ್ಟದಂತೆ ಇಲ್ಲಿಯ ಬೆಳೆಯಿಂದ ಜೀವನಾಧಾರಗಳನ್ನು ಪಡೆಯಿರಿ ಮತ್ತು 'ಹಿತ್ತ: ಹಿತ್ತ:' ಎನ್ನುತ್ತ ಪಟ್ಟಣದ ದ್ವಾರದೊಳಗೆ ಶಿರಬಾಗುತ್ತ ಪ್ರವೇಶಿಸಿರಿ. ನಾವು ನಿಮ್ಮ ಅಪರಾಧಗಳನ್ನು ಕ್ಷಮಿಸುವೆವು ಮತ್ತು ಸಜ್ಜನರಿಗೆ ಇನ್ನಷ್ಟು ಅನುಗ್ರಹ ಪ್ರದಾನ ಮಾಡುವೆವು" ಎಂದು ಅವರೊಡನೆ ಹೇಳಿದ್ದ ಸಂದರ್ಭವನ್ನು ಸ್ಮರಿಸಿರಿ.

وَاِذْ قِيْلَ لَهُمُ اسْكُنُوْا هٰذِهِ الْقَرْيَةَ وَكُلُوْا مِنْهَا
حَيْثُ شِئْتُمْ وَقُوْلُوْا حِطَّةٌ وَّادْخُلُوا الْبَابَ
سُجَّدًا نَّغْفِرْ لَكُمْ خَطِيْٓئٰتِكُمْ سَنَزِيْدُ الْمُحْسِنِيْنَ ﴿١٦١﴾

162. ಆದರೆ ಅವರ ಪೈಕಿ ಅಕ್ರಮಿಗಳಾಗಿದ್ದವರು ಅವರೊಡನೆ ಹೇಳಲಾಗಿದ್ದ ಮಾತನ್ನು ಬದಲಾಯಿಸಿ ಬಿಟ್ಟರು. ನಾವು ಅವರ ಅಕ್ರಮಗಳ ಫಲವಾಗಿ ಅವರ ಮೇಲೆ ಆಕಾಶದಿಂದ ಯಾತನೆ ಇಳಿಸಿದೆವು.

فَبَدَّلَ الَّذِينَ ظَلَمُوا مِنْهُمْ قَوْلًا غَيْرَ الَّذِي
قِيلَ لَهُمْ فَأَرْسَلْنَا عَلَيْهِمْ رِجْزًا مِنَ السَّمَاءِ
بِمَا كَانُوا يَظْلِمُونَ ١٦٢

163. ಇವರೊಡನೆ ಸಮುದ್ರ ತೀರದಲ್ಲಿದ್ದ ಆ ನಾಡಿನವರ ಕುರಿತೂ ಸ್ವಲ್ಪ ವಿಚಾರಿಸಿರಿ.[44] ಅವರಿಗೆ ಈ ಘಟನೆಯನ್ನು ನೆನಪಿಸಿರಿ - ಅಲ್ಲಿಯವರು 'ಸಬ್ತ್'ನ ದಿನ (ಶನಿವಾರ) ಅಲ್ಲಾಹನ ಆಜ್ಞೆಗಳನ್ನು ಉಲ್ಲಂಘಿಸುತ್ತಿದ್ದರು. 'ಸಬ್ತ್'ನ ದಿನವೇ ಮೀನುಗಳು ಉಕ್ಕಿ ಉಕ್ಕಿ ಮೇಲೆ ಬರುತ್ತಿದ್ದುವು ಮತ್ತು 'ಸಬ್ತ್'ನ ಹೊರತು ಇತರ ದಿನಗಳಲ್ಲಿ ಬರುತ್ತಿರಲಿಲ್ಲ. ನಾವು ಅವರ ಆಜ್ಞೋಲ್ಲಂಘನೆಯ ಕಾರಣ ಅವರನ್ನು ಪರೀಕ್ಷೆಗೊಳ ಪಡಿಸುತ್ತಿದ್ದುದರಿಂದ ಹೀಗಾಗುತ್ತಿತ್ತು.

وَسْئَلْهُمْ عَنِ الْقَرْيَةِ الَّتِي كَانَتْ حَاضِرَةَ
الْبَحْرِ إِذْ يَعْدُونَ فِي السَّبْتِ إِذْ تَأْتِيهِمْ
حِيتَانُهُمْ يَوْمَ سَبْتِهِمْ شُرَّعًا وَيَوْمَ لَا
يَسْبِتُونَ لَا تَأْتِيهِمْ كَذَٰلِكَ نَبْلُوهُمْ
بِمَا كَانُوا يَفْسُقُونَ ١٦٣

164. ಅವರಿಗೆ ಆ ಸಂದರ್ಭವನ್ನು ನೆನಪಿಸಿರಿ; ಅವರ ಪೈಕಿ ಒಂದು ಪಂಗಡವು ಇನ್ನೊಂದು ಪಂಗಡದೊಡನೆ, "ಅಲ್ಲಾಹನು ನಾಶಗೊಳಿಸಲಿರುವ ಅಥವಾ ಕಠಿಣ ಶಿಕ್ಷೆ ಕೊಡಲಿರುವಂಥವರಿಗೆ ನೀವೇಕೆ ಉಪದೇಶ ನೀಡುತ್ತೀರಿ?" ಎಂದು ಕೇಳಿದಾಗ ಅವರು ಹೀಗೆ ಉತ್ತರ ಕೊಟ್ಟಿದ್ದರು: "ನಾವು ಇದನ್ನೆಲ್ಲ ನಿಮ್ಮ ಪ್ರಭುವಿನ ಸನ್ನಿಧಿಯಲ್ಲಿ ನಮ್ಮ ನೆಪವನ್ನು ಮುಂದಿಡಲಿಕ್ಕಾಗಿ ಮಾಡುತ್ತೇವೆ. ಹಾಗೂ ಇವರು ಅವನ ಆಜ್ಞೋಲ್ಲಂಘನೆಯಿಂದ ದೂರ ಸರಿಯತೊಡಗುವರೆಂದು ನಿರೀಕ್ಷಿಸಿ ಹೀಗೆ ಮಾಡುತ್ತೇವೆ."

وَإِذْ قَالَتْ أُمَّةٌ مِنْهُمْ لِمَ تَعِظُونَ قَوْمًا اللَّهُ
مُهْلِكُهُمْ أَوْ مُعَذِّبُهُمْ عَذَابًا شَدِيدًا قَالُوا
مَعْذِرَةً إِلَىٰ رَبِّكُمْ وَلَعَلَّهُمْ يَتَّقُونَ ١٦٤

165. ಕೊನೆಗೆ ಅವರು ಅವರಿಗೆ ನೆನಪಿಗೆ ತಂದು ಕೊಟ್ಟಿದ್ದ ಮಾರ್ಗದರ್ಶನವನ್ನು ಸಂಪೂರ್ಣ ಮರೆತು ಬಿಟ್ಟಾಗ ಕೆಡುಕಿನಿಂದ ತಡೆಯುತ್ತಿದ್ದವರನ್ನು ನಾವು ರಕ್ಷಿಸಿದೆವು ಮತ್ತು ಅಕ್ರಮ ವೆಸಗುತ್ತಿದ್ದ ಮಿಕ್ಕೆಲ್ಲರನ್ನು ಅವರ ಆಜ್ಞೋಲ್ಲಂಘನೆಗಾಗಿ ತೀವ್ರ ಯಾತನೆಯಲ್ಲಿ ಹಿಡಿದೆವು.

فَلَمَّا نَسُوا مَا ذُكِّرُوا بِهِ أَنْجَيْنَا الَّذِينَ
يَنْهَوْنَ عَنِ السُّوءِ وَأَخَذْنَا الَّذِينَ ظَلَمُوا
بِعَذَابٍ بَئِيسٍ بِمَا كَانُوا يَفْسُقُونَ ١٦٥

166. ಅನಂತರ ಯಾವ ಕಾರ್ಯಗಳಿಂದ ಅವರನ್ನು ತಡೆಯಲಾಗಿತ್ತೋ ಅವುಗಳನ್ನೇ ಅವರು ತಮ್ಮ ಉದ್ಧಟತನದಿಂದ ಮಾಡುತ್ತ

فَلَمَّا عَتَوْا عَنْ مَا نُهُوا عَنْهُ قُلْنَا لَهُمْ كُونُوا
قِرَدَةً خَاسِئِينَ ١٦٦

44. ಈ ಪ್ರದೇಶ 'ಐಲ಼', 'ಐಲಾತ್' ಅಥವಾ 'ಐಲೂತ್' ಆಗಿರಬಹುದೆಂಬುದು ಹೆಚ್ಚಿನ ಸಂಶೋಧಕರ ಅಭಿಪ್ರಾಯ. ಅಲ್ಲಿ ಈಗ ಇಸ್ರಾಈಲ್‌ನ ಯಹೂದಿ ಸಾಮ್ರಾಜ್ಯ ಅದೇ ಹೆಸರಿನಿಂದ ಒಂದು ಬಂದರನ್ನು ನಿರ್ಮಿಸಿದೆ. ಅದರ ಬಳಿಯಲ್ಲೇ ಜೋರ್ಡಾನಿನ ಸುಪ್ರಸಿದ್ಧ 'ಅಕಬಾ' ಬಂದರು ಇದೆ.

ಹೋದಾಗ "ಹೀನ ವಾನರರಾಗಿ ಬಿಡಿರಿ"[45] ಎಂದು ನಾವು ಹೇಳಿ ಬಿಟ್ಟೆವು.

167. ಬನೀಇಸ್ರಾಈಲರ ಮೇಲೆ ಪುನರುತ್ಥಾನ ದಿನದವರೆಗೂ ಅವರಿಗೆ ತೀವ್ರ ಯಾತನೆ ಕೊಡುವಂಥವರನ್ನು ಎರಗಿಸುತ್ತಲೇ ಇರುವೆನೆಂದು ನಿಮ್ಮ ಪ್ರಭು ಘೋಷಿಸಿದುದನ್ನು ಸ್ಮರಿಸಿರಿ. ನಿಶ್ಚಯವಾಗಿಯೂ ನಿಮ್ಮ ಪ್ರಭು ಶಿಕ್ಷೆ ಕೊಡುವುದರಲ್ಲಿ ಅತಿ ಶೀಘ್ರನು ಮತ್ತು ನಿಶ್ಚಯವಾಗಿಯೂ ಕ್ಷಮಾಶೀಲನೂ ಕರುಣಾಮಯಿಯೂ ಆಗಿರುತ್ತಾನೆ.

وَاِذْ تَاَذَّنَ رَبُّكَ لَيَبْعَثَنَّ عَلَيْهِمْ اِلٰى
يَوْمِ الْقِيٰمَةِ مَنْ يَّسُوْمُهُمْ سُوْٓءَ الْعَذَابِ ؕ
اِنَّ رَبَّكَ لَسَرِيْعُ الْعِقَابِ ۖۚ وَاِنَّهٗ
لَغَفُوْرٌ رَّحِيْمٌ ﴿۱۶۷﴾

168. ನಾವು ಅವರನ್ನು ಭೂಮಿಯ ಮೇಲೆ ವಿಭಿನ್ನಗೊಳಿಸಿ ಅನೇಕ ಜನಾಂಗಗಳಾಗಿ ಹಂಚಿ ಬಿಟ್ಟೆವು. ಅವರಲ್ಲಿ ಕೆಲವರು ಸಜ್ಜನರಾಗಿದ್ದರೆ ಕೆಲವರು ಅದಕ್ಕೆ ವ್ಯತಿರಿಕ್ತವಾಗಿದ್ದರು. ಅವರು ಮರಳಬಹುದೆಂದು ನಿರೀಕ್ಷಿಸಿ ನಾವು ಅವರನ್ನು ಅನುಕೂಲ ಮತ್ತು ಪ್ರತಿಕೂಲ ಪರಿಸ್ಥಿತಿಗಳ ಮೂಲಕ ಪರೀಕ್ಷೆಗೊಳಪಡಿಸಿದೆವು.

وَقَطَّعْنٰهُمْ فِى الْاَرْضِ اُمَمًا ۚ مِنْهُمُ
الصّٰلِحُوْنَ وَمِنْهُمْ دُوْنَ ذٰلِكَ ۡ وَبَلَوْنٰهُمْ
بِالْحَسَنٰتِ وَالسَّيِّاٰتِ لَعَلَّهُمْ يَرْجِعُوْنَ ﴿۱۶۸﴾

169. ಹಿಂದಿನ ತಲೆಮಾರುಗಳ ಬಳಿಕ ದೇವಗ್ರಂಥದ ವಾರೀಸುದಾರರಾಗಿ ಇಹಲೋಕದ ತುಚ್ಛ ಲಾಭಗಳನ್ನು ಸಂಗ್ರಹಿಸುವವರು ಇವರ ಉತ್ತರಾಧಿಕಾರಿಗಳಾದರು. ನಾವು ಕ್ಷಮಿಸಲ್ಪಡುವೆವೆಂಬ ನಿರೀಕ್ಷೆ ನಮಗಿದೆಯೆಂದು ಇವರು ಹೇಳುತ್ತಾರೆ. ಅದೇ ಲೌಕಿಕ ಸಂಪತ್ತು ಪುನಃ ಅವರ ಮುಂದೆ ಬಂದಾಗ ಅದರ ಮುಂದೆ ಮುಗಿ ಬೀಳುತ್ತಾರೆ. ಅಲ್ಲಾಹನ ಹೆಸರಲ್ಲಿ ಸತ್ಯವಾದುದನ್ನೇ ಹೇಳಬೇಕೆಂದು ಗ್ರಂಥದ ಪ್ರಮಾಣವನ್ನು ಅವರಿಂದ ಪಡೆಯಲಾಗಿಲ್ಲವೇ?

فَخَلَفَ مِنْۢ بَعْدِهِمْ خَلْفٌ وَّرِثُوا الْكِتٰبَ
يَاْخُذُوْنَ عَرَضَ هٰذَا الْاَدْنٰى وَيَقُوْلُوْنَ
سَيُغْفَرُ لَنَا ۚ وَاِنْ يَّاْتِهِمْ عَرَضٌ مِّثْلُهٗ
يَاْخُذُوْهُ ؕ اَلَمْ يُؤْخَذْ عَلَيْهِمْ مِّيْثَاقُ
الْكِتٰبِ اَنْ لَّا يَقُوْلُوْا عَلَى اللّٰهِ اِلَّا الْحَقَّ

45. ಆ ಪ್ರದೇಶದಲ್ಲಿ ಮೂರು ವಿಧದ ಜನರಿದ್ದರೆಂದು ಇದರಿಂದ ವ್ಯಕ್ತವಾಗುತ್ತದೆ. ಮೊದಲನೆಯದಾಗಿ ದೇವಾದೇಶಗಳನ್ನು ನಿರ್ಭಿಡವಾಗಿ ಉಲ್ಲಂಘಿಸುತ್ತಿದ್ದವರು, ಎರಡನೆಯ ವಿಭಾಗ ಸ್ವತಃ ದೇವಾದೇಶಗಳ ಉಲ್ಲಂಘನೆ ಮಾಡುತ್ತಿರಲಿಲ್ಲ, ಆದರೆ ಆಜ್ಞೋಲ್ಲಂಘನೆಯನ್ನು ಮೌನವಾಗಿ ಕುಳಿತು ನೋಡುತ್ತಿದ್ದರು. ಮಾತ್ರವಲ್ಲ ಈ ಕಿಡಿಗೇಡಿಗಳಿಗೆ ಉಪದೇಶ ಮಾಡುವುದರಿಂದೇನು ಫಲ ಎಂದು ಉಪದೇಶಕರಿಗೆ ಹೇಳುತ್ತಿದ್ದರು. ಮೂರನೆಯ ವಿಭಾಗದ ಜನರಿಗೆ, ತಮ್ಮ ಸತ್ಯವಿಶ್ವಾಸದ ವರ್ಚಸ್ಸಿನಿಂದಾಗಿ ದೇವಾದೇಶಗಳ ಬಹಿರಂಗ ಉಲ್ಲಂಘನೆ ಸಹ್ಯವಿರಲಿಲ್ಲ. ಆದ್ದರಿಂದ ಅವರು ಒಳಿತನ್ನು ಆಜ್ಞಾಪಿಸುವುದರಲ್ಲಿ ಮತ್ತು ಕೆಡುಕನ್ನು ವಿರೋಧಿಸುವುದರಲ್ಲಿ ಸಕ್ರಿಯವಾಗಿದ್ದರು. ಅಂತಾದರೂ ಈ ಅಪರಾಧಿಗಳು ಸನ್ಮಾರ್ಗಕ್ಕೆ ಬಂದು ಬಿಡಲಿ, ಒಂದು ವೇಳೆ ಅವರು ಸನ್ಮಾರ್ಗಕ್ಕೆ ಬರದಿದ್ದರೆ ಕನಿಷ್ಠಪಕ್ಷ ನಮ್ಮ ಕರ್ತವ್ಯವಾದರೂ ಈಡೇರಲಿ. ಅದರಿಂದ ದೇವನ ಮುಂದೆ ಸಾಕ್ಷ್ಯವನ್ನು ಒದಗಿಸಬಹುದಾಗಿದೆ ಎಂದವರು ಆಲೋಚಿಸಿದರು. ಆದ್ದರಿಂದ ಆ ಪ್ರದೇಶದ ಮೇಲೆ ದೇವಯಾತನೆ ಎರಗಿದಾಗ ಮೂರು ವಿಭಾಗಗಳ ಪೈಕಿ ಮೂರನೆಯ ವಿಭಾಗ ಮಾತ್ರ ಯಾತನೆಯಿಂದ ಸುರಕ್ಷಿತವಾಗುಳಿಯಿತು ಎಂದು ಕುರ್‌ಆನ್ ಹೇಳುತ್ತದೆ. ಏಕೆಂದರೆ ಅವರು ಮಾತ್ರ ದೇವನ ಮುಂದೆ ಉತ್ತರಕೊಡಬೇಕಾದ ಬಗ್ಗೆ ಚಿಂತಿತರಾಗಿದ್ದರು. ಅವರು ಮಾತ್ರ ತಮ್ಮ ನಿರಪರಾಧಿತ್ವದ ಸಾಕ್ಷ್ಯ ಒದಗಿಸಿದ್ದರು. ಆದರೆ ಉಳಿದೆರಡು ವಿಭಾಗಗಳು ಅಕ್ರಮಿಗಳು ಎಂದು ಪರಿಗಣಿಸಲ್ಪಟ್ಟವು. ಅವರು ತಂತಮ್ಮ ಅಪರಾಧಕ್ಕನುಸಾರ ಶಿಕ್ಷೆಗೊಳಗಾದರು. ದೇವಾದೇಶಗಳನ್ನು ಸ್ಪಷ್ಟವಾಗಿ ಉಲ್ಲಂಘಿಸುತ್ತಿದ್ದವರನ್ನು ಮಾತ್ರ ಕಪಿಗಳನ್ನಾಗಿ ಮಾಡಲಾಯಿತು.

ಗ್ರಂಥದಲ್ಲಿ ಬರೆದಿರುವುದನ್ನು ಇವರು ಸ್ವತಃ ಓದಿರುತ್ತಾರೆ. ಪರಲೋಕದ ವಾಸಸ್ಥಳವಂತು ದೇವಭಯವುಳ್ಳವರಿಗೇ ಉತ್ತಮ.[46] ಇಷ್ಟನ್ನೂ ನೀವು ಗ್ರಹಿಸುವುದಿಲ್ಲವೇ?

وَدَرَسُوْا مَا فِيْهِ ۗ وَالدَّارُ الْاٰخِرَةُ خَيْرٌ لِّلَّذِيْنَ يَتَّقُوْنَ ۗ اَفَلَا تَعْقِلُوْنَ ﴿١٦٩﴾

170. ಗ್ರಂಥವನ್ನು ಅನುಸರಿಸುವವರು ಮತ್ತು ನಮಾಝನ್ನು ಸಂಸ್ಥಾಪಿಸಿಕೊಂಡವರು- ನಿಶ್ಚಯವಾಗಿಯೂ ಇಂತಹ ಸದಾಚಾರಿಗಳ ಸತ್ಫಲವನ್ನು ನಾವೆಂದಿಗೂ ನಷ್ಟಗೊಳಿಸಲಾರೆವು.

وَالَّذِيْنَ يُمَسِّكُوْنَ بِالْكِتٰبِ وَاَقَامُوا الصَّلٰوةَ ۗ اِنَّا لَا نُضِيْعُ اَجْرَ الْمُصْلِحِيْنَ ﴿١٧٠﴾

171. ನಾವು ಪರ್ವತವನ್ನೆತ್ತಿ ಛತ್ರಿಯಂತೆ ಅವರ ಮೇಲೆ ಹರಡಿದಾಗ ಅದು ತಮ್ಮ ಮೇಲೆ ಬಿದ್ದುಬಿಡುವುದೆಂದು ಅವರು ಶಂಕಿಸಿದ ಆ ಸಂದರ್ಭವೂ ಅವರಿಗೆ ನೆನಪಿದೆಯೆ? ಆಗ ನಾವು ಅವರೊಡನೆ, "ನಾವು ನಿಮಗೆ ಕೊಡುತ್ತಿರುವ ಗ್ರಂಥವನ್ನು ಬಿಗಿಯಾಗಿ ಹಿಡಿಯಿರಿ ಮತ್ತು ಅದರಲ್ಲಿ ಬರೆದಿರುವುದನ್ನು ನೆನಪಿಟ್ಟುಕೊಳ್ಳಿರಿ. ನೀವು ಧರ್ಮನಿಷ್ಠರಾಗಬಹುದು" ಎಂದು ಹೇಳಿದ್ದೆವು.

وَاِذْ نَتَقْنَا الْجَبَلَ فَوْقَهُمْ كَاَنَّهٗ ظُلَّةٌ وَّظَنُّوْٓا اَنَّهٗ وَاقِعٌۢ بِهِمْ ۚ خُذُوْا مَآ اٰتَيْنٰكُمْ بِقُوَّةٍ وَّاذْكُرُوْا مَا فِيْهِ لَعَلَّكُمْ تَتَّقُوْنَ ﴿١٧١﴾ ع ٢١ ١١

172. ಓ ಪೈಗಂಬರರೇ, ನಿಮ್ಮ ಪ್ರಭು ಆದಮರ ಪೀಳಿಗೆಯಿಂದ ಅವರ ಸಂತತಿಯನ್ನು ಹೊರತಂದಿದ್ದ ಹಾಗೂ ಅವರನ್ನು ಸ್ವತಃ ಅವರ ಮೇಲೆ ಸಾಕ್ಷಿಗಳಾಗಿ ಮಾಡುತ್ತಾ "ನಾನು ನಿಮ್ಮ ಪ್ರಭುವಲ್ಲವೇ?" ಎಂದು ಕೇಳಿದ್ದ ಸಂದರ್ಭವನ್ನು ಜನರಿಗೆ ನೆನಪಿಸಿರಿ. ಆಗ ಅವರು, "ಹೌದು, ಖಂಡಿತವಾಗಿಯೂ ನೀನೇ ನಮ್ಮ ಪ್ರಭು. ನಾವು ಇದಕ್ಕೆ ಸಾಕ್ಷ್ಯ ವಹಿಸುತ್ತೇವೆ"[47] ಎಂದರು. ನೀವು ಪುನರುತ್ಥಾನ ದಿನದಂದು "ನಾವು ಈ ಬಗ್ಗೆ ಅಜ್ಞರಾಗಿದ್ದೆವು" ಎಂದು ಹೇಳಿಬಿಡಬಾರದೆಂದು-

وَاِذْ اَخَذَ رَبُّكَ مِنْۢ بَنِيْٓ اٰدَمَ مِنْ ظُهُوْرِهِمْ ذُرِّيَّتَهُمْ وَاَشْهَدَهُمْ عَلٰٓى اَنْفُسِهِمْ ۚ اَلَسْتُ بِرَبِّكُمْ ۗ قَالُوْا بَلٰى ۛ شَهِدْنَا ۛ اَنْ تَقُوْلُوْا يَوْمَ الْقِيٰمَةِ اِنَّا كُنَّا عَنْ هٰذَا غٰفِلِيْنَ ﴿١٧٢﴾ منزل ٢

173. ಅಥವಾ 'ದೇವ ಸಹಭಾಗಿತ್ವ'ವನ್ನು ನಮಗಿಂತ ಮುಂಚೆ ನಮ್ಮ ಪೂರ್ವಿಕರು ಪ್ರಾರಂಭಿಸಿದ್ದರು, ನಾವು ಅವರ ಬಳಿಕ ಅವರ ಸಂತತಿಯಲ್ಲಿ ಜನಿಸಿದವರು, ಹೀಗಿರುವಾಗ ದುರಾಚಾರಿಗಳು ಮಾಡಿದ ಅಪರಾಧಕ್ಕಾಗಿ ನೀನು ನಮ್ಮನ್ನು ಹಿಡಿಯುವೆಯಾ?" ಎಂದು ಕೇಳಿಬಿಡಬಾರದೆಂದು ನಾವು ಹೀಗೆ ಮಾಡಿದ್ದೆವು.

اَوْ تَقُوْلُوْٓا اِنَّمَآ اَشْرَكَ اٰبَآؤُنَا مِنْ قَبْلُ وَكُنَّا ذُرِّيَّةً مِّنْۢ بَعْدِهِمْ ۚ اَفَتُهْلِكُنَا بِمَا فَعَلَ الْمُبْطِلُوْنَ ﴿١٧٣﴾

46. ಈ ವಾಕ್ಯವನ್ನು ಎರಡು ರೀತಿಯಲ್ಲಿ ಅನುವಾದಿಸಬಹುದು. ಮೊದಲನೆಯದು ನಾವು ಮೇಲೆ ಕೊಟ್ಟಿರುವ ಅನುವಾದ. ಇನ್ನೊಂದು "ದೇವಭಯ ಉಳ್ಳವರಿಗೆ ಪರಲೋಕದ ವಾಸಸ್ಥಳವೇ ಉತ್ತಮ" ಎಂದಾಗಿದೆ.

47. ಅನೇಕ ಪ್ರವಾದಿವಚನಗಳಿಂದ ವ್ಯಕ್ತವಾಗುವಂತೆ ಇದು ಆದಮ್‌ರ(ಅ) ಸೃಷ್ಟಿಯ ವೇಳೆ ನಡೆದ ಘಟನೆ. ಆಗ ದೇವಚರರನ್ನೆಲ್ಲಾ ಸೇರಿಸಿ ಮೊದಲ ಮಾನವನ ಮುಂದೆ ಸಾಷ್ಟಾಂಗವೆರಗಿಸಲಾಗಿತ್ತು ಮತ್ತು ಭೂಮುಖದಲ್ಲಿ ಮಾನವನ 'ಖಿಲಾಫತ್' ಅನ್ನು ಘೋಷಿಸಲಾಗಿತ್ತು. ಅಂತೆಯೇ ಆ ದಿನ ಪ್ರಳಯಕಾಲದ ತನಕ ಹುಟ್ಟಲಿರುವ ಎಲ್ಲ ಮಾನವರಿಗೂ ಅಲ್ಲಾಹನು ಒಮ್ಮೆಲೇ ಅಸ್ತಿತ್ವ ಮತ್ತು ಪ್ರಜ್ಞೆಯನ್ನು ನೀಡಿ ತನ್ನ ಮುಂದೆ ಹಾಜರುಪಡಿಸಿ ತನ್ನ ಪ್ರಭುತ್ವದ ಬಗ್ಗೆ ಅವರಿಂದ ಸಾಕ್ಷ್ಯ ಪಡೆದಿದ್ದನು.

174. ನೋಡಿರಿ, ಹೀಗೆ ನಾವು ದೃಷ್ಟಾಂತಗಳನ್ನು ಸುಸ್ಪಷ್ಟವಾಗಿ ವಿವರಿಸುತ್ತೇವೆ.[48] ಇವರು ಮರಳಿ ಬರಬೇಕೆಂದೇ ಹೀಗೆ ಮಾಡುತ್ತೇವೆ.

وَكَذَٰلِكَ نُفَصِّلُ الْآيَاتِ وَلَعَلَّهُمْ يَرْجِعُونَ ﴿١٧٤﴾

175. ಓ ಪೈಗಂಬರರೇ, ನಾವು ನಮ್ಮ ದೃಷ್ಟಾಂತಗಳ ಜ್ಞಾನವನ್ನು ದಯಪಾಲಿಸಿದ್ದರೂ ಅವುಗಳ ಪಾಲನೆಯಿಂದ ತಪ್ಪಿಸಿಕೊಂಡವನ ವೃತ್ತಾಂತವನ್ನೂ ಅವರ ಮುಂದೆ ವಿವರಿಸಿರಿ. ಕೊನೆಗೆ ಅವನು ಪಥಭ್ರಷ್ಟರಲ್ಲಿ ಸೇರಿ ಹೋಗುವಲ್ಲಿಯವರೆಗೂ ಶೈತಾನನು ಅವನ ಬೆಂಬತ್ತಿದನು.

وَاتْلُ عَلَيْهِمْ نَبَأَ الَّذِي آتَيْنَاهُ آيَاتِنَا فَانْسَلَخَ
مِنْهَا فَأَتْبَعَهُ الشَّيْطَانُ فَكَانَ مِنَ الْغَاوِينَ ﴿١٧٥﴾

176. ನಾವಿಚ್ಛಿಸುತ್ತಿದ್ದರೆ ಆ ದೃಷ್ಟಾಂತಗಳ ಮೂಲಕ ಅವನಿಗೆ ಔನ್ನತ್ಯ ದಯಪಾಲಿಸುತ್ತಿದ್ದೆವು. ಆದರೆ ಅವನಂತು ನೆಲದ ಕಡೆಗೇ ಬಾಗಿ ಬಿಟ್ಟನು ಮತ್ತು ತನ್ನ ಇಂದ್ರಿಯಾಸಕ್ತಿಗಳನ್ನೇ ಹಿಂಬಾಲಿಸಿದನು. ಆದುದರಿಂದ ಅವನ ಪರಿಸ್ಥಿತಿಯು ನಾಯಿಯಂತಾಯಿತು. ನೀವು ಅದರ ಮೇಲೆ ದಾಳಿ ಮಾಡಿದರೂ ಅದು ನಾಲಗೆಯನ್ನು ಹೊರ ಚಾಚಿಕೊಂಡಿರುವುದು.[49] ಅದನ್ನು ಬಿಟ್ಟು ಬಿಟ್ಟರೂ ಅದು ನಾಲಗೆಯನ್ನು ಹೊರ ಚಾಚಿಕೊಂಡಿರುವುದು. ಇದುವೇ ನಮ್ಮ ದೃಷ್ಟಾಂತಗಳನ್ನು ಸುಳ್ಳಾಗಿಸುವವರಿಗೆ ಇರುವ ಉಪಮೆ. ನೀವು ಈ ವೃತ್ತಾಂತಗಳನ್ನು ಇವರಿಗೆ ಹೇಳುತ್ತಲಿರಿ. ಇವರು ಕೊಂಚ ಚಿಂತಿಸಲಿ.

وَلَوْ شِئْنَا لَرَفَعْنَاهُ بِهَا وَلَٰكِنَّهُ أَخْلَدَ
إِلَى الْأَرْضِ وَاتَّبَعَ هَوَاهُ ۚ فَمَثَلُهُ كَمَثَلِ
الْكَلْبِ ۚ إِنْ تَحْمِلْ عَلَيْهِ يَلْهَثْ أَوْ
تَتْرُكْهُ يَلْهَثْ ۚ ذَٰلِكَ مَثَلُ الْقَوْمِ الَّذِينَ
كَذَّبُوا بِآيَاتِنَا ۚ فَاقْصُصِ الْقَصَصَ
لَعَلَّهُمْ يَتَفَكَّرُونَ ﴿١٧٦﴾

177. ನಮ್ಮ ದೃಷ್ಟಾಂತಗಳನ್ನು ಸುಳ್ಳಾಗಿಸಿದವರ ಉದಾಹರಣೆಯು ಅತ್ಯಂತ ನಿಕೃಷ್ಟವಾಗಿದೆ ಮತ್ತು ಅವರು ತಮ್ಮ ಮೇಲೆ ತಾವೇ ಅಕ್ರಮವೆಸಗುತ್ತಿದ್ದಾರೆ.

سَاءَ مَثَلًا الْقَوْمُ الَّذِينَ كَذَّبُوا بِآيَاتِنَا
وَأَنْفُسَهُمْ كَانُوا يَظْلِمُونَ ﴿١٧٧﴾

178. ಅಲ್ಲಾಹನು ಯಾರಿಗೆ ಸನ್ಮಾರ್ಗದರ್ಶನ ಮಾಡುತ್ತಾನೋ ಅವನೇ ಸನ್ಮಾರ್ಗ ಹೊಂದುತ್ತಾನೆ ಮತ್ತು ಅಲ್ಲಾಹನು ತನ್ನ ಮಾರ್ಗ ದರ್ಶನದಿಂದ ಯಾರನ್ನು ವಂಚಿಸುತ್ತಾನೋ ಅವನೇ ವಿಫಲನೂ ಹತಾಶನೂ ಆಗಿರುತ್ತಾನೆ.

مَنْ يَهْدِ اللَّهُ فَهُوَ الْمُهْتَدِي ۖ وَمَنْ
يُضْلِلْ فَأُولَٰئِكَ هُمُ الْخَاسِرُونَ ﴿١٧٨﴾

48. ಅರ್ಥಾತ್- ಮನುಷ್ಯನ ವ್ಯಕ್ತಿತ್ವದಲ್ಲೇ ಇರುವ ಸತ್ಯವನ್ನು ಗುರುತಿಸಬಲ್ಲ ಚಿಹ್ನೆಗಳು ಸನ್ಮಾರ್ಗದ ಕಡೆಗೆ ಅವನಿಗೆ ಮಾರ್ಗದರ್ಶನವೀಯುತ್ತವೆ.

49. ವ್ಯಾಖ್ಯಾನಕಾರರು ಈ ಉದಾಹರಣೆಯನ್ನು ಪ್ರವಾದಿವರ್ಯರ(ಸ) ಕಾಲದ ಮತ್ತು ಅದಕ್ಕಿಂತ ಮೊದಲು ಇತಿಹಾಸದಲ್ಲಿ ಆಗಿ ಹೋದ ಅನೇಕ ವ್ಯಕ್ತಿಗಳಿಗೆ ಅನ್ವಯಗೊಳಿಸಿದ್ದಾರೆ. ವಾಸ್ತವದಲ್ಲಿ ಈ ಉದಾಹರಣೆ ಅನ್ವಯವಾಗುವ ಆ ನಿರ್ದಿಷ್ಟ ವ್ಯಕ್ತಿ ಅಗೋಚರವಾಗಿದ್ದಾನೆ. ಆದರೆ ಅಂತಹ ಗುಣಗಳನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಗೂ ಈ ಉದಾಹರಣೆ ಅನ್ವಯವಾಗುತ್ತದೆ. ಅಲ್ಲಾಹನು ಅಂತಹ ವ್ಯಕ್ತಿಯನ್ನು ನಾಯಿಗೆ ಹೋಲಿಸಿದ್ದಾನೆ. ಸದಾ ನೇತಾಡುವ ಅದರ ನಾಲಗೆ ಮತ್ತು ನಿರಂತರ ಸುರಿಯುವ ಅದರ ಜೊಲ್ಲು ಎಂದೂ ತಣಿಯದ ದುರಾಸೆಯ ಅಗ್ನಿ ಮತ್ತು ಯಾವುದರಿಂದಲೂ ತೃಪ್ತವಾಗದ ದುಷ್ಟ ಸಂಕಲ್ಪವನ್ನು ಸೂಚಿಸುತ್ತದೆ. ಈ ಹೋಲಿಕೆಯು ಲೌಕಿಕ ಮೋಹದಲ್ಲಿ ಅಂಧನಾದವನನ್ನು ನಮ್ಮ ಭಾಷೆಯಲ್ಲಿ ನಾಯಿ ಎನ್ನುವಂತೆಯೇ ಇದೆ.

179. ಅನೇಕ 'ಯಕ್ಷ' ಮತ್ತು ಮನುಷ್ಯರನ್ನು ನಾವು ನರಕಕ್ಕಾಗಿಯೇ ಸೃಷ್ಟಿಸಿದ್ದೇವೆಂಬುದು ವಾಸ್ತವ. ಅವರಿಗೆ ಹೃದಯಗಳಿವೆ ಆದರೆ ಅವರು ಅದರಿಂದ ವಿವೇಚಿಸುವುದಿಲ್ಲ. ಅವರಿಗೆ ಕಣ್ಣು ಗಳಿವೆ ಆದರೆ ಅವರು ಅವುಗಳಿಂದ ವೀಕ್ಷಿಸುವುದಿಲ್ಲ. ಅವರಿಗೆ ಕಿವಿಗಳಿವೆ ಆದರೆ ಅವರು ಅವುಗಳಿಂದ ಆಲಿಸುವುದಿಲ್ಲ. ಅವರು ಪ್ರಾಣಿಗಳಂತಿದ್ದಾರೆ ಮಾತ್ರವಲ್ಲ ಅವುಗಳಿಗಿಂತಲೂ ದಾರಿಗೆಟ್ಟ ವರು. ಅವರು ಅಲಕ್ಷ್ಯರಾಗಿದ್ದಾರೆ.[50]

وَلَقَدْ ذَرَأْنَا لِجَهَنَّمَ كَثِيرًا مِّنَ الْجِنِّ
وَالْإِنسِ ۖ لَهُمْ قُلُوبٌ لَّا يَفْقَهُونَ بِهَا
وَلَهُمْ أَعْيُنٌ لَّا يُبْصِرُونَ بِهَا وَلَهُمْ آذَانٌ
لَّا يَسْمَعُونَ بِهَا ۚ أُولَٰئِكَ كَالْأَنْعَامِ بَلْ
هُمْ أَضَلُّ ۚ أُولَٰئِكَ هُمُ الْغَافِلُونَ ﴿١٧٩﴾

180. ಅಲ್ಲಾಹನು ಉತ್ತಮ ನಾಮಗಳಿಗೆ ಅರ್ಹನಾಗಿದ್ದಾನೆ. ಅವನನ್ನು ಉತ್ತಮ ನಾಮಗಳಿಂದಲೇ ಕರೆಯಿರಿ. ಅವನ ನಾಮಗಳನ್ನಿಡು ವುದರಲ್ಲಿ ಅತಿರೇಕವೆಸಗುವವರನ್ನು ಬಿಟ್ಟು ಬಿಡಿರಿ. ಅವರು ಮಾಡುವುದರ ಪ್ರತಿಫಲವನ್ನು ಅವರು ಪಡೆದೇ ತೀರುವರು.[51]

وَلِلَّهِ الْأَسْمَاءُ الْحُسْنَىٰ فَادْعُوهُ بِهَا ۖ
وَذَرُوا الَّذِينَ يُلْحِدُونَ فِي أَسْمَائِهِ ۚ
سَيُجْزَوْنَ مَا كَانُوا يَعْمَلُونَ ﴿١٨٠﴾

181. ನಮ್ಮ ಸೃಷ್ಟಿಯಲ್ಲಿ ನಿಖರವಾಗಿ ಸತ್ಯದಂತೆ ಮಾರ್ಗದರ್ಶನ ಮತ್ತು ಅದರಂತೆ ನ್ಯಾಯ ಪಾಲಿಸುವ ಒಂದು ಪಂಗಡವೂ ಇದೆ.

وَمِمَّنْ خَلَقْنَا أُمَّةٌ يَهْدُونَ بِالْحَقِّ وَ
بِهِ يَعْدِلُونَ ﴿١٨١﴾

182. ನಮ್ಮ ದೃಷ್ಟಾಂತವನ್ನು ಸುಳ್ಳಾಗಿಸಿದವರನ್ನು ನಾವು ಕ್ರಮೇಣ ಅವರಿಗೆ ಅರಿವೇ ಆಗದಂತೆ ವಿನಾಶದ ಕಡೆಗೆ ಒಯ್ಯುವೆವು.

وَالَّذِينَ كَذَّبُوا بِآيَاتِنَا سَنَسْتَدْرِجُهُم
مِّنْ حَيْثُ لَا يَعْلَمُونَ ﴿١٨٢﴾

183. ನಾನು ಅವರಿಗೆ ಸಡಿಲು ಬಿಡುತ್ತಿದ್ದೇನೆ. ನನ್ನ ತಂತ್ರವು ಅತ್ಯಂತ ಅಬೇಧ್ಯವಾದುದು.

وَأُمْلِي لَهُمْ ۚ إِنَّ كَيْدِي مَتِينٌ ﴿١٨٣﴾

184. ಇವರೆಂದೂ ಚಿಂತಿಸಿಲ್ಲವೇ? ಇವರ ಸಂಗಾತಿಯ ಮೇಲೆ ಹುಚ್ಚಿನ ಯಾವ ಪ್ರಭಾವವೂ ಇಲ್ಲ.[52] ಅವರು (ದುಷ್ಪರಿಣಾಮ ಮುಂದೆ ಬರುವುದಕ್ಕೆ ಮುಂಚೆಯೇ) ಸುಸ್ಪಷ್ಟ ಎಚ್ಚರಿಕೆ ನೀಡುತ್ತಿದ್ದಾರೆ.

أَوَلَمْ يَتَفَكَّرُوا ۗ مَا بِصَاحِبِهِم مِّن جِنَّةٍ ۚ
إِنْ هُوَ إِلَّا نَذِيرٌ مُّبِينٌ ﴿١٨٤﴾

50. ಅರ್ಥಾತ್- ನಾವು ಅವರನ್ನು ಹೃದಯ, ಮೆದುಳು, ಕಣ್ಣು ಮತ್ತು ಕಿವಿಗಳನ್ನು ನೀಡಿ ಕಳುಹಿಸಿದ್ದೆವು. ಆದರೆ ಆ ಅಕ್ರಮಿಗಳು ಅದರಿಂದ ಯಾವುದೇ ಪ್ರಯೋಜನವನ್ನು ಪಡೆಯಲಿಲ್ಲ. ಬದಲಾಗಿ ತಮ್ಮ ದುಷ್ಕೃತ್ಯಗಳಿಂದಾಗಿ ಕೊನೆಗೆ ನರಕಕ್ಕೆ ಅರ್ಹರಾದರು.

51. "ಉತ್ತಮ ಹೆಸರುಗಳು" ಎಂದರೆ ದೇವನ ಮಹಾನತೆ, ಶ್ರೇಷ್ಠತೆ, ಪಾವಿತ್ರ್ಯ, ಪಾವನತೆ ಮತ್ತು ಅವನ ಸಮಗ್ರ ಗುಣವಿಶೇಷತೆಗಳು ಪ್ರಕಟಗೊಳ್ಳುವ ಹೆಸರುಗಳಾಗಿವೆ. "ಅಲ್ಲಾಹನಿಗೆ ಹೆಸರುಗಳನ್ನಿಡುವುದರಲ್ಲಿ ಸತ್ಯದಿಂದ ವಿಮುಖನಾಗುವುದು" ಎಂದರೆ ದೇವನ ಸ್ಥಾನಕ್ಕೆ ಒಗ್ಗದ, ಅವನ ಘನತೆಗೆ ತಕ್ಕುದಲ್ಲದ, ದೋಷ ಮತ್ತು ಕುಂದುಕೊರತೆಗಳನ್ನು ಬಿಂಬಿಸುವ ಅಥವಾ ಆ ಮಹಾಮಹಿಮನ ಬಗ್ಗೆ ತಪ್ಪಾದ ವಿಶ್ವಾಸ ಮತ್ತು ಶ್ರದ್ಧೆಯನ್ನು ಪ್ರಕಟಿಸುವಂತಹ ಹೆಸರುಗಳು.

52. ಇಲ್ಲಿ 'ಸಂಗಾತಿ' ಎಂದರೆ ಪ್ರವಾದಿವರ್ಯರು(ಸ) ಅವರನ್ನು ಮಕ್ಕಾದ ಜನರ ಸಂಗಾತಿಯೆಂದು ಏಕೆ ಹೇಳಲಾಗಿದೆಯೆಂದರೆ ಅವರು ಮಕ್ಕಾದವರ ಪಾಲಿಗೆ ಅಪರಿಚಿತರಾಗಿರಲಿಲ್ಲ. ಅವರ ಮಧ್ಯೆಯೇ ಪ್ರವಾದಿವರ್ಯರು(ಸ) ಹುಟ್ಟಿದರು. ಅವರ ನಡುವೆಯೇ ಜೀವಿಸಿ ಬಾಲ್ಯ, ಯೌವನ ಮತ್ತು ವೃದ್ಧಾಪ್ಯವನ್ನು ಕಳೆದರು. ಪ್ರವಾದಿತ್ವಕ್ಕೆ ಮೊದಲು ಅವರ ಇಡೀ ಜನಾಂಗ ಅವರನ್ನೊಬ್ಬ ಸಚ್ಚರಿತ ಮತ್ತು

185. ಇವರು ಭೂಮಿ-ಆಕಾಶಗಳ ವ್ಯವಸ್ಥೆಯ ಕುರಿತು ಎಂದಾದರೂ ವಿವೇಚಿಸಲಿಲ್ಲವೇ? ಅಲ್ಲಾಹನು ಸೃಷ್ಟಿಸಿರುವ ಯಾವ ವಸ್ತುವನ್ನೇ ಆದರೂ ಕಣ್ತೆರೆದು ನೋಡಲಿಲ್ಲವೇ? ಪ್ರಾಯಶಃ ಇವರ ಜೀವನಾವಧಿಯು ಪೂರ್ಣಗೊಳ್ಳುವ ಕಾಲ ಸಮೀಪಿಸಿರಬಹುದೆಂಬುದನ್ನು ಇವರು ಯೋಚಿಸಲಿಲ್ಲವೇ? ಪ್ರವಾದಿಯವರ ಈ ಎಚ್ಚರಿಕೆಯ ಬಳಿಕವೂ (ವಿಶ್ವಾಸ ವಿಡದವರು) ಇನ್ನಾವ ಮಾತಿನಿಂದ ವಿಶ್ವಾಸವಿಡಬಹುದು?

اَوَلَمْ يَنْظُرُوْا فِيْ مَلَكُوْتِ السَّمٰوٰتِ وَالْاَرْضِ
وَمَا خَلَقَ اللّٰهُ مِنْ شَيْءٍ ۙ وَّاَنْ عَسٰۤى اَنْ
يَّكُوْنَ قَدِ اقْتَرَبَ اَجَلُهُمْ ۚ فَبِاَيِّ حَدِيْثٍۭ
بَعْدَهٗ يُؤْمِنُوْنَ ﴿١٨٥﴾

186. ಅಲ್ಲಾಹನು ಮಾರ್ಗದರ್ಶನದಿಂದ ಯಾರನ್ನಾದರೂ ವಂಚಿಸಿ ಬಿಟ್ಟರೆ ಅವನಿಗೆ ಇನ್ನಾರೂ ಮಾರ್ಗದರ್ಶಕನಿಲ್ಲ ಮತ್ತು ಅಲ್ಲಾಹನು ಅವರನ್ನು ಅವರ ಉದ್ಧಟತನದಲ್ಲೇ ಅಲೆದಾಡುತ್ತಿರಲು ಬಿಟ್ಟುಬಿಡುತ್ತಾನೆ.

مَنْ يُّضْلِلِ اللّٰهُ فَلَا هَادِيَ لَهٗ ۚ وَيَذَرُهُمْ
فِيْ طُغْيَانِهِمْ يَعْمَهُوْنَ ﴿١٨٦﴾

187. ಆ ನಿರ್ಣಾಯಕ ದಿನದ ಘಳಿಗೆ ಬರುವುದಾದರೂ ಯಾವಾಗ? ಎಂದು ಇವರು ನಿಮ್ಮೊಡನೆ ಕೇಳುತ್ತಾರೆ. "ಅದರ ಜ್ಞಾನವು ನನ್ನ ಪ್ರಭುವಿನ ಬಳಿಯೇ ಇದೆ. ಅದನ್ನು ಅದರ ನಿಶ್ಚಿತ ಸಮಯದಲ್ಲಿ ಅವನೇ ಪ್ರಕಟಗೊಳಿಸುವನು. ಭೂಮಿ-ಆಕಾಶಗಳಲ್ಲಿ ಅದು ಅತ್ಯಂತ ಕಠಿಣ ಕಾಲವಾಗಿರುವುದು. ಅದು ನಿಮ್ಮ ಮೇಲೆ ಹಠಾತ್ತನೆ ಬರುವುದು" ಎಂದು ಹೇಳಿರಿ. ನೀವು ಅದರ ಶೋಧನೆಯಲ್ಲೇ ಬಿದ್ದಿರುವಿರೋ ಎಂಬಂತೆ ಇವರು ಅದರ ಕುರಿತಾಗಿ ನಿಮ್ಮೊಡನೆ ಪ್ರಶ್ನಿಸುತ್ತಾರೆ. ಹೇಳಿರಿ: "ಅದರ ಅರಿವು ಅಲ್ಲಾಹನಿಗೆ ಮಾತ್ರವಿದೆ. ಆದರೆ ಹೆಚ್ಚಿನವರು ಈ ವಾಸ್ತವಿಕತೆಯಿಂದ ಅಜ್ಞರಾಗಿದ್ದಾರೆ."

يَسْـَٔلُوْنَكَ عَنِ السَّاعَةِ اَيَّانَ مُرْسٰىهَا ۚ قُلْ
اِنَّمَا عِلْمُهَا عِنْدَ رَبِّيْ ۚ لَا يُجَلِّيْهَا لِوَقْتِهَاۤ
اِلَّا هُوَ ۚؔ ثَقُلَتْ فِي السَّمٰوٰتِ وَالْاَرْضِ ۚ
لَا تَاْتِيْكُمْ اِلَّا بَغْتَةً ۚ يَسْـَٔلُوْنَكَ كَاَنَّكَ
حَفِيٌّ عَنْهَا ۚ قُلْ اِنَّمَا عِلْمُهَا عِنْدَ اللّٰهِ
وَلٰكِنَّ اَكْثَرَ النَّاسِ لَا يَعْلَمُوْنَ ﴿١٨٧﴾

188. ಓ ಪೈಗಂಬರರೇ, ಇವರೊಡನೆ ಹೀಗೆ ಹೇಳಿರಿ: "ನನ್ನ ಸ್ವಂತ ಹಿತಾಹಿತಗಳ ಅಧಿಕಾರ ನನಗಿಲ್ಲ. ಅಲ್ಲಾಹನು ಯಾವುದನ್ನು ಇಚ್ಛಿಸುತ್ತಾನೋ ಅದು ಆಗುತ್ತದೆ. ಮತ್ತು ನನಗೆ 'ಪರೋಕ್ಷ ಜ್ಞಾನ'ವಿರುತ್ತಿದ್ದರೆ ನಾನು ಅನೇಕ ಲಾಭಗಳನ್ನು ನನಗಾಗಿ ಒದಗಿಸಿಕೊಳ್ಳುತ್ತಿದ್ದೆ ಮತ್ತು ನನಗೆಂದೂ ಹಾನಿ ತಟ್ಟುತ್ತಿರಲಿಲ್ಲ. ನನ್ನ ಮಾತಿನ ಮೇಲೆ ವಿಶ್ವಾಸವಿಡುವವರಿಗೆ ನಾನು ಕೇವಲ ಎಚ್ಚರಿಕೆ ಕೊಡುವವನೂ ಸುವಾರ್ತೆ ನೀಡುವವನೂ ಆಗಿರುತ್ತೇನೆ."

قُلْ لَّاۤ اَمْلِكُ لِنَفْسِيْ نَفْعًا وَّلَا ضَرًّا اِلَّا
مَا شَآءَ اللّٰهُ ۚ وَلَوْ كُنْتُ اَعْلَمُ الْغَيْبَ
لَاسْتَكْثَرْتُ مِنَ الْخَيْرِ ۚۛ وَمَا مَسَّنِيَ
السُّوْٓءُ ۚۛ اِنْ اَنَا اِلَّا نَذِيْرٌ وَّبَشِيْرٌ
لِّقَوْمٍ يُّؤْمِنُوْنَ ﴿١٨٨﴾

ಸದ್ಬುದ್ಧಿಯಿರುವ ವ್ಯಕ್ತಿಯೆಂಬ ನೆಲೆಯಿಂದ ಅರಿತಿತ್ತು. ಆದರೆ ಪ್ರವಾದಿತ್ವದ ನಂತರ ಅವರು ದೇವಸಂದೇಶವನ್ನು ತಲಪಿಸಲು ಆರಂಭಿಸಿದಾಗ ಇದ್ದಕ್ಕಿದ್ದಂತೆಯೇ ಅವರನ್ನು ಹುಚ್ಚನೆನ್ನಲಾಯಿತು. ಅವರು ಹುಚ್ಚನೆನ್ನುತ್ತಿದ್ದುದು ಪ್ರವಾದಿತ್ವಕ್ಕೆ ಮೊದಲಿನ ಅವರ ಮಾತುಗಳ ಕುರಿತಾಗಿರಲಿಲ್ಲ. ಬದಲಾಗಿ ಪ್ರವಾದಿತ್ವದ ನಂತರದ ಅವರ ಸಂದೇಶದ ಕುರಿತಾಗಿತ್ತು ಎಂದು ಇದರಿಂದ ವ್ಯಕ್ತವಾಗುತ್ತದೆ. ಆದ್ದರಿಂದಲೇ "ಈ ಮಾತುಗಳಲ್ಲಿ ಹುಚ್ಚಿನ ಯಾವ ಅಂಶವಿದೆ? ಅವರೆಂದಾದರೂ ಆಲೋಚಿಸಿದ್ದಾರೆಯೇ?" ಎಂದು ಇಲ್ಲಿ ಕೇಳಲಾಗುತ್ತಿದೆ.

189. ನಿಮ್ಮನ್ನು ಒಂದು ವ್ಯಕ್ತಿಯಿಂದ ಸೃಷ್ಟಿಸಿದವನು ಅಲ್ಲಾಹನೇ ಆಗಿರುತ್ತಾನೆ ಮತ್ತು ಅವನು ಅದೇ ವ್ಯಕ್ತಿಯಿಂದ ಅದರ ಜೋಡಿಯನ್ನು ಉಂಟು ಮಾಡಿದನು. (ಇದು) ಅವಳಿಂದ ಮನಶ್ಶಾಂತಿ ಪಡೆಯಲಿಕ್ಕಾಗಿ. ಅನಂತರ ಪುರುಷನು ಸ್ತ್ರೀಯೊಂದಿಗೆ ಸಂಯೋಗಿಸಿದಾಗ ಅವಳಿಗೆ ಒಂದು ಲಘುವಾದ ಗರ್ಭಧಾರಣೆ ಯಾಯಿತು. ಅವಳು ಅದನ್ನು ಹೊತ್ತುಕೊಂಡೇ ನಡೆಯುತ್ತಿದ್ದಳು. ಅದು ಭಾರವಾದಾಗ ಅವರಿಬ್ಬರು ಒಟ್ಟಾಗಿ ತಮ್ಮ ಪ್ರಭುವಾದ ಅಲ್ಲಾಹನೊಡನೆ, "ನೀನು ನಮಗೆ ಉತ್ತಮ ಮಗುವನ್ನಿತ್ತರೆ ನಾವು ನಿನಗೆ ಕೃತಜ್ಞರಾಗುವೆವು" ಎಂದು ಪ್ರಾರ್ಥಿಸಿದರು.

هُوَ الَّذِيْ خَلَقَكُمْ مِّنْ نَّفْسٍ وَّاحِدَةٍ
وَّجَعَلَ مِنْهَا زَوْجَهَا لِيَسْكُنَ اِلَيْهَا ۚ
فَلَمَّا تَغَشّٰىهَا حَمَلَتْ حَمْلًا خَفِيْفًا فَمَرَّتْ
بِهٖ ۚ فَلَمَّآ اَثْقَلَتْ دَّعَوَا اللّٰهَ رَبَّهُمَا لَئِنْ
اٰتَيْتَنَا صَالِحًا لَّنَكُوْنَنَّ مِنَ الشّٰكِرِيْنَ ﴿١٨٩﴾

190. ಆದರೆ ಅಲ್ಲಾಹನು ಅವರಿಗೊಂದು ಉತ್ತಮ ಮಗುವನ್ನು ನೀಡಿದಾಗ ಅವರು ಅವನ ಕೊಡುಗೆಯಲ್ಲಿ ಇತರರನ್ನು ಅವನ ಸಹಭಾಗಿಗಳಾಗಿ ಮಾಡತೊಡಗಿದರು.[53] ಅಲ್ಲಾಹನು, ಅವರು ಸಹಭಾಗಿಗಳಾಗಿಸುವ ವಿಷಯಗಳಿಗಿಂತ ಅತ್ಯುನ್ನತನಾಗಿರುತ್ತಾನೆ.

فَلَمَّآ اٰتٰىهُمَا صَالِحًا جَعَلَا لَهٗ شُرَكَآءَ
فِيْمَآ اٰتٰىهُمَا ۚ فَتَعٰلَى اللّٰهُ عَمَّا يُشْرِكُوْنَ ﴿١٩٠﴾

191. ಯಾವುದನ್ನೂ ಸೃಷ್ಟಿಸಲಾಗದೆ ಸ್ವತಃ ಸೃಷ್ಟಿಸಲ್ಪಟ್ಟವುಗಳನ್ನು ಅಲ್ಲಾಹನ ಸಹಭಾಗಿಗಳಾಗಿ ಮಾಡುವವರು ಎಂತಹ ತಿಳಿಗೇಡಿಗಳು?

اَيُشْرِكُوْنَ مَا لَا يَخْلُقُ شَيْـًٔا وَّهُمْ يُخْلَقُوْنَ ۖ﴿١٩١﴾

192. ಅವು ಇವರಿಗೆ ಸಹಾಯ ಮಾಡಲಾರವು. ಸ್ವತಃ ತಮ್ಮ ಸಹಾಯ ಮಾಡಿಕೊಳ್ಳಲೂ ಅಶಕ್ತವಾಗಿವೆ.

وَلَا يَسْتَطِيْعُوْنَ لَهُمْ نَصْرًا وَّلَآ
اَنْفُسَهُمْ يَنْصُرُوْنَ ﴿١٩٢﴾

193. ನೀವು ಅವರನ್ನು ಸನ್ಮಾರ್ಗದ ಕಡೆಗೆ ಬರಲು ಕರೆಕೊಟ್ಟರೆ ಅವರು ನಿಮ್ಮನ್ನು ಹಿಂಬಾಲಿಸಲಾರರು. ನೀವು ಅವರನ್ನು ಕರೆದರೂ ಕರೆಯದಿದ್ದರೂ ಎರಡೂ ನಿಮ್ಮ ಮಟ್ಟಿಗೆ ಸರಿಸಮಾನ ವಿರುವುದು.[54]

وَاِنْ تَدْعُوْهُمْ اِلَى الْهُدٰى لَا يَتَّبِعُوْكُمْ ۗ
سَوَآءٌ عَلَيْكُمْ اَدَعَوْتُمُوْهُمْ اَمْ
اَنْتُمْ صَامِتُوْنَ ﴿١٩٣﴾

53. ಅರ್ಥಾತ್- ಸಂತಾನ ಭಾಗ್ಯವನ್ನು ನೀಡುವವನು ಅಲ್ಲಾಹನಾಗಿದ್ದಾನೆ. ಮಹಿಳೆಯ ಉದರದಲ್ಲಿ ಅಲ್ಲಾಹನು ಹಾವು, ಕೋತಿ ಅಥವಾ ವಿಚಿತ್ರ ಪ್ರಾಣಿಯೊಂದನ್ನು ಸೃಷ್ಟಿಸಿದರೆ ಯಾರಿಗೂ ಅದರ ಆಕಾರವನ್ನು ಬದಲಿಸಲು ಸಾಧ್ಯವಿಲ್ಲ ಅಥವಾ ಮಗುವನ್ನು ಗರ್ಭದಲ್ಲೇ ಅವನು ಕುರುಡ, ಕಿವುಡ, ಕುಂಟ ಅಥವಾ ಅಂಗವಿಕಲನಾಗಿ ಮಾಡಿದರೆ ಇಲ್ಲವೇ ಅದರ ದೈಹಿಕ, ಮಾನಸಿಕ ಶಕ್ತಿಗಳಲ್ಲಿ ಯಾವುದಾದರೂ ದೌರ್ಬಲ್ಯವನ್ನು ಉಂಟುಮಾಡಿದರೆ ಅದನ್ನು ಬದಲಾಯಿಸಲು ಯಾರೂ ಶಕ್ತರಲ್ಲ. ಬಹುದೇವಾರಾಧಕರೂ ಏಕದೇವಾರಾಧಕರಷ್ಟೇ ಈ ಸತ್ಯವನ್ನು ಅರಿತಿದ್ದಾರೆ. ಆದ್ದರಿಂದಲೇ ಗರ್ಭಾವಸ್ಥೆಯಲ್ಲಿ ಆರೋಗ್ಯವಂತ ಮಗು ಹುಟ್ಟುವ ಬಗ್ಗೆ ಅಲ್ಲಾಹನಲ್ಲಿಯೇ ಪೂರ್ಣ ಭರವಸೆಯಿರಿಸಲಾಗುತ್ತದೆ. ಆದರೆ ಅವರ ಭರವಸೆ ಈಡೇರಿ ಚಂದಿರನಂತಹ ಮಗು ಹುಟ್ಟಿದರೆ ಕೃತಜ್ಞತಾರ್ಪಣೆಗಾಗಿ ದೇವಿ, ದೇವತೆ, ಅವತಾರ ಮತ್ತು ಪುಣ್ಯಪುರುಷರ ಹೆಸರಲ್ಲಿ ಹರಕೆ ಒಪ್ಪಿಸಲಾಗುತ್ತದೆ. ಅದು ದೇವೇತರರ ಕೃಪೆಯಿಂದಾಗಿ ಹುಟ್ಟಿದೆಯೇನೋ ಎಂಬಂತಹ ಹೆಸರನ್ನು ಅದಕ್ಕೆ ಇಡಲಾಗುತ್ತದೆ.

54. ಅರ್ಥಾತ್- ಈ ಬಹುದೇವಾರಾಧಕರ ಮಿಥ್ಯ ಆರಾಧ್ಯರುಗಳು ತಮ್ಮ ಭಕ್ತರಿಗೆ ಸನ್ಮಾರ್ಗ ತೋರುವುದಂತಿರಲಿ, ಸ್ವತಃ ಯಾವುದೋ

194. ನೀವು ಅಲ್ಲಾಹನನ್ನು ಬಿಟ್ಟು ಯಾರನ್ನು ಕೂಗಿ ಕರೆಯುತ್ತೀರೋ ಅವರೂ ನಿಮ್ಮಂತಿರುವ ದಾಸರೇ. ಅವರ ಬಗ್ಗೆ ನಿಮ್ಮ ವಿಚಾರಗಳು ಸರಿಯಾಗಿದ್ದರೆ ನೀವು ಅವರನ್ನೊಮ್ಮೆ ಪ್ರಾರ್ಥಿಸಿ, ನಿಮ್ಮ ಪ್ರಾರ್ಥನೆಗೆ ಉತ್ತರ ಕೊಡುತ್ತಾರೋ ನೋಡಿರಿ.

إِنَّ الَّذِينَ تَدْعُونَ مِنْ دُونِ اللَّهِ عِبَادٌ
أَمْثَالُكُمْ فَادْعُوهُمْ فَلْيَسْتَجِيبُوا لَكُمْ
إِنْ كُنْتُمْ صَادِقِينَ ١٩٤

195. ಅವರಿಗೆ ನಡೆಯಲು ಕಾಲುಗಳಿವೆಯೇ? ಅವರಿಗೆ ಹಿಡಿಯಲು ಕೈಗಳಿವೆಯೇ? ಅವರಿಗೆ ನೋಡಲು ಕಣ್ಣುಗಳಿವೆಯೇ? ಅವರಿಗೆ ಕೇಳಲು ಕಿವಿಗಳಿವೆಯೇ? ಓ ಪೈಗಂಬರರೇ, ಇವರೊಡನೆ ಹೇಳಿರಿ: ನೀವು (ಅಲ್ಲಾಹನ) ಭಾಗೀದಾರರಾಗಿಸಿದವರನ್ನು ಕರೆದುಕೊಳ್ಳಿರಿ. ತರುವಾಯ ನೀವೆಲ್ಲರೂ ಸೇರಿ ನನ್ನ ವಿರುದ್ಧ ಕಾರ್ಯಾಚರಣೆ ನಡೆಸಿರಿ ಮತ್ತು ನನಗೆ ಕಿಂಚಿತ್ತೂ ಕಾಲಾವಕಾಶ ಕೊಡಬೇಡಿರಿ.

أَلَهُمْ أَرْجُلٌ يَمْشُونَ بِهَا أَمْ لَهُمْ
أَيْدٍ يَبْطِشُونَ بِهَا أَمْ لَهُمْ أَعْيُنٌ
يُبْصِرُونَ بِهَا أَمْ لَهُمْ آذَانٌ يَسْمَعُونَ
بِهَا قُلِ ادْعُوا شُرَكَاءَكُمْ ثُمَّ كِيدُونِ
فَلَا تُنْظِرُونِ ١٩٥

196. ಅಲ್ಲಾಹನೇ ನನ್ನ ರಕ್ಷಕ ಮಿತ್ರನು. ಅವನು ಈ ಗ್ರಂಥವನ್ನು ಅವತೀರ್ಣಗೊಳಿಸಿರುವನು. ಅವನು ಸಜ್ಜನರನ್ನು ಸಂರಕ್ಷಿಸುತ್ತಾನೆ.

إِنَّ وَلِيِّيَ اللَّهُ الَّذِي نَزَّلَ الْكِتَابَ وَهُوَ
يَتَوَلَّى الصَّالِحِينَ ١٩٦

197. ಇದಕ್ಕೆ ವ್ಯತಿರಿಕ್ತವಾಗಿ ನೀವು ಅಲ್ಲಾಹನನ್ನು ಬಿಟ್ಟು ಯಾರನ್ನು ಕರೆಯುತ್ತೀರೋ ಅವರು ನಿಮಗೂ ಸಹಾಯವನ್ನು ಮಾಡಲಾರರು ಮತ್ತು ತಮಗೆ ಸ್ವಯಂ ಸಹಾಯ ಮಾಡಿಕೊಳ್ಳಲಿಕ್ಕೂ ಅಶಕ್ತರು.

وَالَّذِينَ تَدْعُونَ مِنْ دُونِهِ لَا يَسْتَطِيعُونَ
نَصْرَكُمْ وَلَا أَنْفُسَهُمْ يَنْصُرُونَ ١٩٧

198. ನೀವು ಅವರನ್ನು ನೇರಮಾರ್ಗಕ್ಕೆ ಬರಲು ಹೇಳಿದರೆ, ನಿಮ್ಮ ಮಾತನ್ನು ಕೇಳಲಿಕ್ಕೂ ಅವರಿಂದ ಸಾಧ್ಯವಿಲ್ಲ. ಅವರು ನಿಮ್ಮೆಡೆಗೆ ನೋಡುತ್ತಿರುವಂತೆ ತೋರುತ್ತದೆ ಆದರೆ ವಾಸ್ತವದಲ್ಲಿ ಅವರು ಏನನ್ನೂ ನೋಡುವುದಿಲ್ಲ.

وَإِنْ تَدْعُوهُمْ إِلَى الْهُدَىٰ لَا يَسْمَعُوا
وَتَرَاهُمْ يَنْظُرُونَ إِلَيْكَ وَهُمْ لَا يُبْصِرُونَ ١٩٨

199. ಓ ಪೈಗಂಬರರೇ, ಕ್ಷಮಾಶೀಲರಾಗಿರಿ. ಸರ್ವವಿಧಿತ ಒಳಿತುಗಳನ್ನು ಬೋಧಿಸಿರಿ ಮತ್ತು ತಿಳಿಗೇಡಿಗಳೊಡನೆ ಜಗಳಾಡಬೇಡಿರಿ.

خُذِ الْعَفْوَ وَأْمُرْ بِالْعُرْفِ وَأَعْرِضْ
عَنِ الْجَاهِلِينَ ١٩٩

200. ಶೈತಾನನು ನಿಮ್ಮನ್ನೆಂದಾದರೂ ಪ್ರಚೋದಿಸಿದರೆ ಅಲ್ಲಾಹನ ಅಭಯ ಯಾಚಿಸಿರಿ. ಅವನು ಸಕಲವನ್ನೂ ಆಲಿಸುವವನೂ ಅರಿಯುವವನೂ ಆಗಿರುತ್ತಾನೆ.

وَإِمَّا يَنْزَغَنَّكَ مِنَ الشَّيْطَانِ نَزْغٌ
فَاسْتَعِذْ بِاللَّهِ إِنَّهُ سَمِيعٌ عَلِيمٌ ٢٠٠

ಸನ್ಮಾರ್ಗದರ್ಶಿಯ ಅನುಸರಣೆ ಮಾಡಲಿಕ್ಕೂ ಅವುಗಳಿಗೆ ಸಾಧ್ಯವಿಲ್ಲ. ಕೂಗಿ ಕರೆಯುವವನ ಪ್ರಾರ್ಥನೆಗೂ ಅವು ಉತ್ತರಿಸುವುದಿಲ್ಲ.

201. ವಾಸ್ತವದಲ್ಲಿ ಧರ್ಮನಿಷ್ಠರಾದವರಿಗೆ ಶೈತಾನನ ಪ್ರಭಾವದಿಂದ ದುರಾಲೋಚನೆಗಳು ಸೋಂಕಿದರೂ ಅವರು ತಕ್ಷಣ ಜಾಗ್ರತರಾಗುತ್ತಾರೆ ಮತ್ತು ಅವರಿಗೆ ಸರಿಯಾದ ಕರ್ಮ ವಿಧಾನ ಯಾವುದೆಂದು ಸ್ಪಷ್ಟವಾಗಿ ತೋರುತ್ತದೆ.

إِنَّ الَّذِينَ اتَّقَوْا إِذَا مَسَّهُمْ طَائِفٌ مِّنَ
الشَّيْطَانِ تَذَكَّرُوا فَإِذَا هُم مُّبْصِرُونَ ﴿٢٠١﴾

202. ಇನ್ನು ಅವರ (ಶೈತಾನರ) ಸಹೋದರರು- ಅವರು ಅವರನ್ನು ಕುಟಿಲ ಮಾರ್ಗದಲ್ಲಿ ಎಳೆದೊಯ್ಯುತ್ತಾರೆ ಮತ್ತು ಅವರನ್ನು ದಾರಿ ತಪ್ಪಿಸುವುದರಲ್ಲಿ ಏನೂ ಲೋಪವಿರಿಸುವುದಿಲ್ಲ.

وَإِخْوَانُهُمْ يَمُدُّونَهُمْ فِي الْغَيِّ ثُمَّ
لَا يُقْصِرُونَ ﴿٢٠٢﴾

203. ಓ ಪೈಗಂಬರರೇ, ನೀವು ಇವರ ಮುಂದೆ ಯಾವುದಾದರೂ ನಿದರ್ಶನ(ಪವಾಡ)ವನ್ನು ಇರಿಸದಿದ್ದರೆ ನೀವು ನಿಮಗಾಗಿ ಯಾವುದಾದರೂ ನಿದರ್ಶನವನ್ನು ಆರಿಸಿಕೊಳ್ಳಲಿಲ್ಲವೇಕೆ? ಎಂದು ಇವರು ಕೇಳುತ್ತಾರೆ. ಅವರೊಡನೆ ಹೇಳಿರಿ:- "ನಾನು, ನನ್ನ ಪ್ರಭು ನನಗೆ ಅವತೀರ್ಣಗೊಳಿಸಿದ 'ದಿವ್ಯವಾಣಿ'ಯನ್ನು ಮಾತ್ರ ಅನುಸರಿಸುತ್ತೇನೆ. ಇವು ನಿಮ್ಮ ಪ್ರಭುವಿನ ಕಡೆಯಿಂದ ಜ್ಞಾನ ಪ್ರಕಾಶಗಳಾಗಿರುತ್ತವೆ ಮತ್ತು ಅವುಗಳನ್ನು ಸ್ವೀಕರಿಸಿಕೊಳ್ಳುವವರಿಗೆ ಮಾರ್ಗದರ್ಶನ ಮತ್ತು ಅನುಗ್ರಹವಾಗಿರುತ್ತವೆ.

وَإِذَا لَمْ تَأْتِهِم بِآيَةٍ قَالُوا لَوْلَا
اجْتَبَيْتَهَا ۚ قُلْ إِنَّمَا أَتَّبِعُ مَا يُوحَىٰ إِلَيَّ
مِن رَّبِّي ۚ هَٰذَا بَصَائِرُ مِن رَّبِّكُمْ
وَهُدًى وَرَحْمَةٌ لِّقَوْمٍ يُؤْمِنُونَ ﴿٢٠٣﴾

204. ನಿಮ್ಮ ಮುಂದೆ ಕುರ್‌ಆನ್ ಓದಿದಾಗ ಅದನ್ನು ಲಕ್ಷ್ಯವಿಟ್ಟು ಕೇಳಿರಿ ಮತ್ತು ಮೌನವಾಗಿರಿ. ನೀವು ಅನುಗ್ರಹೀತರಾಗಬಹುದು.

وَإِذَا قُرِئَ الْقُرْآنُ فَاسْتَمِعُوا لَهُ وَ
أَنصِتُوا لَعَلَّكُمْ تُرْحَمُونَ ﴿٢٠٤﴾

205. ಓ ಪೈಗಂಬರರೇ, ನಿಮ್ಮ ಪ್ರಭುವನ್ನು ಸಂಜೆ ಮುಂಜಾನೆಗಳಲ್ಲಿ ಮನಸ್ಸಿನೊಳಗೂ ಭಯಭರಿತರಾಗಿಯೂ ಮೆಲುದನಿಯೊಂದಿಗೂ ಸ್ಮರಿಸುತ್ತಲಿರಿ; ಅಸಡ್ಡೆಯಲ್ಲಿ ಬಿದ್ದಿರುವವರಲ್ಲಾಗಬೇಡಿರಿ.

وَاذْكُر رَّبَّكَ فِي نَفْسِكَ تَضَرُّعًا وَخِيفَةً
وَدُونَ الْجَهْرِ مِنَ الْقَوْلِ بِالْغُدُوِّ
وَالْآصَالِ وَلَا تَكُن مِّنَ الْغَافِلِينَ ﴿٢٠٥﴾

206. ನಿಮ್ಮ ಪ್ರಭುವಿನ ಸಾಮೀಪ್ಯವನ್ನು ಹೊಂದಿದ ದೇವಚರರು ಎಂದೂ ತಮ್ಮ ಹಿರಿಮೆಯ ಅಹಂಭಾವದಲ್ಲಿ ಬಿದ್ದು ಅವನ ದಾಸ್ಯ-ಆರಾಧನೆಯಿಂದ ವಿಮುಖರಾಗುವುದಿಲ್ಲ. ಅವರು ಅವನ ಕೀರ್ತನೆ ಮಾಡುತ್ತಾರೆ ಮತ್ತು ಅವನ ಮುಂದೆ ಸಾಷ್ಟಾಂಗ ವೆರಗಿಕೊಂಡಿರುತ್ತಾರೆ.[55]

إِنَّ الَّذِينَ عِندَ رَبِّكَ لَا يَسْتَكْبِرُونَ
عَنْ عِبَادَتِهِ وَيُسَبِّحُونَهُ وَلَهُ يَسْجُدُونَ ۩ ﴿٢٠٦﴾

55. ಈ ಸೂಕ್ತವನ್ನು ಓದುವ ಅಥವಾ ಕೇಳುವ ವ್ಯಕ್ತಿಯು ಸಾಷ್ಟಾಂಗವೆರಗಬೇಕೆಂಬ ಆದೇಶವಿದೆ. ಕುರ್‌ಆನಿನ 14 ಸ್ಥಳದಲ್ಲಿ ಇಂತಹ ಸಾಷ್ಟಾಂಗದ ಸೂಕ್ತಗಳು ಬಂದಿವೆ.